RNI No. KARBIL/2001/47147

# ಕರ್ನಾಟಕ ಸರ್ಕಾರ

## ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ



| ಭಾಗ–IVA | ಬೆಂಗಳೂರು, ಶನಿವಾರ, ಡಿಸೆಂಬರ್ ೨೧, ೨೦೧೯ (ಮಾರ್ಗಶಿರ ೩೦, ಶಕ ವರ್ಷ ೧೯೪೦) | ನಂ. ೧೦೮೧ |
|---|---|---|
| Part–IVA | Bengaluru,Saturday, December 21, 2019 (Margashira 30, Shaka Varsha 1940) | No. 1081 |



**ಸಂಸದೀಯ ವ್ಯವಹಾರಗಳ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 34 ರಾಶಾಪ್ರ 2019, ಬೆಂಗಳೂರು, ದಿನಾಂಕ: 21.12.2019**

The Karnataka Excise Act, 1965 (Karnataka Act 21 of 1966) ಇದರ ಅಧಿಕೃತ ಕನ್ನಡ ಭಾಷಾಂತರವನ್ನು the Karnataka Official Language Act, 1963ರ ಪ್ರಕರಣ 5A ಅಡಿಯಲ್ಲಿ ರಾಜ್ಯಪಾಲರ ಅಧಿಕಾರದ ಮೇರೆಗೆ ಸಾರ್ವಜನಿಕರ ಮಾಹಿತಿಗಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲು ಆದೇಶಿಸಲಾಗಿದೆ.

**ಕರ್ನಾಟಕ ಅಬ್ಕಾರಿ ಅಧಿನಿಯಮ, 1965**

**ಉದ್ದೇಶಗಳು ಮತ್ತು ಕಾರಣಗಳು/ ಹೇಳಿಕೆಗಳು ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು**

**ಅಧ್ಯಾಯ – I**

**ಪ್ರಾರಂಭಿಕ**


1. ಸಂಕ್ಷಿಪ್ತ, ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ
2. ಪರಿಭಾಷೆಗಳು


**ಅಧ್ಯಾಯ –II**

**ಸಿಬ್ಬಂದಿ ಮತ್ತು ನಿಯಂತ್ರಣ**


3. ಅಬ್ಕಾರಿ ಕಮಿಶನರನ ನೇಮಕ
4. ಡೆಪ್ಯುಟಿ ಕಮಿಶನರು
4ಎ. ಅಬ್ಕಾರಿ ಜಂಟಿ ಕಮೀಷನರು ಮತ್ತು ಅಬ್ಕಾರಿ ಡೆಪ್ಯೂಟಿ ಕಮೀಷನರು.
5. ಅಬ್ಕಾರಿ ಸೂಪರಿಂಟೆಂಡೆಂಟರ ಮತ್ತು ಡೆಪ್ಯೂಟಿ ಸೂಪರಿಂಟೆಂಡೆಂಟರ ನೇಮಕ.
5ಎ. ಗುಪ್ತ ವಾರ್ತಾ ವಿಭಾಗದ ರಚನೆ ಮತ್ತು (ಗುಪ್ತ ವಾರ್ತಾ ವಿಭಾಗದ) ಅಬ್ಕಾರಿ ಸೂಪರಿಂಟೆಂಡೆಂಟರ ಮತ್ತು ಡೆಪ್ಯುಟಿ ಸೂಪರಿಂಟೆಂಡೆಂಟರ ನೇಮಕ.
6. ಅಬ್ಕಾರಿ ಇನ್ಸ್‌ಪೆಕ್ಟರುಗಳ ಮತ್ತು ಅಬ್ಕಾರಿ ಸಬ್ ಇನ್ಸ್‌ಪೆಕ್ಟರುಗಳ ಮತ್ತು ಇತರ ಅಧೀನ ಅಧಿಕಾರಿಗಳ ನೇಮಕ
7. ಅಧಿಕಾರಗಳ ಪ್ರತ್ಯಾಯೋಜನೆ


**ಅಧ್ಯಾಯ – III**

**ಆಮದು, ರಫ್ತು ಮತ್ತು ಸಾಗಾಣಿಕೆ**


8. ಮಾದಕದ ಆಮದು
9. ಮಾದಕದ ರಫ್ತು
10. ಮಾದಕದ ಸಾಗಾಣಿಕೆಯ ನಿಷೇಧ
11. ಮಾದಕದ ಸಾಗಾಣಿಕೆ
12. ಸಾಗಾಣಿಕೆಗೆ ಅನುಮತಿ ಪತ್ರಗಳು

## ಅಧ್ಯಾಯ – IV
## ತಯಾರಿಕೆ, ಸ್ವಾಧೀನ ಮತ್ತು ಮಾರಾಟ


13. ಲೈಸೆನ್ಸಿನ ಅಡಿಯಲ್ಲಿ ಹೊರತುಪಡಿಸಿ ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳ ತಯಾರಿಕೆ ಇತ್ಯಾದಿಗಳ ನಿಷೇಧ
13.ಎ ಲೈಸೆನ್ಸನ್ನು ಪಡೆಯದ ಹೊರತು ನೀರಾ ಮತ್ತು ನೀರಾ ಉತ್ಪನ್ನಗಳ ಉತ್ಪಾದನೆ ಇತ್ಯಾದಿಯ ನಿಷೇದ
14. ನಿಯಮಿಸಿದುದಕ್ಕಿಂತ ಹೆಚ್ಚು ಪರಿಣಾಮದಲ್ಲಿ ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳ ಸ್ವಾಧೀನ
15. ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳನ್ನು ಲೈಸೆನ್ಸಿಲ್ಲದೆ ಮಾರಾಟಕ್ಕೆ ನಿಷೇಧ
15ಎ. ಅನುಮತಿಯಿಲ್ಲದ ಸಾರ್ವಜನಿಕ ಸ್ಥಳಗಳಲ್ಲಿ ಮದ್ಯದ ಬಳಕೆ ಅಥವಾ ಬಳಕೆಗೆ ಒಪ್ಪಿಗೆ
16. ಡಿಸ್ಟಿಲರಿಗಳ ಮತ್ತು ಉಗ್ರಾಣಗಳ ಸ್ಥಾಪನೆ
16ಎ. ಮಾರಾಟಕ್ಕಾಗಿ ಸಾರಾಯಿಯನ್ನು ತಯಾರಿಸುವುದಕ್ಕಾಗಿ, ಸೀಸೆಗೆ ತುಂಬುವುದಕ್ಕಾಗಿ ಅಥವಾ ತಯಾರಿಸಿ ಸೀಸೆಗೆ ತುಂಬುವುದಕ್ಕಾಗಿ ಲೈಸೆನ್ಸಿನ ಮಂಜೂರಾತಿ ಅಥವ ನವೀಕರಣದ ಮೇಲೆ ನಿಷೇಧ ಇತ್ಯಾದಿ.
16ಬಿ. ಸಾರಾಯಿಯ ಮಾರಾಟಕ್ಕಾಗಿ ಮಂಜೂರಾದ ಲೈಸೆನ್ಸು ಅಥವಾ ಗುತ್ತಿಗೆಯ ನವೀಕರಣದ ಮೇಲೆ ನಿಷೇಧ.
17. ತಯಾರಿಕೆಗಾಗಿ ಗುತ್ತಿಗೆಯ ಹಕ್ಕನ್ನು ಮಂಜೂರು ಮಾಡುವ ಅಧಿಕಾರ
18. ಹೆಂಡ ತೆಗೆಯಲು ಗುತ್ತಿಗೆದಾರನ ಅನುಮತಿ
19. ಅಳತೆ ಮತ್ತು ಪರೀಕ್ಷೆಯ ಬಗ್ಗೆ ಲೈಸೆನ್ಸುದಾರರ ಕರ್ತವ್ಯಗಳು
20. ಮಕ್ಕಳನ್ನು ಮತ್ತು ಹೆಂಗಸರನ್ನು ನಿಯೋಜಿಸುವುದಕ್ಕೆ ನಿಷೇಧ
21. ಸಾರ್ವಜನಿಕ ಶಾಂತಿಯ್ನು ಕಾಪಾಡಲು ಅಂಗಡಿಗಳನ್ನು ಮುಚ್ಚುವುದು


## ಅಧ್ಯಾಯ – V
## ಅಬ್ಕಾರಿ ಶುಲ್ಕ ಮತ್ತು ಪ್ರತಿ ಶುಲ್ಕ


22. ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳ ಮೇಲೆ ಅಬ್ಕಾರಿ ಶುಲ್ಕ ಅಥವಾ ಪ್ರತಿಶುಲ್ಕ
23. ಅಂಥ ಶುಲ್ಕಗಳನ್ನು ವಿಧಿಸುವ ರೀತಿಗಳು
23ಎ. ವಿದ್ಯುನ್ಮಾನ ಸಾಧನಗಳ ಮೂಲಕ ಅಬ್ಕಾರಿ ರಾಜಸ್ವದ ರವಾನೆ (ರೆಮಿಟೆನ್ಸ್)
24. ಗುತ್ತಿಗೆಗೆ ಅಥವಾ ಲೈಸೆನ್ಸ್ ಮಂಜೂರು ಅಥವಾ ನವೀಕರಣಕ್ಕಾಗಿ ಶುಲ್ಕ ಪಾವತಿ.
24ಎ. ವಿದೇಶಿ ಮದ್ಯದ ಸಂದರ್ಭದಲ್ಲಿ ವಿಶಿಷ್ಟ ಅಥವಾ ಇತರ ವಿಶೇಷಾಧಿಕಾರದ ಮಂಜೂರಾತಿ.
25. ಮರಗಳಿಂದ ಹೆಂಡ ಇಳಿಸುವ ಬಗೆಗಿನ ಕರವನ್ನು ಯಾರಿಂದ ವಸೂಲು ಮಾಡಬೇಕು


## ಅಧ್ಯಾಯ – VI
## ಲೈಸೆನ್ಸುಗಳು ಮತ್ತು ಅನುಮತಿ ಪತ್ರಗಳು


26. ಲೈಸೆನ್ಸು ಇತ್ಯಾದಿಗಳ ನಮೂನೆ ಮತ್ತು ಷರತ್ತುಗಳು
27. ಜಾಮೀನು ಮತ್ತು ಎದುರೊಪ್ಪಂದವನ್ನು ತೆಗೆದುಕೊಳ್ಳಲು ಅಧಿಕಾರ
28. ತಾಂತ್ರಿಕ ದೋಷಗಳು, ಅಕ್ರಮಗಳು ಮತ್ತು ಲೋಪಗಳು
29. ಲೈಸೆನ್ಸು ಇತ್ಯಾದಿಗಳನ್ನು ರದ್ದು ಮಾಡಲು ಅಥವಾ ನಿಲಂಬನ ಮಾಡಲು ಅಧಿಕಾರ
30. ಲೈಸೆನ್ಸನ್ನು ಹಿಂತೆಗೆದುಕೊಳ್ಳಲು ಅಧಿಕಾರ
31. ಲೈಸೆನ್ಸನ್ನು ಬಿಟ್ಟುಕೊಡುವುದು


## ಅಧ್ಯಾಯ – VII
## ಅಪರಾಧಗಳು ಮತ್ತು ದಂಡಗಳು


32. ಕಾನೂನು ವಿರೋಧಿ ಆಮದು, ಇತ್ಯಾದಿಗಳ ಬಗ್ಗೆ ದಂಡ
33. ಗುಣಾಪಹೃತ ಮದ್ಯಸಾರವನ್ನು ಮನುಷ್ಯೋಪಯೋಗಕ್ಕೆ ತಕ್ಕುದುದನ್ನಾಗಿ ಮಾಡುವುದಕ್ಕೆ ದಂಡ
34. ಕಾನೂನು ವಿರೋಧಿ ಸ್ವಾಧೀನಕ್ಕೆ ದಂಡ
35. ಅನ್ಯಥಾ ಉಪಬಂಧಿಸಿದ ಅಪರಾಧಕ್ಕಾಗಿ ದಂಡ
36. ಲೈಸೆನ್ಸುದಾರ ಮೊದಲಾದವರ ದುರ್ವರ್ತನೆಗೆ ದಂಡ
37. ಲೈಸೆನ್ಸು ಪಡೆದ ಮಾರಾಟಗಾರ ಅಥವಾ ತಯಾರಿಕೆದಾರರಿಂದ ಕಲಬೆರಕೆ ಇತ್ಯಾದಿಗಳಿಗೆ ದಂಡ
38. ಔಷಧಿ ವಸ್ತು ಅಂಗಡಿ ಇತ್ಯಾದಿಗಳಲ್ಲಿ ಸೇವನೆಗಾಗಿ ದಂಡ
38ಎ. ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡುವ ಉದ್ದೇಶಕ್ಕೆ ಆವರಣ ಇತ್ಯಾದಿಗಳನ್ನು ಉಪಯೋಗಿಸಲು ಅವಕಾಶ ಕೊಡುವುದಕ್ಕೆ ದಂಡ
39. ಒಬ್ಬನ ಪರವಾಗಿ ಮತ್ತೊಬ್ಬನು ತಯಾರಿಸುವುದು, ಮಾರಾಟ ಮಾಡುವುದು ಅಥವಾ ಸ್ವಾಧೀನ ಹೊಂದಿರುವುದು
40. ಕೆಲವು ಸಂದರ್ಭದಲ್ಲಿ ಅಪರಾಧ ನಡೆದಿದೆಯೆಂಬ ಬಗ್ಗೆ ಪೂರ್ವಭಾವನೆ
41. ನೌಕರರ ಕೃತ್ಯಗಳಿಗಾಗಿ ಲೈಸೆನ್ಸುದಾರನ ಕ್ರಿಮಿನಲ್ ಹೊಣೆಗಾರಿಕೆ

42. ಹಿಂದೆ ಸಿದ್ಧಾಪರಾಧಿಯಾಗಿದ್ದರೆ ಹೆಚ್ಚಿನ ದಂಡನೆ
42ಎ. ಕೆಲವು ಅಪರಾಧಗಳನ್ನು ಮಾಡದಿರುವ ಬಗ್ಗೆ ಜಾಮೀನು
43. ಕೆಲವು ವಸ್ತುಗಳು ಮುಟ್ಟುಗೋಲಿಗೆ ಗುರಿಯಾಗಿರುವುದು
43ಎ. ಕೆಲವು ಪ್ರಕರಣಗಳಲ್ಲಿ ಅಬ್ಕಾರಿ ಅಧಿಕಾರಿಗಳ ಮೂಲಕ ಮುಟ್ಟುಗೋಲು ಮಾಡಿಕೊಳ್ಳುವುದು.
43ಬಿ. 43ಎ ಪ್ರಕರಣದ ಅಡಿಯಲ್ಲಿ ಮುಟ್ಟುಗೋಲಿಗೆ ಮೊದಲು ಕಾರಣ ಕೇಳುವ ನೋಟಿಸನ್ನು ಹೊರಡಿಸುವುದು
43ಸಿ. ಅಪರಾಧಿಯು ಯಾರೆಂದು ಗೊತ್ತಿಲ್ಲದಿರುವಾಗ ಅಥವಾ ಆತನನ್ನು ಕಂಡುಹಿಡಿಯಲು ಸಾಧ್ಯವಿಲ್ಲದಿರುವಾಗ ಮುಟ್ಟುಗೋಲಿನ ಆದೇಶ
43ಡಿ. ಪುನರೀಕ್ಷಣೆ
43ಇ. ಅಪೀಲು
43ಎಫ್.ಮುಟುಗೋಲಿನ ಐತೀರ್ಪು ಇತರ ದಂಡಗಳೊಂದಿಗೆ ಅಡ್ಡಿಪಡಿಸುವಂತಿಲ್ಲ.
43ಜಿ. ಕೆಲವು ಪ್ರಕರಣಗಳಲ್ಲಿ ಅಧಿಕಾರವ್ಯಾಪ್ತಿಗೆ ಪ್ರತಿಷೇಧ
44. ಬಿಟ್ಟುಬಿಡಲಾಗಿದೆ.
45. ಅಪರಾಧಗಳ ರಾಜಿ.
45ಎ. ಬಿಟ್ಟುಬಿಡಲಾಗಿದೆ.
45ಬಿ. ಬಿಟ್ಟುಬಿಡಲಾಗಿದೆ.
46. ಉಪದ್ರವಕಾರಿ ಶೋಧನೆ, ಅಧಿಗ್ರಹಣ ತಡೆಹಿಡಿದಿರಿಸುವಿಕೆ ಅಥವಾ ದಸ್ತಗಿರಿ ಮಾಡುವ ಅಬ್ಕಾರಿ ಅಧಿಕಾರಿಗೆ ದಂಡ
47. ಕರ್ತವ್ಯ ಮಾಡಲು ನಿರಾಕರಿಸುವ ಅಬ್ಕಾರಿ ಅಧಿಕಾರಿಗೆ ದಂಡ
48. ಉಪದ್ರವಕಾರಿ ವಿಳಂಬಕ್ಕೆ ದಂಡ
49. ತಪ್ಪಿಸಿಕೊಂಡು ಹೋಗುವಂತೆ ದುಷ್ಪ್ರೇರಣೆ ಇತ್ಯಾದಿಗಳನ್ನು ಮಾಡುವುದಕ್ಕೆ ದಂಡ

**ಅಧ್ಯಾಯ – VIII**

**ಅಪರಾಧಗಳ ಪತ್ತೆ, ತನಿಖೆ ಮತ್ತು ಆರೋಪ ವಿಚಾರಣೆ**

50. ಭೂ ಹಿಡುವಳಿದಾರರು, ಅಧಿಕಾರಿಗಳು ಮತ್ತು ಇತರರು ಮಾಹಿತಿ ಕೊಡುವುದು
51. ತಯಾರಿಕೆ ಮತ್ತು ಮಾರಾಟದ ಸ್ಥಳಗಳನ್ನು ಪ್ರವೇಶಿಸಲು ಮತ್ತು ಪರಿಶೀಲಿಸಲು ಅಧಿಕಾರ
51ಎ. ಮೂರನೇ ಪಕ್ಷಕಾರನಿಂದ ತಪಾಸಣೆ ಅಥವಾ ಲೆಕ್ಕಪರಿಶೋಧನೆ
52. ವಾರಂಟಿಲ್ಲದೆ ದಸ್ತಗಿರಿ ಮಾಡುವುದು, ಮುಟ್ಟುಗೋಲಿಗೆ ಗುರಿಯಾಗಬಹುದಾದ ವಸ್ತುಗಳನ್ನು ಅಧಿಗ್ರಹಣ ಮಾಡುವುದು ಮತ್ತು ಶೋಧ ಮಾಡುವುದು
53. ವಾರಂಟು ಹೊರಡಿಸಲು ಮ್ಯಾಜಿಸ್ಟ್ರೇಟನ ಅಧಿಕಾರ
54. ವಾರಂಟಿಲ್ಲದೆ ಶೋಧ ಮಾಡುವ ಅಧಿಕಾರ
55. ತನಿಖೆಯ ವಿಷಯದಲ್ಲಿ ಅಬ್ಕಾರಿ ಅಧಿಕಾರಿಗಳ ಅಧಿಕಾರ
56. ತನಿಖಾಧಿಕಾರಿಯ ವರದಿ
57. ಅಬ್ಕಾರಿ ಅಧಿಕಾರಿಯ ವರದಿ
58. ದಸ್ತಗಿರಿ, ಶೋಧನೆ ಇತ್ಯಾದಿಗಳನ್ನು ಮಾಡುವ ಬಗೆ
59. ವಾರಂಟಿಲ್ಲದೆ ದಸ್ತಗಿರಿ ಮಾಡಿದ ಸಂದರ್ಭದಲ್ಲಿ ಹಾಜರಾಗುವ ಬಗ್ಗೆ ಜಾಮೀನು
59ಎ. ಅಬ್ಕಾರಿ ಇನ್ಸ್‌ಪೆಕ್ಟರರ ಪ್ರಮಾಣ ಪತ್ರವು ಸಾಕ್ಷ್ಯವಾಗಿರುವುದು
60. ಪ್ರಾಸಿಕ್ಯೂಷನಿನ ಪ್ರಕ್ರಿಯೆ
60ಎ. ಮ್ಯಾಜಿಸ್ಟ್ರೇಟನು ಅನುಸರಿಸಬೇಕಾದ ಪ್ರಕ್ರಿಯೆ

**ಅಧ್ಯಾಯ – IX**

**ಅಪೀಲುಗಳು ಮತ್ತು ಪುನರೀಕ್ಷಣೆ**

61. ಅಪೀಲುಗಳು
62. ಪುನರೀಕ್ಷಣೆ

**ಅಧ್ಯಾಯ – X**

**ಸಂಕೀರ್ಣ**

63. ಸರಕಾರಕ್ಕೆ ಬರಬೇಕಾದ ಬಾಕಿಗಳ ವಸೂಲಿ
63ಎ. ಅಬ್ಕಾರಿ ಕಂದಾಯದ ಹಿಂಬಾಕಿಯಾಗಿ ಕೆಲವು ತೆರಿಗೆ ಬಾಕಿಗಳ ವಸೂಲಾತಿ
64. ತಪ್ಪಿತಸ್ಥರ ಸ್ವತ್ತಿನ ಮೇಲೆ ಸರಕಾರಕ್ಕೆ ಧಾರಣಾಧಿಕಾರ
65. 17ನೇ ಪ್ರಕರಣದ ಮೇರೆಗೆ ಗುತ್ತಿಗೆದಾರನು ಬಾಕಿಗಳನ್ನು ವಸೂಲು ಮಾಡಿಕೊಳ್ಳುವುದು
66. ರಫ್ತು ಮಾಡಿದ ಮದ್ಯದ ಸಂದರ್ಭದಲ್ಲಿ ಮರುಪಾವತಿ

67. ವಿನಾಯಿತಿ ಇತ್ಯಾದಿ ಕೊಡಲು ರಾಜ್ಯ ಸರ್ಕಾರದ ಅಧಿಕಾರ
68. ಈ ಅಧಿನಿಯಮದ ಅಡಿಯಲ್ಲಿ ಕೈಕೊಂಡ ಕ್ರಮದ ಬಗ್ಗೆ ರಕ್ಷಣೆ
68ಎ. ಕರ್ತವ್ಯದ ಹೆಸರಿನಲ್ಲಿ ಮಾಡಿದ ಕೃತ್ಯಗಳ ಬಗ್ಗೆ ರಾಜ್ಯ ಸರಕಾರದ ಮಂಜೂರಾತಿಯಿಲ್ಲದೆ ದಾವೆಗಳನ್ನು ಅಥವಾ ಪ್ರಾಸಿಕ್ಯೂಷನ್‌ಗಳನ್ನು ಸ್ವೀಕರಿಸಕೂಡದು
68ಬಿ. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪರಿಷೇಧ
68ಸಿ. ಅಬಕಾರಿ ಬಾಕಿಗಳ ವಸೂಲಾತಿ ಸಂಬಂಧದಲ್ಲಿ ತಡೆಯಾಜ್ಞೆಯನ್ನು ಮಂಜೂರು ಮಾಡುವಂತಿಲ್ಲ
68ಡಿ. ಯಾವುದೇ ರಿಟ್ ಅರ್ಜಿ, ದಾವೆ ಇತ್ಯಾದಿಯ ಬಾಕಿಯನ್ನು ಗಣನೆಗೆ ತೆಗೆದುಕೊಳ್ಳದೇ ಅಬ್ಕಾರಿ ಕಂದಾಯವನ್ನು ಸಂದಾಯ ಮಾಡುವುದು
69. ದಾವೆಗಳ ಅವಧಿ ಪರಿಮಿತಿ
70. ಕಂಪೆನಿ ಇತ್ಯಾದಿಗಳಿಂದ ಅಪರಾಧ
71. ನಿಯಮಗಳ ರಚನಾಧಿಕಾರ
72. ನಿರಸನ ಮತ್ತು ಉಳಿಸುವಿಕೆ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

**1966ರ ಅಧಿನಿಯಮ 21.–** 1956ರ ನವೆಂಬರ್ 1ರಂದು ರಾಜ್ಯಗಳ ಪುನಾರಚನೆ ತರುವಾಯ, ಹೊಸ ಮೈಸೂರು ರಾಜ್ಯದಲ್ಲಿ ಅಂದರೆ, ಅನುಕ್ರಮವಾಗಿ ಹಳೆಯ ಮೈಸೂರು ಪ್ರದೇಶ ಮತ್ತು ಹೈದರಾಬಾದ್- ಕರ್ನಾಟಕ ಪ್ರದೇಶ ಹಾಗೂ ಮದರಾಸು-ಕರ್ನಾಟಕ ಪ್ರದೇಶಗಳಲ್ಲಿ ಕೆಳಗೆ ಸೂಚಿಸಿರುವ ವಿವಿಧ ಅಧಿನಿಯಮಗಳು ಜಾರಿಯಲ್ಲಿವೆ:-

1. ಮೈಸೂರು ಅಬಕಾರಿ ಅಧಿನಿಯಮ, 1901 (1901 ಅಧಿನಿಯಮ ಸಂಖ್ಯೆ V)
2. ಹೈದರಾಬಾದ್ ಅಬಕಾರಿ ಅಧಿನಿಯಮ, 1316 (1316 ಎಫ್ ಸಂಖ್ಯೆ 1)
3. ಮದರಾಸು ಅಬಕಾರಿ ಅಧಿನಿಯಮ, 1886 (1886ರ ಮದರಾಸು ಅಧಿನಿಯಮ 1)

ವಿವಿಧ ಪ್ರದೇಶಗಳಲ್ಲಿ ವಿವಿಧ ರೀತಿಯ ಕಾನೂನುಗಳು ಅಸ್ತಿತ್ವದಲ್ಲಿರುವುದರಿಂದಾಗಿ ಗಣನೀಯ ಆಡಳಿತಾತ್ಮಕ ಮತ್ತು ಪ್ರಕ್ರಿಯಾತ್ಮಕ ತೊಂದರೆಗಳು ಹಾಗೂ ಇಡೀ ರಾಜ್ಯದಾದ್ಯಂತ ಏಕರೂಪದ ಆಧಾರದ ಮೇಲೆ ಅಬಕಾರಿ ಅಧಿನಿಯಮವನ್ನು ಸರಿಯಾಗಿ ಕಾರ್ಯರೂಪಕ್ಕೆ ತರಲು ಅನಾನುಕೂಲಗಳು ಉಂಟಾಗುತ್ತಿವೆ ಮತ್ತು ಅದು ಮೇಲೆ ಹೇಳಿರುವ ಅಧಿನಿಯಮಗಳ ಬದಲಾಗಿ ಜಾರಿಗೆ ಬರುತ್ತದೆ. ಆದ್ದರಿಂದ ಇಡೀ ಹೊಸ ಮೈಸೂರು ರಾಜ್ಯಕ್ಕಾಗಿ ಏಕರೂಪದ ಕಾನೂನನ್ನು ಹೊಂದುವ ದೃಷ್ಟಿಯಿಂದ ಒಂದು ಏಕರೂಪದ ಅಬಕಾರಿ ವಿಧೇಯಕವನ್ನು ಸಿದ್ಧಪಡಿಸಲಾಗಿದೆ ಮತ್ತು ಮೇಲೆ ಉಲ್ಲೇಖಿಸಲಾದ ಅಧಿನಿಯಮಗಳ ಬದಲಾಗಿ ಇದು ಜಾರಿಯಲ್ಲಿರುತ್ತದೆ.

(ವಿಧಾನಸಭೆಯ ವಿಧೇಯಕ ಸಂಖ್ಯೆ 4315, ದಿನಾಂಕ:16-6-1962 ರಿಂದ ಪಡೆಯಲಾಗಿದೆ.)

### II

**1970ರ ತಿದ್ದುಪಡಿ ಅಧಿನಿಯಮ 1.–**ಭಾರತದಲ್ಲಿ ತಯಾರಿಸಿದ ವಿದೇಶಿ ಮದ್ಯದಲ್ಲಿ ವ್ಯವಹರಿಸುತ್ತಿರುವ ಬಹುಸಂಖ್ಯೆಯ ಲೈಸೆನ್ಸುದಾರರು, 1965ರ ಮೈಸೂರು ಅಬಕಾರಿ ಅಧಿನಿಯಮವು ಸರ್ಕಾರಕ್ಕೆ ಲೀಟರ್ ಶುಲ್ಕಗಳನ್ನು ವಿಧಿಸುವುದಕ್ಕೆ ನಿರ್ದಿಷ್ಟವಾಗಿ ಅಧಿಕಾರ ಕೊಟ್ಟಿಲ್ಲ ಎಂಬ ಕಾರಣದ ಮೇಲೆ ಭಾರತದಲ್ಲಿ ತಯಾರಿಸಿದ ವಿದೇಶಿ ಮದ್ಯಗಳ ಮೇಲೆ ಲೀಟರ್ ಶುಲ್ಕವನ್ನು ವಿಧಿಸುವ ಮತ್ತು ಸಂಗ್ರಹಿಸುವ ಸಿಂಧುತ್ವವನ್ನು ಪ್ರಶ್ನಿಸಿದ್ದಾರೆ. ಹೀಗಾಗಿ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಲೀಟರ್ ಶುಲ್ಕಗಳ ರೂಪದಲ್ಲಿ ಅಬಕಾರಿ ಸುಂಕವನ್ನು ವಿಧಿಸುವುದಕ್ಕೆ ವಿಶೇಷ ಉಪಬಂಧವನ್ನು ರಚಿಸುವುದು ಅವಶ್ಯಕವೆಂದು ಪರಿಗಣಿಸಲಾಯಿತು.

ಪ್ರಸ್ತುತ ಅಬಕಾರಿ ಇಲಾಖೆಯಲ್ಲಿ ಒಬ್ಬರು ಡೆಪ್ಯೂಟಿ ಕಮೀಷನರು ಹಾಗೂ ಅನೇಕ ಅಬಕಾರಿ ಅಧಿಕಾರಿಗಳಿರುವ ಒಂದು ಜಾರಿ (ಎನ್‌ಫೋರ್ಸ್‌ಮೆಂಟ್) ವಿಭಾಗವಿದೆ. ಅವರು, ಅಕ್ರಮ ಮದ್ಯ ತಯಾರಿಕೆ, ಮಾರಾಟ, ಸಾರಿಗೆ, ಸ್ವಾಧೀನ, ಆಮದು ಮತ್ತು ರಫ್ತುಗಳ ಪ್ರಕರಣಗಳನ್ನು ಪತ್ತೆಮಾಡುವ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಕಾನೂನು ಅಧಿಕಾರದ ಅಡಿಯಲ್ಲಿ, ಅಧಿಕಾರಿಗಳ ಕೆಲಸಕಾರ್ಯಗಳು ಹೆಚ್ಚು ಪರಿಣಾಮಕಾರಿ ರೀತಿಯಲ್ಲಿ ಆಗುವ ಸಲುವಾಗಿ ಗುಪ್ತವಾರ್ತೆ ವಿಭಾಗಕ್ಕೆ ಶಾಸನಬದ್ಧ ಸ್ಥಾನಮಾನವನ್ನು ನೀಡುವುದು ಅವಶ್ಯಕವೆಂದು ಪರಿಗಣಿಸಲಾಯಿತು.

ಈ ಅಧಿನಿಯಮದ ಅಡಿಯಲ್ಲಿನ ಅಪರಾಧಗಳ ಅಧಿವಿಚಾರಣೆಯು ಶೀಘ್ರವಾಗಿ ವಿಲೆಯಾಗುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ, ಅಧಿನಿಯಮದ ಅಡಿಯಲ್ಲಿನ ಅಪರಾಧಗಳ ಬಗ್ಗೆ ಸಂಕ್ಷಿಪ್ತವಾಗಿ ಅಧಿವಿಚಾರಣೆಯಾಗುವುದಕ್ಕೆ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಯಿತು.

ವಿಧಾನ ಮಂಡಲದ ಸದನಗಳು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಹಾಗೂ ಆ ವಿಷಯವು ಜರೂರಿನದು ಆಗಿರುವುದರಿಂದ, ಮೈಸೂರು ಅಬಕಾರಿ (ಎರಡನೇ ತಿದ್ದುಪಡಿ) ಅಧ್ಯಾದೇಶ, 1970ನ್ನು ಮೇಲೆ ಹೇಳಿರುವ ಉದ್ದೇಶಗಳಿಗಾಗಿ ಮತ್ತು ಅಬಕಾರಿ ಇಲಾಖೆಯ ಆಡಳಿತವನ್ನು ಪರಿಣಾಮಕಾರಿಯಾಗಿ ನಡೆಸಲು ಅವಶ್ಯಕವೆಂದು ಕಂಡುಬರುವ ಇತರೆ ಕೆಲವು ಉಪಬಂಧಗಳನ್ನು ಕಲ್ಪಿಸುವುದಕ್ಕಾಗಿ 1970ರ ಆಗಸ್ಟ್ 7ರಂದು ಪ್ರಖ್ಯಾಪಿಸಲಾಯಿತು.

ಈ ವಿಧೇಯಕವನ್ನು ಅಧ್ಯಾದೇಶಕ್ಕೆ ಬದಲಾಗಿ ಮಂಡಿಸಲು ಉದ್ದೇಶಿಸಲಾಗಿದೆ.

(ಅಧಿಸೂಚನೆ ಸಂಖ್ಯೆ 5249/ವಿ.ಸ, ಬೆಂಗಳೂರು-1 ದಿನಾಂಕ:11-9-1970ನ್ನು ನೋಡಿ)

### III

**1971ರ ತಿದ್ದುಪಡಿ ಅಧಿನಿಯಮ 1.-** 1965ರ ಮೈಸೂರು ಅಬಕಾರಿ ಅಧಿನಿಯಮವು (1966ರ ಮೈಸೂರು ಅಧಿನಿಯಮ 21), ಅಬಕಾರಿ ಆಯುಕ್ತರಿಗೆ ಅಥವಾ ಇತರೆ ಯಾರೇ ಅಧಿಕಾರಿಗೆ ರಾಜ್ಯ ಸರ್ಕಾರವು ತನ್ನ ಅಧಿಕಾರಗಳನ್ನು ಪ್ರತ್ಯಾಯೋಜಿಸಲು ಅಧಿಕಾರವನ್ನು ನೀಡಿರುವುದಿಲ್ಲ. ಅಬಕಾರಿ ಆಯುಕ್ತರಿಗೆ ಅಥವಾ ಇತರೆ ಯಾರೇ ಅಧಿಕಾರಿಗೆ ತನ್ನ ಅಧಿಕಾರಗಳನ್ನು ಪ್ರತ್ಯಾಯೋಜಿಸಲು ಸರ್ಕಾರಕ್ಕೆ ಅನುವುಮಾಡಿಕೊಡುವ ಅಧಿಕಾರವನ್ನು ಹೊಂದಲು ಈ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ಅವಶ್ಯಕವೆಂದು ಪರಿಗಣಿಸಲಾಯಿತು. ಕೆಲವು ಅಪರಾಧಗಳು ಆಗುವುದನ್ನು (ಕಮೀಷನ್‌ನ್ನು) ಪರಿಣಾಮಕಾರಿಯಾಗಿ ತಡೆಗಟ್ಟುವ ಉದ್ದೇಶದಿಂದ ಅಂಥ ಅಪರಾಧಗಳಿಗಾಗಿ ಕನಿಷ್ಠ ದಂಡನೆಯನ್ನು ನೀಡುವುದು ಅವಶ್ಯಕವೆಂದು ಪರಿಗಣಿಸಲಾಯಿತು. ವ್ಯಕ್ತಿಗಳು ಉಳಿದುಕೊಳ್ಳುವುದಕ್ಕಾಗಿ ಬಳಸುವ ಹೋಟೆಲ್ ಅಥವಾ ಭೋಜನ ಗೃಹ ಅಥವಾ ಉಪಹಾರ ಕೋಣೆಯಂಥ ಸ್ಥಳಗಳನ್ನು ಹೊರತುಪಡಿಸಿ, ಅಧಿನಿಯಮದ ಮೇರೆಗೆ ಲೈಸೆನ್ಸನ್ನು ಪಡೆಯದಿರುವ ಹೋಟೆಲಿನಲ್ಲಿ, ಭೋಜನ ಗೃಹದಲ್ಲಿ ಅಥವಾ ಉಪಹಾರ ಕೋಣೆಯಲ್ಲಿ ಯಾವುದೇ ಮಾದಕದ್ರವ್ಯಗಳ ಬಳಕೆ, ಮಾರಾಟ ಅಥವಾ ಸರಬರಾಜನ್ನು ನಿಷೇಧಿಸುವುದೂ ಸಹ ಅವಶ್ಯಕವೆಂದು ಪರಿಗಣಿಸಲಾಯಿತು. ಅಧಿನಿಯಮವು ಜಾರಿಯಾಗುತ್ತಿರುವಾಗ ಗಳಿಸಿದ ಅನುಭವದ ಹಿನ್ನಲೆಯಲ್ಲಿ ಇತರ ಕೆಲವು ತಿದ್ದುಪಡಿಗಳನ್ನು ಮಾಡುವುದು ಅವಶ್ಯಕವೆಂದು ಸಹ ಇದನ್ನು ಪರಿಗಣಿಸಲಾಯಿತು.

ಈ ಉದ್ದೇಶಗಳಿಗಾಗಿ ಮೈಸೂರು ಅಬಕಾರಿ (ತಿದ್ದುಪಡಿ) ಅಧ್ಯಾದೇಶಗಳು, 1969ನ್ನು ಪ್ರಖ್ಯಾಪಿಸಲಾಯಿತು. ಈ ವಿಧೇಯಕವನ್ನು ಅಧ್ಯಾದೇಶದ ಬದಲಾಗಿ ಮಂಡಿಸಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ, ದಿನಾಂಕ:10-1-1970 ಸಂಖ್ಯೆ 9 ಎಂದು ಪುಟ 9ರಲ್ಲಿ ಪ್ರಕಟಿಸಲಾಗಿದೆ.)

### IV

**1976ರ ತಿದ್ದುಪಡಿ ಅಧಿನಿಯಮ 61.-** 1965ರ ಕರ್ನಾಟಕ ಅಬಕಾರಿ ಅಧಿನಿಯಮದ 67ನೇ ಪ್ರಕರಣದ ಮೇರೆಗೆ, ರಾಜ್ಯ ಸರ್ಕಾರವು, ಒಕ್ಕೂಟದ ಸಶಸ್ತ್ರಪಡೆಯ ಸದಸ್ಯರುಗಳ ಉಪಯೋಗಕ್ಕಾಗಿ ಅಥವಾ ಬಳಕೆಗಾಗಿ ಮಾರಾಟ ಮಾಡಿದ ಯಾವುದೇ ಮದ್ಯದ ಮೇಲೆ ಸದರಿ ಅಧಿನಿಯಮದ 22ನೇ ಪ್ರಕರಣದ ಮೇರೆಗೆ ವಿಧಿಸಬಹುದಾದ ಅಬಕಾರಿ ಸುಂಕವನ್ನು ವಿನಾಯಿತಿಗೊಳಿಸಬಹುದು ಅಥವಾ ಕಡಿಮೆ ಮಾಡಬಹುದು. ಈ ಅಧಿಕಾರಗಳನ್ನು ಚಲಾಯಿಸಿ, ಸರ್ಕಾರವು ರಾಜ್ಯದಲ್ಲಿ ತಯಾರಿಸಲಾದ ರಮ್‌ನ ಮೇಲೆ ವಿಧಿಸಬಹುದಾದ ಅಬಕಾರಿ ಸುಂಕವನ್ನು ಕಡಿಮೆ ಮಾಡಿದೆ ಹಾಗೂ ಒಕ್ಕೂಟ ಸಶಸ್ತ್ರಪಡೆಗಳ ಉಪಯೋಗಕ್ಕಾಗಿ ಅಥವಾ ಬಳಕೆಗಾಗಿ ಮಾರಾಟ ಮಾಡಿದೆ ಹಾಗೂ ರಾಜ್ಯದ ಹೊರಗೆ ಪ್ರತಿ ಪ್ರೂಫ್ ಲೀಟರ್‌ಗೆ ಇಪ್ಪತ್ತೈದು ಪೈಸೆಗೆ ರಫ್ತು ಮಾಡಿದೆ.

ರಮ್‌ನ ಸರಬರಾಜಿನ ಮೇಲಿನ ರಫ್ತು ಸುಂಕದಲ್ಲಿ ರಿಯಾಯಿತಿ ದರವನ್ನು ಮಂಜೂರು ಮಾಡಬೇಕೆಂದು ಕೆಲವು ಅರೆ ಸೇನಾಪಡೆ ಘಟಕಗಳು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿವೆ. ಇವುಗಳಲ್ಲಿ ಕೆಲವು ಅರೆ ಸೇನಾಪಡೆ ಘಟಕಗಳು ಸಶಸ್ತ್ರಪಡೆ ಅಧಿನಿಯಮಕ್ಕೆ ಒಳಪಟ್ಟಿವೆ ಮತ್ತು ಅತಿ ಎತ್ತರದ ಪ್ರದೇಶಗಳಲ್ಲಿನ ಗಡಿ ಪ್ರದೇಶಗಳಿಗೆ ನಿಯೋಜನೆಗೊಳ್ಳುತ್ತಾರೆ ಹಾಗೂ ಕಾರ್ಯಾಚರಣೆಯ ವೇಳೆಯಲ್ಲಿ ಅವರು ಮುಂಚೂಣಿ ಪ್ರದೇಶಗಳಲ್ಲಿ ಸಶಸ್ತ್ರಪಡೆಯೊಂದಿಗೆ ಕಾರ್ಯಾಚರಣೆಯ ಕರ್ತವ್ಯದಲ್ಲಿಯೂ ಸಹ ನಿರತರಾಗಿರುತ್ತಾರೆ. 1965ರ ಕರ್ನಾಟಕ ಅಬಕಾರಿ ಅಧಿನಿಯಮದ 67ನೇ ಪ್ರಕರಣವನ್ನು ತಿದ್ದುಪಡಿ ಮಾಡದ ಹೊರತು, ಅರೆ ಸೇನಾಪಡೆ ಘಟಕಗಳನ್ನು ಸಶಸ್ತ್ರಪಡೆಗಳೆಂದು ಪರಿಗಣಿಸಲಾಗದು ಮತ್ತು ಸದರಿ ಘಟಕಗಳಿಗೆ ರಫ್ತು ಸುಂಕದ ರಿಯಾಯಿತಿ ದರದಲ್ಲಿ ರಮ್‌ನ್ನು ನೀಡಲಾಗದು. ಈ ಸಂಗತಿಗಳನ್ನು ಪರಿಗಣಿಸಲಾಗಿ, ಅರೆ ಸೇನಾಪಡೆ ಘಟಕಗಳಿಗೆ ರಫ್ತು ಸುಂಕದ ರಿಯಾಯಿತಿ ದರದಲ್ಲಿ ರಮ್ ನೀಡುವುದು ಸಮರ್ಥನೀಯ. ಆದ್ದರಿಂದ, ಈ ಉದ್ದೇಶಕ್ಕಾಗಿ ಕರ್ನಾಟಕ ಅಬಕಾರಿ ಅಧಿನಿಯಮದ 67ನೇ ಪ್ರಕರಣವನ್ನು ತಿದ್ದುಪಡಿ ಮಾಡಬೇಕಾಗಿದೆ.

ಕರ್ನಾಟಕ ವಿಧಾನಸಭೆಯು ಅಧಿವೇಶನದಲ್ಲಿ ಇಲ್ಲದಿರುವುದರಿಂದ, ವಿಷಯವು ಜರೂರು ಸ್ವರೂಪದ್ದಾಗಿದ್ದರಿಂದ, ಕರ್ನಾಟಕ ಅಬ್ಕಾರಿ(ತಿದ್ದುಪಡಿ) ಅಧ್ಯಾದೇಶ, 1976ನ್ನು ಪ್ರಖ್ಯಾಪಿಸಲಾಯಿತು.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ಮಂಡಿಸಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV–2ಎ, ದಿನಾಂಕ:8–11–1976 ಸಂಖ್ಯೆ 4424 ಎಂದು ಪುಟ 3ರಲ್ಲಿ ಪ್ರಕಟಿಸಲಾಗಿದೆ)

**V**

**1982ರ ತಿದ್ದುಪಡಿ ಅಧಿನಿಯಮ 32.–** ಹೊಸ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ 2), 1974ರ ಏಪ್ರಿಲ್ 1ರಿಂದ ಜಾರಿಗೆ ಬಂದಿರುವುದರಿಂದ ಕರ್ನಾಟಕ ಅಬಕಾರಿ ಅಧಿನಿಯಮದಲ್ಲಿ ಉಲ್ಲೇಖಿಸಿರುವ ನಾಮಸೂಚಿಯನ್ನು ಹಾಗೂ ಸಂಬಂಧಪಟ್ಟ ಪ್ರಕರಣಗಳನ್ನು ಪ್ರತ್ಯಾಯೋಜಿಸಬೇಕಾಗಿದೆ.

ಪ್ರಸ್ತುತ, 67ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು, ಸಂಸ್ಥೆಗಳ ಕೆಲವು ಪ್ರವರ್ಗಗಳಿಗೆ ಮಾರಾಟ ಮಾಡಿದ ಯಾವುದೇ ಮದ್ಯದ ಮೇಲೆ 22ನೇ ಪ್ರಕರಣದ ಮೇರೆಗೆ ಪಾವತಿಸಬಹುದಾದ ಅಬಕಾರಿ ಸುಂಕಕ್ಕೆ ಉತ್ತರಾನ್ವಯವಾಗಿಯಾಗಲೀ ಅಥವಾ ಪೂರ್ವಾನ್ವಯವಾಗಿಯಾಗಲೀ ವಿನಾಯಿತಿ ನೀಡುವ ಅಥವಾ ಅದರಲ್ಲಿ ಕಡಿಮೆಗೊಳಿಸುವ ಅಧಿಕಾರವನ್ನು ಹೊಂದಿದೆ. ಲೈಸೆನ್ಸ್ ಶುಲ್ಕವು, ಅಬಕಾರಿ ಸುಂಕ ಅಥವಾ ಪ್ರತಿಸುಂಕದ ಸ್ವರೂಪದ್ದಲ್ಲವೆಂದು ಮಹಾಲೇಖಪಾಲರು ವ್ಯಕ್ತಪಡಿಸಿದ್ದಾರೆ ಮತ್ತು ಆದ್ದರಿಂದ ವಿನಾಯಿತಿಯನ್ನು ಲೈಸೆನ್ಸ್ ಶುಲ್ಕಕ್ಕೆ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ನೀಡಲಾಗದು. ಆದ್ದರಿಂದ, ಸದರಿ ಅಧಿನಿಯಮದ 67ನೇ ಪ್ರಕರಣದ (ಎ) ಖಂಡವನ್ನು ತಿದ್ದುಪಡಿ ಮಾಡುವ ಮೂಲಕ ಸಂಸ್ಥೆಗಳ ಕೆಲವು ಪ್ರವರ್ಗಗಳಿಗೆ ಸಂಬಂಧಪಟ್ಟಂತೆಯೂ ಸಹ ವಿನಾಯಿತಿ ಲೈಸೆನ್ಸ್ ಶುಲ್ಕಕ್ಕೆ ವಿನಾಯಿತಿ ನೀಡಲು ಅಧಿಕಾರವನ್ನು ಪಡೆದುಕೊಳ್ಳಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV–2ಎ, ದಿನಾಂಕ:10–3–1981 ಪುಟ ಸಂಖ್ಯೆ 4ರಲ್ಲಿ ಸಂಖ್ಯೆ 167 ಎಂದು ಪ್ರಕಟಿಸಲಾಗಿದೆ.)

**VI**

**1987ರ ತಿದ್ದುಪಡಿ ಅಧಿನಿಯಮ 28.–** ಮಾರಾಟ ಮಾಡುವುದಕ್ಕಾಗಿ, ಸಾರಾಯಿಯನ್ನು ತಯಾರಿಸಲು ಅಥವಾ ಬಾಟಲಿಗೆ ತುಂಬಲು ಅಥವಾ ಸಾರಾಯಿಯನ್ನು ತಯಾರಿಸಲು ಮತ್ತು ಬಾಟಲಿಗೆ ತುಂಬಲು ಲೈಸೆನ್ಸನ್ನು 16ನೇ ಪ್ರಕರಣದ ಮೇರೆಗೆ, ಡಿಸ್ಟಿಲರಿ ಲೈಸೆನ್ಸನ್ನು ಹೊಂದಿರದ ವ್ಯಕ್ತಿಗೆ ಮಂಜೂರು ಮಾಡತಕ್ಕದ್ದಲ್ಲ ಎಂದು ಉಪಬಂಧ ಕಲ್ಪಿಸಲು ಕರ್ನಾಟಕ ಅಬಕಾರಿ ಅಧಿನಿಯಮ, 1965ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿಲ್ಲದಿರುವುದರಿಂದ ಮತ್ತು ವಿಷಯವು ಜರೂರು ಸ್ವರೂಪದ್ದಾಗಿದ್ದುದರಿಂದ ಕರ್ನಾಟಕ ಅಬಕಾರಿ (ತಿದ್ದುಪಡಿ) ಅಧ್ಯಾದೇಶ, 1987 (1987ರ ಕರ್ನಾಟಕ ಅಧ್ಯಾದೇಶ 2)ನ್ನು ಪ್ರಖ್ಯಾಪಿಸಲಾಯಿತು.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ಮಂಡಿಸಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV–2ಎ, ದಿನಾಂಕ:2–9–1987 ಸಂಖ್ಯೆ 574 ಎಂದು ಪುಟ 3ರಲ್ಲಿ ಪ್ರಕಟಿಸಲಾಗಿದೆ.)

**VII**

**1987ರ ತಿದ್ದುಪಡಿ ಅಧಿನಿಯಮ 36.–** ಮಾದಕದ್ರವ್ಯಗಳನ್ನು ಕಾನೂನು ಬಾಹಿರವಾಗಿ ಆಮದು ಮಾಡಿಕೊಳ್ಳುವುದನ್ನು, ರಫ್ತು ಮಾಡುವುದನ್ನು, ಸಾಗಿಸುವುದನ್ನು, ತಯಾರಿಸುವುದನ್ನು ಹಾಗೂ ಸ್ವಾಧೀನಪಡಿಸಿಕೊಳ್ಳುವುದನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಕ್ಕಾಗಿ ಉಪಬಂಧ ಕಲ್ಪಿಸಲು, ಕರ್ನಾಟಕ ಅಬಕಾರಿ ಅಧಿನಿಯಮ, 1965 (1966ರ ಕರ್ನಾಟಕ ಅಧಿನಿಯಮ 21)ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಸೋಂಕು ರೋಗಗಳು ಹರಡುವ ಸಂದರ್ಭದಲ್ಲಿ ಮದ್ಯದ ಅಂಗಡಿಗಳನ್ನು ಮುಚ್ಚುವುದಕ್ಕಾಗಿಯೂ ಸಹ ಈ ಉಪಬಂಧವನ್ನು ಕಲ್ಪಿಸಲು ಪ್ರಸ್ತಾವಿಸಲಾಗಿದೆ.

ಅಸ್ತಿತ್ವದಲ್ಲಿರುವಂತೆ 32ನೇ ಮತ್ತು 34ನೇ ಪ್ರಕರಣಗಳಲ್ಲಿ ಈಗ ಉಪಬಂಧಿಸಿರುವ ಶಿಕ್ಷೆಯು ಸಾಕಷ್ಟಲ್ಲದ ಕಾರಣ, ಅದನ್ನು ಹೆಚ್ಚಿಸಲು ಉಪಬಂಧವನ್ನು ಕಲ್ಪಿಸಲಾಗಿದೆ.

ಹಾಗೆಯೇ, 45ನೇ ಪ್ರಕರಣದ ಮೇರೆಗೆ ಅಪರಾಧಗಳನ್ನು ರಾಜಿಮಾಡಿಕೊಳ್ಳುವುದಕ್ಕಾಗಿ ಶುಲ್ಕವನ್ನೂ ಸಹ ಹೆಚ್ಚಿಸಲಾಗಿದೆ.

ಅಬಕಾರಿ ಅಧಿಕಾರಿಗಳು 38ನೇ ಮತ್ತು 38ಎ ಪ್ರಕರಣದ ಮೇರೆಗೆ ಉದ್ಭವಿಸುವ ಅಪರಾಧಗಳನ್ನು ತನಿಖೆ ಮಾಡಲು ಉಪಬಂಧ ಕಲ್ಪಿಸುವುದಕ್ಕಾಗಿ 55ನೇ ಪ್ರಕರಣವನ್ನು ತಿದ್ದುಪಡಿ ಮಾಡಲಾಗಿದೆ.

ಈ ಅಧಿನಿಯಮದ ಮೇರೆಗಿನ ಅಪರಾಧಗಳಾಗಿರುವುದರಲ್ಲಿ ಒಳಗೊಂಡಿರುವ ವಾಹನಗಳನ್ನು ಅಬಕಾರಿ ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಳ್ಳಲು ಮತ್ತಷ್ಟು ಉಪಬಂಧವನ್ನು ಕಲ್ಪಿಸಲಾಗಿದೆ. ಮುಟ್ಟುಗೋಲು ಆದೇಶದ ವಿರುದ್ಧ ಅಪೀಲು ಹೂಡಲು ಹಾಗೂ ಪುನರೀಕ್ಷಣೆಗಾಗಿ ಸಹ ಉಪಬಂಧವನ್ನು ಕಲ್ಪಿಸಲಾಗಿದೆ.

ಕ್ರಿಮಿನಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು, ಸ್ವತ್ತುಗಳನ್ನು ವಶಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ ವಿಷಯಗಳ ನ್ಯಾಯನಿರ್ಣಯದ ವ್ಯಾಪ್ತಿಯಿಂದ ತೆಗೆದುಹಾಕಲಾಗಿದೆ.

ಉಳಿದ ತಿದ್ದುಪಡಿಗಳು ತತ್ಪರಿಣಾಮದ ಸ್ವರೂಪದವುಗಳಾಗಿವೆ.

ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿಲ್ಲದಿರುವುದರಿಂದ ಹಾಗೂ ಆ ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ, ಕರ್ನಾಟಕ ಅಬಕಾರಿ (ಎರಡನೇ ತಿದ್ದುಪಡಿ) ಅಧ್ಯಾದೇಶ, 1987 (1987ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 4)ನ್ನು ಪ್ರಖ್ಯಾಪಿಸಲಾಗಿದೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ಮಂಡಿಸಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2A, ದಿನಾಂಕ : 2–9–1987 ಸಂಖ್ಯೆ 576 ಎಂದು ಪುಟ ಸಂಖ್ಯೆ 8 ರಲ್ಲಿ ಪ್ರಕಟಿಸಲಾಗಿದೆ).

## VIII

**1994ರ ತಿದ್ದುಪಡಿ ಅಧಿನಿಯಮ-1.–** ಸಾರಾಯಿಯನ್ನು ತಯಾರಿಸಲು ಮತ್ತು ಬಾಟಲಿಗೆ ತುಂಬುವುದಕ್ಕಾಗಿ ಖಾಸಗಿ ಡಿಸ್ಟಿಲರಿಗಳಿಗೆ ನೀಡಿರುವ, ಅಸ್ತಿತ್ವದಲ್ಲಿರುವ ಲೈಸೆನ್ಸ್‌ಗಳನ್ನು 1993ರ ಜೂನ್ 30ರ ಕೊನೆಯ ಹೊತ್ತಿಗೆ ಕೊನೆಗೊಳಿಸಲು ಮೈಸೂರು ಸಕ್ಕರೆ ಕಂಪನಿ ಮತ್ತು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನಂತಹ ಸರ್ಕಾರಿ ಏಜೆನ್ಸಿಗಳಿಗೆ, ಸಾರಾಯಿ ತಯಾರಿಸುವುದನ್ನು ಮತ್ತು ಬಾಟಲಿಗೆ ತುಂಬುವುದನ್ನು ವಹಿಸಿಕೊಡಲು, 1993ರ ಜುಲೈ 1ರಿಂದ ಜಾರಿಗೆ ಬರುವಂತೆ ಕರ್ನಾಟಕ ಅಬಕಾರಿ ಅಧಿನಿಯಮ, 1965ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಈ ವಿಷಯವು ತುರ್ತಿನದಾಗಿರುವುದರಿಂದ, ರಾಜ್ಯವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದೇ ಇರುವುದರಿಂದ, ಕರ್ನಾಟಕ ಅಬಕಾರಿ (ತಿದ್ದುಪಡಿ) ಅಧ್ಯಾದೇಶ, 1993 (1993ರ ಕರ್ನಾಟಕ ಅಧ್ಯಾದೇಶ 6)ನ್ನು ಪ್ರಖ್ಯಾಪಿಸಲಾಯಿತು.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ಮಂಡಿಸಿದೆ.

ಆದ್ದರಿಂದ ಈ ವಿಧೇಯಕ.

(1993ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 29 ರಿಂದ ಪಡೆಯಲಾಗಿದೆ).

## IX

**1994ರ ತಿದ್ದುಪಡಿ ಅಧಿನಿಯಮ 2.–** ಕರ್ನಾಟಕದ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ 1971ರ ಸಂಖ್ಯೆ 1956ರಲ್ಲಿ 1968ರ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳ 8ನೇ ನಿಯಮದ (1)ನೇ ಉಪನಿಯಮವು, ಅದು ಭಾರತೀಯ ಮತ್ತು ವಿದೇಶಿ ಮದ್ಯಗಳ ಚಿಲ್ಲರೆ ಮಾರಾಟ ಪರವಾನಗಿ ಶುಲ್ಕವನ್ನು ವಿಧಿಸುವುದಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಅಸಿಂಧುವೆಂದು ಘೋಷಿಸಿದೆ. ಅರ್ಜಿದಾರನಿಂದ ಸಂಗ್ರಹಿಸಲಾದ ಮೊತ್ತವನ್ನು ಭಾರತೀಯ ಮತ್ತು ವಿದೇಶಿ ಮದ್ಯಗಳ ಚಿಲ್ಲರೆ ಮಾರಾಟದ ಪರವಾನಗಿ ಶುಲ್ಕದಂತೆ ಮುಂದಿನ ಮೂರು ವರ್ಷಗಳಲ್ಲಿ, 2–8–1971ಕ್ಕೂ ಮುಂಚೆ ಅರ್ಜಿದಾರರಿಗೆ ಮರುಪಾವತಿಸಲು ಸಹ ರಾಜ್ಯಸರ್ಕಾರಕ್ಕೆ ನಿರ್ದೇಶನ ಇತ್ತಿದೆ. ಸಿವಿಲ್ ಅಪೀಲು ಸಂಖ್ಯೆ 1974ರ 1801ರಲ್ಲಿ ಸರ್ವೋಚ್ಚ ನ್ಯಾಯಾಲಯವು, ಉಚ್ಚ ನ್ಯಾಯಾಲಯದ ತೀರ್ಪನ್ನು ಸ್ಥಿರೀಕರಿಸುತ್ತ, 8(1)ನೇ ನಿಯಮವು, ಪರವಾನಗಿ ಶುಲ್ಕವನ್ನು ಪಾವತಿ ಮಾಡಬೇಕೆಂದು ಅಗತ್ಯಪಡಿಸುವ ಆ ಪ್ರಕರಣದಲ್ಲಿ ಅಧಿಕಾರ ಕೊಡುವ ಉಪಬಂಧವನ್ನು ಮೀರಿದೆ ಎಂದು ಅಭಿಪ್ರಾಯಪಟ್ಟಿದೆ. ಈ ನಿಯಮಗಳ ಮೇರೆಗೆ ಉದ್ದೇಶಿಸಿರುವ ಬಗೆಯ ಪರವಾನಗಿ ಶುಲ್ಕಕ್ಕಾಗಿ ಶಾಸನಬದ್ಧ ಉಪಬಂಧವನ್ನು ರಚಿಸಲು ವಿಧಾನಮಂಡಲಕ್ಕೆ ಸಾಧ್ಯವಿದೆಯಾದರೂ ಶಾಸನಬದ್ಧ ಅಧಿಕಾರವಿಲ್ಲದೆ ಪ್ರಶ್ನಿತ ವಿಧದ ನಿಯಮವನ್ನು ರಚಿಸಬಾರದಿತ್ತು ಎಂದು ಸಹ ಅಭಿಪ್ರಾಯಪಟ್ಟಿದೆ.

ಅದರಂತೆ, ಶುಲ್ಕ ವಿಧಿಸುವುದಕ್ಕೆ ನಿಯಮಗಳನ್ನು ರಚಿಸುವ ಹಾಗೂ ಪ್ರಶ್ನಿತ ನಿಯಮದ ಮೇರೆಗೆ ಮಾಡಲಾದ ಶುಲ್ಕದ ಸಂಗ್ರಹಣೆಯನ್ನೂ ಸಹ ಪೂರ್ವಾನ್ವಯವಾಗಿ ಸಿಂಧುಗೊಳಿಸಲು ಕರ್ನಾಟಕ ಅಬಕಾರಿ ಅಧಿನಿಯಮ, 1965 ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

(1993ರ ವಿಧಾನಸಭೆಯ ವಿಧೇಯಕ 30 ರಿಂದ ಪಡೆಯಲಾಗಿದೆ.)

**X**

**1995ರ ತಿದ್ದುಪಡಿ ಅಧಿನಿಯಮ 2.–** ಸಿವಿಲ್ ನ್ಯಾಯಾಲಯಗಳು, ಅಬಕಾರಿ ಆದಾಯದ ವಸೂಲಿಗಾಗಿ ನಿರ್ಬಂಧಕಾಜ್ಞೆಯನ್ನು ಮಾಡದಂತೆ ತಡೆಯುವುದು ಹಾಗೂ ಕರ್ನಾಟಕ ಅಬಕಾರಿ ಅಧಿನಿಯಮ, 1965ರ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಅನುಸರಿಸುವಾಗ ಅಂತಹ ಅಧಿಕಾರಿಯು ಅಥವಾ ಪ್ರಾಧಿಕಾರವು ಕೈಗೊಳ್ಳಲಾದ ಅಥವಾ ಕೈಗೊಳ್ಳಬಹುದಾದ ಯಾವುದೇ ಕ್ರಮದ ಸಂಬಂಧದಲ್ಲಿ ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ಪ್ರತಿಷೇಧಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1993ರ ವಿಧಾನಸಭೆಯ ವಿಧೇಯಕ ಸಂಖ್ಯೆ 42 ರಿಂದ ಪಡೆಯಲಾಗಿದೆ.)

**XI**

**1997ರ ತಿದ್ದುಪಡಿ ಅಧಿನಿಯಮ 7.–** ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲ್‌ಗಳು, ವಸತಿ ಗೃಹಗಳು ಮತ್ತು ವಿವಾಹ ಸಭಾಂಗಣಗಳ) ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ಸರಕುಗಳ ಪ್ರವೇಶದ ಮೇಲೆ ತೆರಿಗೆ ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 27), ಕರ್ನಾಟಕ ವೃತ್ತಿಗಳು, ಕಸುಬುಗಳ, ಅಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35), ಕರ್ನಾಟಕ ಅಬಕಾರಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 21), ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ 30), ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 25), ಮೈಸೂರು ಜೂಜು ತೆರಿಗೆ ಅಧಿನಿಯಮ, 1932 (1932ರ ಮೈಸೂರು ಅಧಿನಿಯಮ IX) ಗಳನ್ನು ತಿದ್ದುಪಡಿ ಮಾಡುವುದು ಹಾಗೂ ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವನೆಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಕಾರ್ಯರೂಪಕ್ಕೆ ತರುವುದು ಅಗತ್ಯವೆಂದು ಪರಿಗಣಿಸಲಾಗಿದೆ. ಕೆಲವೊಂದು ತತ್ಪರಿಣಾಮದ ತಿದ್ದುಪಡಿಗಳನ್ನು ಸಹ ಕಲ್ಪಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

(1997ರ ವಿಧಾನಸಭೆಯ ವಿಧೇಯಕ ಸಂಖ್ಯೆ 12 ರಿಂದ ಪಡೆಯಲಾಗಿದೆ.)

**XII**

**1998ರ ತಿದ್ದುಪಡಿ ಅಧಿನಿಯಮ 21.–** ಅಬಕಾರಿ ಉಪ-ಆಯುಕ್ತರ ಕೆಲವೊಂದು ಹುದ್ದೆಗಳನ್ನು ಅಬಕಾರಿ ಜಂಟಿ ಆಯುಕ್ತರಾಗಿ ಇತ್ತೀಚೆಗೆ ಮೇಲ್ದರ್ಜೆಗೇರಿಸಲಾಗಿದೆ. ಅಬಕಾರಿ ಜಂಟಿ ಆಯುಕ್ತರು ಕರ್ನಾಟಕ ಅಬಕಾರಿ ಅಧಿನಿಯಮ, 1965ರ ಮೇರೆಗೆ ಶಾಸನಬದ್ಧ ಅಧಿಕಾರಗಳನ್ನು ಚಲಾಯಿಸಲು ಅಗತ್ಯಪಡಿಸಲಾಗಿದೆ. ಆದರೆ, "ಅಬಕಾರಿ ಅಧಿಕಾರಿ" ಪರಿಭಾಷೆಯು ಅಬಕಾರಿಯ ಜಂಟಿ ಆಯುಕ್ತರನ್ನು ಒಳಗೊಂಡಿರುವುದಿಲ್ಲ. "ಅಬಕಾರಿಯ ಜಂಟಿ ಆಯುಕ್ತರು" ಪದವನ್ನು ಸಹ ಈ ಅಧಿನಿಯಮದಲ್ಲಿ ಪರಿಭಾಷಿಸಿರುವುದಿಲ್ಲ. ಆದ್ದರಿಂದ,

(i) "ಅಬಕಾರಿ ಜಂಟಿ ಆಯುಕ್ತರು" ಎಂಬ ಪದವನ್ನು ಪರಿಭಾಷಿಸಲು;

(ii) ಅಬಕಾರಿ ಅಧಿಕಾರಿಯ ಪರಿಭಾಷೆಯೊಳಗೆ ಅಬಕಾರಿಯ ಜಂಟಿ ಆಯುಕ್ತರನ್ನು ತರಲು;

(iii) ಅಬಕಾರಿಯ ಜಂಟಿ ಆಯುಕ್ತರಿಗೆ ಕೆಲವೊಂದು ಶಾಸನಬದ್ಧ ಅಧಿಕಾರಗಳನ್ನು ಚಲಾಯಿಸಲು ಅಧಿಕಾರ ಕೊಡಲು

– ಕರ್ನಾಟಕ ಅಬಕಾರಿ ಅಧಿನಿಯಮ, 1965ಕ್ಕೆ ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1998ರ ವಿಧಾನಸಭೆಯ ವಿಧೇಯಕ ಸಂಖ್ಯೆ 5 ರಿಂದ ಪಡೆದುಕೊಳ್ಳಲಾಗಿದೆ).

**XIII**

**1999ರ ತಿದ್ದುಪಡಿ ಅಧಿನಿಯಮ 12.**–ಅಬಕಾರಿ ಅಪರಾಧಗಳು ಕಡಿಮೆಯಾಗುವಂತೆ ಮಾಡುವ ಸಲುವಾಗಿ ನಿರೋಧಕ ಉಪಬಂಧವನ್ನು ಕಲ್ಪಿಸಲು ಕರ್ನಾಟಕ ಅಬಕಾರಿ ಅಧಿನಿಯಮ, 1965ರ 45ನೇ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪರಾಧಕ್ಕಾಗಿ ಕನಿಷ್ಠ 5,000 ರೂಪಾಯಿಗಳ ಮತ್ತು ಗರಿಷ್ಠ 25,000 ರೂಪಾಯಿಗಳ ದಂಡನೆಯನ್ನು ಗೊತ್ತುಪಡಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ, ಈ ಪ್ರಕರಣದ ಮೇರೆಗೆ 5,000 ರೂಪಾಯಿಗಳ ಗರಿಷ್ಠ ದಂಡವನ್ನು ಮಾತ್ರ ವಿಧಿಸಲಾಗುತ್ತಿದೆ. 1998-99ರ ಆಯವ್ಯಯ ಭಾಷಣದಲ್ಲಿ ನೀತಿಯನ್ನು ಪ್ರಕಟಣೆ ಮಾಡಲಾಗಿದೆ. ಸದರಿ ನೀತಿಯ ಪ್ರಕಟಣೆಯನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಕರ್ನಾಟಕ ಅಬಕಾರಿ ಅಧಿನಿಯಮ, 1965ರ 45ನೇ ಪ್ರಕರಣಕ್ಕೆ ತಿದ್ದುಪಡಿ ಮಾಡುವುದು ಅಗತ್ಯವಾಗಿದೆ.

ಆದ್ದರಿಂದ, ಈ ವಿಧೇಯಕ.

(1998ರ ವಿಧಾನಪರಿಷತ್ತಿನ ವಿಧೇಯಕ ಸಂಖ್ಯೆ 8 ರಿಂದ ಪಡೆದುಕೊಳ್ಳಲಾಗಿದೆ).

**XIV**

**2000ರ ತಿದ್ದುಪಡಿ ಅಧಿನಿಯಮ 21.**– ಮದ್ಯ ತಯಾರಕರು, ಸಗಟು ಮಾರಾಟಗಾರರು ಮತ್ತು ಚಿಲ್ಲರೆ ವ್ಯಾಪಾರಿಗಳು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದರು. ಮಾರಾಟ ತೆರಿಗೆ ಮತ್ತು ಅಬಕಾರಿ ಸುಂಕವನ್ನು ಸಂದಾಯ ಮಾಡುವುದಕ್ಕೆ ಸಂಬಂಧಿಸಿದ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಎರಡು ಇಲಾಖೆಯೊಂದಿಗೆ ವ್ಯವಹರಿಸಬೇಕಾಗಿದ್ದು, ಅದರಿಂದ ಆಡಳಿತಾತ್ಮಕ ಮತ್ತು ಕಾರ್ಯವಿಧಾನಕ್ಕೆ ಸಂಬಂಧಿಸಿದ ತೊಂದರೆಗಳು ಮತ್ತು ಅನಾನುಕೂಲಗಳಾಗುತ್ತಿರುವುದರಿಂದ ತೆರಿಗೆಯನ್ನು ಅಬಕಾರಿ ಸುಂಕದೊಂದಿಗೆ ಮತ್ತಷ್ಟು ವಿಲೀನಗೊಳಿಸಬೇಕೆಂದು ಅಲ್ಲದೆ, ಅಬಕಾರಿ ಸುಂಕವನ್ನು ಮಾರಾಟ ತೆರಿಗೆಯೊಂದಿಗೆ ವಿಲೀನಗೊಳಿಸಿದರೆ, ಪ್ರಕ್ರಿಯಾತ್ಮಕ ತೊಡಕು ಮುಂತಾದವು ಆಗದಂತೆ ಪ್ರಕ್ರಿಯೆ ಸರಳವಾಗುತ್ತದೆ. ಮೇಲ್ಕಂಡ ಮನವಿಗಳನ್ನು ಪರೀಕ್ಷಿಸಿದ ಕರ್ನಾಟಕ ಸರ್ಕಾರವು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 ಮತ್ತು ಕರ್ನಾಟಕ ಅಬಕಾರಿ ಅಧಿನಿಯಮ, 1965 ನ್ನು ತಿದ್ದುಪಡಿ ಮಾಡುವುದು ಮತ್ತು

(i) ಅಬಕಾರಿ ಸುಂಕ ವಿಧಿಸಬಹುದಾದ ವಸ್ತುಗಳ ಮೌಲ್ಯ, ವೆಚ್ಚ ಅಥವಾ ದರದ ಮೇಲೆ ಹೆಚ್ಚುವರಿ ಅಬಕಾರಿ ಸುಂಕವನ್ನು ವಿಧಿಸುವುದಕ್ಕೆ

(ii) ಮಾರಾಟ ತೆರಿಗೆ ಬಾಕಿ ಮೊತ್ತವನ್ನು ಅಬಕಾರಿ ರಾಜಸ್ವದ ಬಾಕಿ ಮೊತ್ತವೆಂದು ವಸೂಲಿ ಮಾಡುವುದಕ್ಕೆ.

(iii) ಬಾಕಿ ಇರುವ ಅಂಥ ತೆರಿಗೆಯ ಅಥವಾ ಇತರೆ ಮೊತ್ತವನ್ನು, ವಸೂಲಿ ಮಾಡುವ ಉದ್ದೇಶಕ್ಕಾಗಿ ಅಂಥ ತೆರಿಗೆ ಅಥವಾ ಇತರೆ ಬಾಕಿ ಮೊತ್ತವನ್ನು ಅಬಕಾರಿ ರಾಜಸ್ವದ ಬಾಕಿ ಮೊತ್ತವೆಂದು ಪರಿಗಣಿಸುವುದಕ್ಕೆ

– ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2000ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 38 ರಿಂದ ಪಡೆದುಕೊಳ್ಳಲಾಗಿದೆ).

**XV**

**2001ರ ತಿದ್ದುಪಡಿ ಅಧಿನಿಯಮ 15.**– ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾಪಗಳನ್ನು ಜಾರಿಗೆ ತರುವುದಕ್ಕಾಗಿ ಕರ್ನಾಟಕ ಅಬಕಾರಿ ಅಧಿನಿಯಮ, 1965ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2001ರ ವಿಧಾನಸಭೆಯ ವಿಧೇಯಕ ಸಂಖ್ಯೆ: 11 ಕಡತ ಸಂಖ್ಯೆ ಸಂವ್ಯಶಾಇ 16 ಶಾಸನ 2001ನ್ನು ನೋಡಿ).

**XVI**

**2003ರ ತಿದ್ದುಪಡಿ ಅಧಿನಿಯಮ 38.**– ಕರ್ನಾಟಕ ಅಬಕಾರಿ ಅಧಿನಿಯಮ, 1965ನ್ನು,–

i) ಅಬಕಾರಿ ಮರದ ಪರಿಭಾಷೆಯಲ್ಲಿರುವ "ಆಲ್ಕೋಹಾಲ್ ಅಂಶವನ್ನು ಒಳಗೊಂಡಿರುವ" ಪದಗಳನ್ನು ಬಿಟ್ಟುಬಿಡುವುದರ ಮೂಲಕ "ಹೆಂಡ" ಮತ್ತು "ಅಬಕಾರಿ ಮರ"ದ ಪರಿಭಾಷೆಯಲ್ಲಿನ ಸಂದಿಗ್ಧತೆಗಳನ್ನು ತೆಗೆದುಹಾಕುವುದಕ್ಕೆ.

ii) ಮುಟ್ಟುಗೋಲು ಹಾಕಿಕೊಂಡ ಸ್ವತ್ತಿನ ಮೌಲ್ಯಕ್ಕೆ ಸಮಾನವಾದ ಬ್ಯಾಂಕ್ ಖಾತರಿಯನ್ನು ಹಾಜರುಪಡಿಸಿದ ಮೇಲೆ, ಅಂತಹ ಸ್ವತ್ತಿನ ಮಾಲೀಕರುಗಳಿಗೆ 43ಎ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಮುಟ್ಟುಗೋಲು ಹಾಕಿಕೊಂಡ ಸ್ವತ್ತಿನ ಮಧ್ಯಕಾಲೀನ ಅಭಿರಕ್ಷೆಯನ್ನು ನೀಡುವುದಕ್ಕಾಗಿ ಉಪಬಂಧ ಕಲ್ಪಿಸುವುದಕ್ಕೆ.

iii) ಪರವಾನಗಿಯ ಷರತ್ತುಗಳನ್ನು ಅಥವಾ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಉಲ್ಲಂಘನೆಗಾಗಿ ಪರವಾನಗಿಯನ್ನು ರದ್ದುಗೊಳಿಸುವ ಅಥವಾ ಅಮಾನತ್ತುಗೊಳಿಸುವ ಬದಲು ಹಣದ ಸ್ವೀಕಾರಕ್ಕೆ ಅಥವಾ ದಂಡನೆಯನ್ನು ವಿಧಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದಕ್ಕೆ

– ಉಪಬಂಧವನ್ನು ಕಲ್ಪಿಸಲು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2003ರ ವಿಧಾನಸಭೆ ವಿಧೇಯಕ 04, ಡಿಪಿಎಎಲ್ 38 ಶಾಸನ 2003)

## XVII

**2004ರ ತಿದ್ದುಪಡಿ ಅಧಿನಿಯಮ 27.–** ಕರ್ನಾಟಕ ಅಬಕಾರಿ ಅಧಿನಿಯಮ, 1965ರ 16ಎ ಪ್ರಕರಣವು, ರಾಜ್ಯ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಇಲಾಖೆ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಕಂಪನಿಗೆ ಅಥವಾ ಏಜೆನ್ಸಿಗೆ, ಮದ್ಯವನ್ನು ತಯಾರಿಸಲು ಮತ್ತು/ಅಥವಾ ಮದ್ಯವನ್ನು ಬಾಟಲಿಗೆ ತುಂಬಿ ಮಾರಾಟ ಮಾಡುವ ಕಾರ್ಯವನ್ನು ವಹಿಸುವುದಕ್ಕಾಗಿ ಉಪಬಂಧ ಕಲ್ಪಿಸಿದೆ. ಅದಕ್ಕನುಗುಣವಾಗಿ, ಪ್ರಸಕ್ತ, ಮೆ॥ ಎಂಎಸ್‌ಐಎಲ್ ಮತ್ತು ಮೆ॥ ಮೈಶುಗರ್ ಕಂಪನಿಗಳಿಗೆ ಈ ಕಾರ್ಯವನ್ನು ವಹಿಸಲಾಗಿದೆ. ಎಂಎಸ್‌ಐಎಲ್‌ನಲ್ಲಿ ಪ್ರೈಮರಿ ಡಿಸ್ಟಿಲರಿ ಇಲ್ಲ. ಮೆ॥ ಮೈಶುಗರ್ ಕಂಪನಿಯು, ಕ್ಲಿಷ್ಟಕರವಾದ ಆರ್ಥಿಕ ಸ್ಥಿತಿಯಲ್ಲಿರುವುದರಿಂದ ಅಗತ್ಯಪಡಿಸುವಷ್ಟು ಪ್ರಮಾಣವನ್ನು ಪೂರೈಸುವ ಸ್ಥಿತಿಯಲ್ಲಿಲ್ಲ. ಇತ್ತೀಚೆಗೆ, ಶುದ್ಧೀಕರಿಸಿದ ಸ್ಪಿರಿಟ್‌ನ್ನು ಒದಗಿಸುವಲ್ಲಿ ಮುಖ್ಯ ಕಚ್ಚಾವಸ್ತುವಾದ ಕಾಕಾಂಬಿಯ (ಮೊಲಾಸಿಸ್) ಕೊರತೆಯು, ಸಾರಾಯಿಯ ತಯಾರಿಕೆಯ ಮತ್ತು ಸರಬರಾಜಿನ ಮೇಲೆ ಕ್ರಮೇಣ ಭಾದಕ ಉಂಟುಮಾಡುತ್ತಿದೆಯೆಂದು ತಿಳಿದುಬಂದಿದೆ. ಭಾರತ ಸರ್ಕಾರವು ಕಾಕಂಬಿಯ (ಮೊಲಾಸಿಸ್) ನಿಯಂತ್ರಣ ಆದೇಶವನ್ನು ರದ್ದುಗೊಳಿಸಿದ ನಂತರ ಮತ್ತು ರಾಜ್ಯ ಸರ್ಕಾರಕ್ಕೆ ಕಾಕಂಬಿಯ (ಮೊಲಾಸಿಸ್) ತಯಾರಿಕೆ ಮತ್ತು ಮಾರಾಟವನ್ನು ನಿಯಂತ್ರಿಸಲು ಯಾವುದೇ ನಿಯಂತ್ರಣ ಅಧಿಕಾರ ಇರುವುದಿಲ್ಲ. ಆದಾಗ್ಯೂ, ಕರ್ನಾಟಕ ವಿಧಾನ ಮಂಡಲವು ಅದನ್ನು ನಿಯಂತ್ರಿಸುವುದಕ್ಕೆ ಇತ್ತೀಚೆಗೆ ಒಂದು ವಿಧೇಯಕವನ್ನು ಅಂಗೀಕರಿಸಿದೆ ಮತ್ತು ಅದನ್ನು ರಾಷ್ಟ್ರಪತಿಗಳ ಸಮ್ಮತಿಗಾಗಿ ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. ಮುಕ್ತ ಮಾರುಕಟ್ಟೆಯಲ್ಲಿ ಸಾರಾಯಿಗೆ ಸುಂಕವನ್ನು ಸಂದಾಯ ಮಾಡದ ಅಂಶವೂ ಇದೆ. ಸಾರಾಯಿಯನ್ನು ತಯಾರಿಸುವುದಕ್ಕಾಗಿ ಶುದ್ಧೀಕರಿಸಿದ ಸ್ಪಿರಿಟ್ ಅಗತ್ಯಪಡಿಸಿದಷ್ಟು ಪ್ರಮಾಣದಲ್ಲಿ ಸರಬರಾಜಾಗುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ, ಸಾರಾಯಿ ತಯಾರಿಕೆಯನ್ನು ಉದಾರೀಕರಣಗೊಳಿಸುವುದು ಅವಶ್ಯಕವಾಗಿದೆ.

ಪ್ರಸ್ತುತ, ಡಿಸ್ಟಿಲರಿಯು ಅಥವಾ ಬ್ರೇವರಿಯು ಇಟ್ಟಿರುವ ದಾಖಲೆಗಳ ತಪಾಸಣೆ ಮತ್ತು ಪರಿಶೀಲನೆ ಮಾಡುವುದು ಅಬಕಾರಿ ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಯನ್ನು ಡಿಸ್ಟಿಲರಿಗೆ ಅಥವಾ ಬ್ರೇವರಿಗೆ ನಿಯುಕ್ತಿಗೊಳಿಸಿದ ಅಧಿಕಾರಿಗಳು ಮತ್ತು ವಿಶೇಷ ತಪಾಸಣೆಗಳ ಮೂಲಕವೂ ನಿರ್ವಹಿಸಲಾಗುತ್ತದೆ. ಆದಾಗ್ಯೂ, ಕರ್ನಾಟಕ ಅಬಕಾರಿ ಅಧಿನಿಯಮ, 1965ರಲ್ಲಿ ಆಜ್ಞಾಪಿಸಿರುವಂತೆ ದಾಖಲೆಗಳ ತಪಾಸಣೆ ಮತ್ತು ಪರಿಶೀಲನೆಗಿಂತಲೂ ಬಳಸಿದ ವಸ್ತುಗಳಿಗೆ ತಕ್ಕಂತೆ ತಯಾರಕರು ಉತ್ಪಾದಿಸಿದ ಉತ್ಪನ್ನವೆಷ್ಟು ಎಂಬ ಬಗ್ಗೆ ಅಭಿಪ್ರಾಯಕ್ಕೆ ಬರುವುದು ಅವಶ್ಯಕವಾಗಿದೆ. ತಪಾಸಣೆ/ಪರಿಶೋಧನೆಯ ಅಗತ್ಯ ಲಕ್ಷಣವೆಂದರೆ ಇನ್‌ಪುಟ್ ಮತ್ತು ಔಟ್‌ಪುಟ್ ಪರಸ್ಪರ ಸಂಬಂಧಿಸಿರಬೇಕು. ಇದು ವಿಶೇಷ ಕಾರ್ಯವಾಗಿದ್ದು, ಇದಕ್ಕಾಗಿ ತಜ್ಞರ ಸಹಾಯದ ಅಗತ್ಯವಿದೆ. ಕೇಂದ್ರ ಅಬಕಾರಿ ಅಧಿನಿಯಮ, 1944ರ 14ಎಎ ಪ್ರಕರಣದ ಮೇರೆಗೆ ಇದೇ ರೀತಿಯ ಅಗತ್ಯತೆಯನ್ನು ಕಡ್ಡಾಯಗೊಳಿಸಲಾಗಿದೆ. ಕರ್ನಾಟಕ ಅಬಕಾರಿ ಅಧಿನಿಯಮ, 1965ರ 51ನೇ ಪ್ರಕರಣದ ಮೇರೆಗೆ ತಯಾರಿಕೆ ಮತ್ತು ಮಾರಾಟದ ಸ್ಥಳಗಳಲ್ಲಿ ಪ್ರವೇಶಿಸಲು ಮತ್ತು ಪರಿಶೀಲಿಸಲು ಅಬಕಾರಿ ಆಯುಕ್ತರು, ಜಿಲ್ಲಾಧಿಕಾರಿ, ಅಬಕಾರಿ ಅಧಿಕಾರಿ ಮತ್ತು ಪೊಲೀಸ್ ಅಧಿಕಾರಿಗಳು ಅಧಿಕಾರವನ್ನು ಹೊಂದಿರುತ್ತಾರೆ. ಉದ್ದೇಶಿತ ಮೂರನೇ ಪಕ್ಷಕಾರನಿಗೆ ಇದೇ ರೀತಿಯಾದ ಅಧಿಕಾರ ನೀಡುವ ಸಲುವಾಗಿ ಕರ್ನಾಟಕ ಅಬಕಾರಿ ಅಧಿನಿಯಮ, 1965 ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

2004–05ನೇ ಸಾಲಿನ ಆಯವ್ಯಯ ಭಾಷಣದಲ್ಲಿ, ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ ಪ್ರಾಥಮಿಕ ಡಿಸ್ಟಿಲರಿಗಳಿಗೆ ಅವಕಾಶ ನೀಡುವ ಮೂಲಕ ಸಾರಾಯಿ ತಯಾರಿಕೆಯಲ್ಲಿ ಉದಾರೀಕರಣವನ್ನು ಘೋಷಿಸಿದ್ದರು. "ಸೆಕೆಂಡ್ಸ್"ಗಳನ್ನು ಅಥವಾ ಸುಂಕವನ್ನು ಪಾವತಿಸದ ಸಾರಾಯಿಯನ್ನು ತೆಗೆದುಹಾಕುವುದು ಮತ್ತು ಸಾರಾಯಿ ಆದಾಯವನ್ನು ಗಮನಾರ್ಹವಾಗಿ ಹೆಚ್ಚಿಸುವುದು ಈ ನೀತಿಯ ಪ್ರಾಥಮಿಕ ಉದ್ದೇಶ. ಅಲ್ಲದೆ, ಸಾರಾಯಿ ತಯಾರಿಕೆಯಲ್ಲಿನ ಉದಾರೀಕರಣದಿಂದ ಸಾರಾಯಿ ತಯಾರಿಕೆಯು ಮಾರುಕಟ್ಟೆಯಲ್ಲಿ ಅದರ ಬೇಡಿಕೆ ಮತ್ತು ಪೂರೈಕೆ ವಿದ್ಯಮಾನಕ್ಕನುಸಾರ ಮಾರುಕಟ್ಟೆ ಚಾಲಿತವಾದುದಾಗಿರಬೇಕೇ ಹೊರತು ಸಾರಾಯಿಯನ್ನು ಪೂರೈಸುವುದು ಸರ್ಕಾರದ ಜವಾಬ್ದಾರಿಯಾಗಿರತಕ್ಕದ್ದಲ್ಲ.

ಆದ್ದರಿಂದ ಈ ವಿಧೇಯಕ.

(2004ರ ವಿಧಾನಸಭೆಯ ವಿಧೇಯಕ ಸಂಖ್ಯೆ 19)

**XVIII**

**2005ರ ತಿದ್ದುಪಡಿ ಅಧಿನಿಯಮ 14.–** ರಾಜಿಗೆ ಅವಕಾಶ ಕಲ್ಪಿಸಿರುವ ಈಗಿರುವ ಅಧಿಕಾರಗಳನ್ನು ತೆಗೆದುಹಾಕುವ ಮೂಲಕ ಮತ್ತು ಅಧಿನಿಯಮದ ಅಡಿಯಲ್ಲಿನ ಅಪರಾಧಗಳನ್ನು ಸಂಜ್ಞೇಯ ಮತ್ತು ಜಾಮೀನುರಹಿತ ಅಪರಾಧಗಳನ್ನಾಗಿ ಮಾಡಿ ಕಾನೂನನ್ನು ಹೆಚ್ಚು ಕಠಿಣ ಕಾನೂನನ್ನಾಗಿ ಮಾಡುವ ಮೂಲಕ ಹೆಚ್ಚು ಆದಾಯವನ್ನು ಗಳಿಸಲು, ಅಬಕಾರಿ ಸುಂಕಗಳನ್ನು ತಪ್ಪಿಸುವುದನ್ನು ತಡೆಯಲು ಹೆಚ್ಚು ಕಠಿಣ ಅಬಕಾರಿ ಕಾನೂನನ್ನು ರಚಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2005ರ ವಿಧಾನಸಭೆ ವಿಧೇಯಕ ಸಂಖ್ಯೆ 13)

**XIX**

**2007ರ ತಿದ್ದುಪಡಿ ಅಧಿನಿಯಮ 27.–** 2007–08ನೇ ಸಾಲಿನ ಆಯವ್ಯಯ ಭಾಷಣದಲ್ಲಿ, 2007 ಜುಲೈ 01ರಿಂದ, ರಾಜ್ಯದಲ್ಲಿ ಸಾರಾಯಿ ಮಾರಾಟ ನಿಷೇಧಿಸಿರುವುದನ್ನು ಘೋಷಿಸಲಾಯಿತು. ಆದ್ದರಿಂದ, ಅಬಕಾರಿ ಅಧಿನಿಯಮ, 1965ರ 16ಎ ಮತ್ತು 16ಬಿ ಪ್ರಕರಣಗಳನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಇತ್ತೀಚೆಗೆ ಬೆಂಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಸಂಭವಿಸಿರುವ ಕಳ್ಳಭಟ್ಟಿ ದುರಂತವು 45 ಜೀವಗಳನ್ನು ಬಲಿತೆಗೆದುಕೊಂಡಿತ್ತು. ಅದನ್ನು ತಡೆಗಟ್ಟುವುದು ಅಗತ್ಯವೆಂದು ಪರಿಗಣಿಸಲಾಗಿದೆ ಮತ್ತು ಅನಧಿಕೃತ ಸ್ಥಳಗಳಲ್ಲಿ ಅನಧಿಕೃತ ವ್ಯಾಪಾರಿಗಳಿಂದ ಅಕ್ರಮ ಸಾರಾಯಿ ಮತ್ತು ನಕಲಿ ಹಾಗೂ ಕಲಬೆರಕೆ ಮದ್ಯವನ್ನು ಮಾರಾಟ ಮಾಡುವುದು ಈ ದುರಂತಗಳಿಗೆ ಪ್ರಮುಖ ಕಾರಣ. ಅಂತಹ ದುರಂತಗಳು ಮತ್ತೆ ಮರುಕಳಿಸುವುದನ್ನು ತಡೆಗಟ್ಟುವ ಸಲುವಾಗಿ, ಹಾನಿಕಾರಕ ವಿಷಪೂರಿತ ಪದಾರ್ಥಗಳನ್ನು ಅಥವಾ ರಾಸಾಯನಿಕಗಳನ್ನು ಅಥವಾ ಮಿಥೈಲ್ ಆಲ್ಕೋಹಾಲನ್ನು ಅಥವಾ ಭಾರತ ವಿಷಗಳ ಅಧಿನಿಯಮ, 1919 ರಲ್ಲಿ ಪರಿಭಾಷಿಸಿದಂತೆ ಯಾವುದೇ ಇತರೆ ವಿಷವನ್ನು ಅಥವಾ ಮಾನವ ಜೀವಕ್ಕೆ ಅಪಾಯವನ್ನುಂಟುಮಾಡುವ ಅಥವಾ ಮಾನವರಿಗೆ ತೀವ್ರ ಘಾಸಿಯನ್ನುಂಟುಮಾಡುವ ಪದಾರ್ಥಗಳನ್ನು ಮದ್ಯದಲ್ಲಿ ಬೆರೆಸಿ ಕಲಬೆರಕೆಯಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸಲು 37ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

ಕರ್ನಾಟಕ ಅಬಕಾರಿ ಅಧಿನಿಯಮ, 1965ರ ಉಪಬಂಧಗಳ ಮೇರೆಗೆ ಅಪರಾಧವನ್ನು ವರದಿ ಮಾಡುವಾಗ, ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಗೆ ಸೇರಿದ ಸಾರ್ವಜನಿಕ ಸಾರಿಗೆ ವಾಹನವನ್ನು ವಶಪಡಿಸಿಕೊಳ್ಳತಕ್ಕದ್ದಲ್ಲವೆಂಬುದನ್ನು ಪರಿಗಣಿಸಲಾಗಿದೆ. ಆದ್ದರಿಂದ, 43ನೇ ಪ್ರಕರಣಕ್ಕೆ ತಿದ್ದುಪಡಿ ಮಾಡಬೇಕೆಂದು ಪ್ರಸ್ತಾಪಿಸಲಾಗಿದೆ.

ಪ್ರತಿಯೊಬ್ಬ ಲೈಸೆನ್ಸುದಾರನ ಲೆಕ್ಕಪತ್ರಗಳನ್ನು ಅಥವಾ ದಾಖಲೆಗಳನ್ನು ಯಾವ ಷರತ್ತುಗಳ ಪ್ರಕಾರ ಹಾಗೂ ಪರಿಮಿತಿಗಳ ಪ್ರಕಾರ ಕಾಸ್ಟ್ ಅಕೌಂಟೆಂಟರು ಲೆಕ್ಕಪರಿಶೋಧನೆ ಮಾಡಬೇಕೋ ಆ ಷರತ್ತುಗಳನ್ನು ಮತ್ತು ನಿರ್ಬಂಧಗಳನ್ನು ಗೊತ್ತುಪಡಿಸುವ ಸಲುವಾಗಿ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡಲು 51ಎ ಪ್ರಕರಣವನ್ನು ಪತ್ಯಾಯೋಜಿಸಬೇಕೆಂದು ಪ್ರಸ್ತಾಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2007ರ ವಿಧಾನಸಭೆ ವಿಧೇಯಕ ಸಂಖ್ಯೆ 39)

(ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 51ನೇ ನಮೂದು).

**XX**

**2010ರ ತಿದ್ದುಪಡಿ ಅಧಿನಿಯಮ 19.–** ಪ್ರಸುತ ಕರ್ನಾಟಕ ಅಬಕಾರಿ ಅಧಿನಿಯಮ, 1965ರ 67ನೇ ಪ್ರಕರಣದಡಿಯಲ್ಲಿ ರಾಜ್ಯ ಸರ್ಕಾರಕ್ಕೆ, ಕೆಲವು ಸಂಸ್ಥೆಗಳ ಪ್ರವರ್ಗಗಳಿಗೆ ಮಾರಾಟ ಮಾಡಲಾದ ಯಾವುದೇ ಮದ್ಯದ ಸಂಬಂಧದಲ್ಲಿ 22ನೇ ಪ್ರಕರಣದಡಿಯಲ್ಲಿ ಸಂದಾಯ ಮಾಡತಕ್ಕ ಅಬಕಾರಿ ಬಾಕಿಗಳಿಗೆ ಉತ್ತರಾನ್ವಯವಾಗಿ ಅಥವಾ ಪೂರ್ವಾನ್ವಯವಾಗಿ ವಿನಾಯಿತಿ ನೀಡುವುದಕ್ಕೆ ಅಥವಾ ಅವನ್ನು ಕಡಿಮೆ ಮಾಡುವುದಕ್ಕೆ ಅಧಿಕಾರ ನೀಡಲಾಗಿದೆ.

ಇತ್ತೀಚೆಗೆ, ರಾಜ್ಯದ ರಾಜಧಾನಿಯಲ್ಲಿ ಕಾನ್ಸಲ್ ಕಚೇರಿಗಳು / ರಾಜತಾಂತ್ರಿಕ ಪ್ರತಿನಿಧಿಗಳ ಕಚೇರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಾರಂಭ ಮಾಡಿವೆ. ಬೆಂಗಳೂರಿನಲ್ಲಿ ಜರ್ಮನಿ, ಜಪಾನ್, ಫ್ರಾನ್ಸ್, ಬ್ರಿಟನ್, ಸ್ವಿಟ್ಜರ್‌ಲ್ಯಾಂಡ್, ಐರ್‌ಲೆಂಡ್, ಮಾಲ್ಡಿವ್ಸ್, ಫಿನ್‌ಲ್ಯಾಂಡ್ ಮತ್ತು ಸ್ಪೈನ್‌ನ ಕಾನ್ಸಲ್ ಕಚೇರಿಗಳು ಸ್ಥಾಪನೆಯಾಗಿವೆ. ಘನತೆವೆತ್ತ ರಾಜತಾಂತ್ರಿಕರಿಗೆ ಗೌರವಾರ್ಪಣೆಯಾಗಿ ಮದ್ಯದ ಮೇಲಿನ ತೆರಿಗೆ ವಿನಾಯಿತಿಯನ್ನು ನೀಡುವ ಸದವಕಾಶ ರಾಜ್ಯ ಸರ್ಕಾರಕ್ಕೆ ದೊರಕಿದೆ.

ಆದ್ದರಿಂದ, 'ರಾಜತಾಂತ್ರಿಕ ಪ್ರತಿನಿಧಿಗಳಿಗೆ' ಮಾರಾಟ ಮಾಡಲಾದ ಮದ್ಯದ ಮೇಲೆ ತೆರಿಗೆ ವಿನಾಯಿತಿ ನೀಡುವುದನ್ನು ಸಾಧ್ಯಗೊಳಿಸುವ ಉಪಬಂಧವನ್ನು ಸೇರಿಸಿ ಕರ್ನಾಟಕ ಅಬಕಾರಿ ಅಧಿನಿಯಮ, 1965ರ 67(1)(i)ನೇ ಪ್ರಕರಣಕ್ಕೆ ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2009ರ ವಿಧಾನಸಭೆ ವಿಧೇಯಕ ಸಂಖ್ಯೆ 41 ಕಡತ ಸಂಖ್ಯೆ ಸಂವ್ಯಶಾಇ 38 ಶಾಸನ 2009]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 8 ಮತ್ತು 51ನೇ ನಮೂದು].

**XXI**

**2013ರ ತಿದ್ದುಪಡಿ ಅಧಿನಿಯಮ ಸಂಖ್ಯೆ 26.–** ರಾಜ್ಯದಲ್ಲಿ ಮಾರಾಟ ಮಾಡಲು ಮದ್ಯವನ್ನು ವಿತರಿಸುವುದಕ್ಕಾಗಿ ಕರ್ನಾಟಕ ರಾಜ್ಯ ಮದ್ಯಗಳ ಮಂಡಲಿಯನ್ನು ಸ್ಥಾಪಿಸಲಾಗಿತ್ತು. ಸರ್ಕಾರವು ನಿಗಮಕ್ಕೆ ವಿತರಕರ ಲೈಸೆನ್ಸ್ ಅನ್ನು ಮಂಜೂರು ಮಾಡುತ್ತದೆ ಮತ್ತು ನಿಗಮದಿಂದ ವಿಶೇಷ ಹಕ್ಕು ಶುಲ್ಕವನ್ನು ಸಂಗ್ರಹಿಸುತ್ತದೆ. ವಿಶೇಷಾಧಿಕಾರ ಶುಲ್ಕದ ಸಂಗ್ರಹಣಾ ಯೋಜನೆಯ ಅರ್ಥ ವಿವರಣೆಯಲ್ಲಿ ಸ್ಪಷ್ಟತೆಯನ್ನು ತರುವ ದೃಷ್ಟಿಯಿಂದ, ಸಂಗ್ರಹಿಸಲಾದ ವಿಶೇಷಾಧಿಕಾರ ಶುಲ್ಕವನ್ನು ಸರ್ಕಾರದ ರಾಜಸ್ವದ ಭಾಗವೆಂದು ಯಾವಾಗಲೂ ಪರಿಗಣಿಸುವ ಸಲುವಾಗಿ ಪೂರ್ವಾನ್ವಯ ಪರಿಣಾಮವುಳ್ಳಂತೆ ಕರ್ನಾಟಕ ಅಬಕಾರಿ ಅಧಿನಿಯಮದ 24ನೇ ಪ್ರಕರಣವನ್ನು ತಿದ್ದುಪಡಿ ಮಾಡಲು 2013–14ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2013ರ ವಿಧಾನಸಭೆ ವಿಧೇಯಕ ಸಂಖ್ಯೆ 14 ಕಡತ ಸಂಖ್ಯೆ ಸಂವ್ಯಶಾಇ 22 ಶಾಸನ 2013]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 51ನೇ ನಮೂದು].

**XXII**

**2014ರ ತಿದ್ದುಪಡಿ ಅಧಿನಿಯಮ 11.–** ಲೈಸೆನ್ಸ್ ಫೀಜು, ಅಬ್ಕಾರಿ ಶುಲ್ಕ, ಹೆಚ್ಚುವರಿ ಅಬ್ಕಾರಿ ಶುಲ್ಕ ಅಥವಾ ಯಾವುದೇ ಇತರ ರೀತಿಯ ಫೀಜಿನಂಥ ಎಲ್ಲಾ ಅಬ್ಕಾರಿ ರಾಜಸ್ವವನ್ನು ವಿದ್ಯುನ್ಮಾನ ರವಾನೆಯ (ರೆಮಿಟೆನ್ಸ್) ಮೂಲಕ ಸಂದಾಯ ಮಾಡುವ ಸೌಲಭ್ಯವನ್ನು ಕಲ್ಪಿಸುವುದಕ್ಕಾಗಿ ಕರ್ನಾಟಕ ಅಬ್ಕಾರಿ ಅಧಿನಿಯಮ, 1965ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2014ರ ವಿಧಾನಸಭೆ ವಿಧೇಯಕ ಸಂಖ್ಯೆ 28 ಕಡತ ಸಂಖ್ಯೆ ಸಂವ್ಯಶಾಇ 54 ಶಾಸನ 2013]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 51ನೇ ನಮೂದು].

**XXIII**

**2017ರ ತಿದ್ದುಪಡಿ ಅಧಿನಿಯಮ 01.–** ಸನ್ಮಾನ್ಯ ಮುಖ್ಯಮಂತ್ರಿಯವರು 2015–16ರ ಆಯವ್ಯಯ ಭಾಷಣದಲ್ಲಿ, ತೆಂಗಿನ ಮರಗಳಿಂದ ಮಿತ ಪ್ರಮಾಣದಲ್ಲಿ "ನೀರಾ"ವನ್ನು ತೆಗೆಯಲು ತೆಂಗು ಬೆಳೆಗಾರರ ಸಂಯುಕ್ತ ಸಂಘದ ಸದಸ್ಯರಿಗೆ ಅನುಮತಿ ನೀಡಲು ಮತ್ತು ಅದರಿಂದಾಗಿ ತೆಂಗು ಬೆಳೆಗಾರರ ಆದಾಯದಲ್ಲಿ ಪ್ರಮುಖ ಹೆಚ್ಚಳವನ್ನು ತರಲು, ಅಬಕಾರಿ ಅಧಿನಿಯಮಕ್ಕೆ ತಿದ್ದುಪಡಿಯನ್ನು ಪ್ರಸ್ತಾವಿಸಿದ್ದರು. ಕೇರಳ, ತಮಿಳುನಾಡು, ಮಹಾರಾಷ್ಟ್ರ, ಗೋವಾ ಇಂಥ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಲಕ್ಷದ್ವೀಪ ಮತ್ತು ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ನೀರಾ ಉತ್ಪಾದನೆಯನ್ನು ಕಾನೂನಾತ್ಮಕವಾಗಿ ಅನುಮತಿಸಲಾಗಿದೆ.

ಆದ್ದದರಿಂದ, ಕರ್ನಾಟಕ ಅಬಕಾರಿ ಅಧಿನಿಯಮ, 1965ನ್ನು ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು, ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:–

(i) "ಹೆಂಡ" ಪರಿಭಾಷೆಯಿಂದ "ಹುಳಿ ಹಿಡಿಯದ ರಸ" ಪದವನ್ನು ತೆಗೆದು ಹಾಕುವುದು ಮತ್ತು "ನೀರಾ"ವನ್ನು "ಹೆಂಡ"ದಿಂದ ಪ್ರತ್ಯೇಕಿಸುವುದು;

(ii) "ನೀರಾ" ಪದವನ್ನು ಪರಿಭಾಷಿಸುವುದು;

(iii) ನೀರಾ ತೆಗೆಯುವುದನ್ನು ಮತ್ತು ನೀರಾ ಉತ್ಪನ್ನಗಳನ್ನು ತಯಾರಿಸುವುದನ್ನು ನಿಯಂತ್ರಿಸುವುದು; ಮತ್ತು

(iv) 13ಎ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳ ಉಲ್ಲಂಘನೆಗೆ ದಂಡನೆಯನ್ನು ಕಲ್ಪಿಸುವುದು.

ಆದ್ದರಿಂದ ಈ ವಿಧೇಯಕ.

[2016ರ ವಿಧಾನಸಭೆ ವಿಧೇಯಕ ಸಂಖ್ಯೆ 38 ಕಡತ ಸಂಖ್ಯೆ ಸಂವ್ಯಶಾಇ 53 ಶಾಸನ 2016]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 51ನೇ ನಮೂದು].

**ಕರ್ನಾಟಕ ಸರ್ಕಾರ**

# 1966ರ 21ನೇ ಕರ್ನಾಟಕ ಅಧಿನಿಯಮ

(ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲನೆಯ ಸಲ 1966ರ ಆಗಸ್ಟ್ ಹದಿನೆಂಟನೆಯ ದಿನಾಂಕದಂದು ಪ್ರಕಟವಾಗಿದೆ)

# ಕರ್ನಾಟಕ ಅಬ್ಕಾರಿ ಅಧಿನಿಯಮ, 1965

(1966ರ ಆಗಸ್ಟ್ ಮೂರನೆಯ ದಿನಾಂಕದಂದು ರಾಷ್ಟ್ರಪತಿಯ ಅನುಮತಿ ಪಡೆದಿದೆ)

(1970ರ 1, 1971ರ 1, 1976ರ 61, 1982ರ 32, 1987ರ 28, 1987ರ 36, 1994ರ 1, 1994ರ 2, 1995ರ 2, 1997ರ 7, 1998ರ 21, 1999ರ 12, 2000ರ 21, 2001ರ 15, 2003ರ 38, 2004ರ 27, 2005ರ 14, 2007ರ 27, 2010ರ 19, 2013ರ 26, 2014ರ 11 ಹಾಗೂ 2017ರ 1 ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ)

ಇದು [1][ಕರ್ನಾಟಕ ರಾಜ್ಯ][1]ದಲ್ಲಿ ಏಕರೂಪದ ಅಬ್ಕಾರಿ ಕಾನೂನನ್ನು ಉಪಬಂಧಿಸುವ ಅಧಿನಿಯಮ.

[1][ಕರ್ನಾಟಕ ರಾಜ್ಯ][1]ದಲ್ಲಿ, ಮದ್ಯ ಮತ್ತು ಮಾದಕ ದ್ರವ್ಯಗಳ ಉತ್ಪಾದನೆ, ತಯಾರಿ, ಸ್ವಾಧೀನ, ಆಮದು, ರಫ್ತು, ಸಾಗಾಣಿಕೆ, ಖರೀದಿ ಮತ್ತು ಮಾರಾಟಗಳಿಗೆ ಸಂಬಂಧಿಸಿದಂತೆ ಏಕರೂಪವಾದ ಕಾನೂನನ್ನು ರಚಿಸುವುದಕ್ಕೆ ಮತ್ತು ಅವುಗಳ ಮೇಲೆ ಅಬ್ಕಾರಿ ಶುಲ್ಕವನ್ನು ವಿಧಿಸುವುದಕ್ಕೆ ಮತ್ತು ಈ ಮುಂದಿನ ಇತರ ಕೆಲವು ವಿಷಯಗಳ ಬಗ್ಗೆ ಉಪಬಂಧಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನಾರನೆಯ ವರ್ಷದಲ್ಲಿ [1][ಕರ್ನಾಟಕ][1] ರಾಜ್ಯದ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿಸಲಾಗಿದೆ.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

## ಅಧ್ಯಾಯ-I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಅಬ್ಕಾರಿ ಅಧಿನಿಯಮ, 1965 ಎಂದು ಕರೆಯತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

(2) ಇದು ಇಡೀ [1][ಕರ್ನಾಟಕ ರಾಜ್ಯ][1]ಕ್ಕೆ ವ್ಯಾಪ್ತವಾಗುತ್ತದೆ.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

(3) ಇದು ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ, [1][ದಿನಾಂಕದಂದು][1] ಜಾರಿಗೆ ಬರತಕ್ಕದ್ದು.

1. ಅಧಿಸೂಚನೆಯ ಮೂಲಕ 30.09.1967ರಿಂದ ಅಧಿನಿಯಮ ಜಾರಿಗೆ ಬಂದಿದೆ.

(4) ಈ ಅಧಿನಿಯಮದ ಎಲ್ಲ ಉಪಬಂಧಗಳು, 1961ರ [1][ಕರ್ನಾಟಕ][1] ಪಾನ ನಿರೋಧ ಅಧಿನಿಯಮವು (1962ರ 17ನೇ [1][ಕರ್ನಾಟಕ][1] ಅಧಿನಿಯಮ) ಜಾರಿಯಲ್ಲಿರದ ರಾಜ್ಯದ ಪ್ರದೇಶಗಳಿಗೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮವು ಜಾರಿಯಲ್ಲಿದ್ದ ಪ್ರದೇಶಗಳಲ್ಲಿ ಸದರಿ ಅಧಿನಿಯಮದಲ್ಲಿ ಉಲ್ಲೇಖಿಸಿದ ಮಟ್ಟಿಗೆ ಅನ್ವಯಿಸತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ಬೀರ್" ಎಂಬುದು, ಏಲ್ ಸ್ಟೌಟ್ ಮತ್ತು ಪೋರ್ಟರ್‌ಗಳನ್ನು ಒಳಗೊಳ್ಳುತ್ತದೆ;

(2) "ಸೀಸೆ ತುಂಬುವುದು" ಎಂದರೆ, ಮಾರಾಟದ ಉದ್ದೇಶಕ್ಕಾಗಿ, ತಯಾರಿಕೆಯ ಯಾವುದೇ ಪದ್ಧತಿಯನ್ನು ಅನುಸರಿಸಿರಲಿ, ಇಲ್ಲದಿರಲಿ, ಮರದ ಪೀಪಾಯಿ ಅಥವಾ ಇತರ ಪಾತ್ರೆಯಿಂದ ಸೀಸೆಗೆ, ಜಾಡಿಗೆ, ಫ್ಲಾಸ್ಕಿಗೆ [5][ಪಾಲಿಥೀನ್

ಸ್ಯಾಷೆಗೆ][5] ಅಥವಾ ಅದೇ ಬಗೆಯ ಬೇರೊಂದು ಪಾತ್ರೆಗೆ ಮದ್ಯವನ್ನು ತುಂಬುವುದು ಮತ್ತು ಇದು ಪುನಃ ಸೀಸೆಗೆ ತುಂಬುವುದನ್ನು ಒಳಗೊಳ್ಳುತ್ತದೆ;

(3) "ಸಾಗುವಳಿ" ಎಂಬುದು ಬೆಳೆಯುವಾಗ ಸಸಿಯನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವುದನ್ನು ಅಥವಾ ರಕ್ಷಿಸುವುದನ್ನು ಒಳಗೊಳ್ಳುವುದು ಮತ್ತು ಅದನ್ನು ಬಿತ್ತನೆ ಮಾಡಿ ಬೆಳೆಸುವುದು ಎಂಬುದು ಅವಶ್ಯವಾಗಿ ಇಂಗಿತವಾಗಿರಬೇಕಾಗಿಲ್ಲ;

(4) "ಗುಣಾಪಹೃತ" ಎಂದರೆ ಮಾನವ ಬಳಕೆಗೆ ಯೋಗ್ಯವಲ್ಲದಂತಾಗಿಸುವ ಉದ್ದೇಶಕ್ಕಾಗಿ ನಿಯಮಿಸಿದ ವಿಧಾನಕ್ಕೆ ಒಳಪಟ್ಟುದು;

[2][(5) "ಡೆಪ್ಯುಟಿ ಕಮಿಷನರ್" ಎಂದರೆ ರೆವಿನ್ಯೂ ಜಿಲ್ಲೆಯ ಡೆಪ್ಯುಟಿ ಕಮಿಶನರು;][2]

[3][(5ಎ) "ಅಬ್ಕಾರಿ ಡೆಪ್ಯುಟಿ ಕಮಿಷನರ್" ಎಂದರೆ 4ಎ ಪ್ರಕರಣದ ಅಡಿಯಲ್ಲಿ ನಿಯುಕ್ತನಾದ ಅಬ್ಕಾರಿ ಡೆಪ್ಯುಟಿ ಕಮಿಷನರು;][3]

(6) "ಅಬ್ಕಾರಿ ಶುಲ್ಕಕ್ಕೆ ಗುರಿಯಾಗುವ ವಸ್ತುಗಳು" ಎಂದರೆ,–

(ಎ) ಯಾವುದೇ ಮದ್ಯ,

(ಬಿ) ಯಾವುದೇ ಮಾದಕ ದ್ರವ್ಯ,

(ಸಿ) ಅಫೀಮು, ಅಥವಾ

(ಡಿ) ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಅಬ್ಕಾರಿ ಶುಲ್ಕಕ್ಕೆ ಗುರಿಯಾಗುವ ವಸ್ತುಗಳೆಂದು ಘೋಷಿಸಬಹುದಾದಂಥ ಇತರ ಮಂಪರ ದ್ರವ್ಯಗಳು, ಮಂಪರಕಗಳ ಮತ್ತು ಮಂಪರಕವಲ್ಲದ ದ್ರವ್ಯಗಳು;

(7) "ಅಬ್ಕಾರಿ ಕಮಿಶನರು" ಎಂದರೆ 3ನೇ ಪ್ರಕರಣದ ಅಡಿಯಲ್ಲಿ ಅಬ್ಕಾರಿ ಕಮಿಶನರು ಎಂದು ನೇಮಿಸಿದ ಅಧಿಕಾರಿ;

(8) "ಅಬ್ಕಾರಿ ಶುಲ್ಕ" ಮತ್ತು ಸಂದರ್ಭಾನುಸಾರವಾಗಿ "ಪ್ರತಿ ಶುಲ್ಕ" ಎಂದರೆ, ಸಂವಿಧಾನದ ಏಳನೆಯ ಅನುಸೂಚಿಯ IIನೇ ಪಟ್ಟಿಯ 51ನೇ ನಮೂದಿನಲ್ಲಿ ಹೇಳಲಾದ ಅಂಥ ಅಬ್ಕಾರಿ ಶುಲ್ಕ ಅಥವಾ ಪ್ರತಿಶುಲ್ಕ;

[2][(9)"ಅಬ್ಕಾರಿ ಇನ್ಸ್‌ಪೆಕ್ಟರ್" ಎಂದರೆ 6ನೆಯ ಪ್ರಕರಣದ ಅಡಿಯಲ್ಲಿ ನಿಯುಕ್ತನಾದ ಅಬ್ಕಾರಿ ಇನ್ಸ್‌ಪೆಕ್ಟರ್;][2]

(10) "ಅಬ್ಕಾರಿ ಅಧಿಕಾರಿ" ಎಂದರೆ, ಅಬ್ಕಾರಿ ಕಮಿಶನರ್, [6][ಅಬ್ಕಾರಿ ಜಂಟಿ ಕಮಿಶನರು][6] ಡೆಪ್ಯುಟಿ ಕಮಿಶನರು, [3][ಅಬ್ಕಾರಿ ಡೆಪ್ಯುಟಿ ಕಮಿಶನರು][3] ಅಥವಾ ಕಾನೂನುಬದ್ಧವಾಗಿ ನೇಮಿಸಿದ [2][ಪ್ರಕರಣ 5, ಪ್ರಕರಣ 5ಎ ಅಥವಾ ಪ್ರಕರಣ 6ರ][2] ಅಡಿಯಲ್ಲಿ ಅಧಿಕಾರ ನಿಹಿತನಾದ ಯಾವನೇ ಅಧಿಕಾರಿ ಅಥವಾ ಇತರ ವ್ಯಕ್ತಿ;

(11)"ಅಬ್ಕಾರಿ ರಾಜಸ್ವ" ಎಂದರೆ ಈ ಅಧಿನಿಯಮದ ಅಥವಾ ಮದ್ಯ ಅಥವಾ ಮಾದಕ ದ್ರವ್ಯಗಳಿಗೆ ಸಂಬಂಧಿಸಿದ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ವಿಧಿಯ ಉಪಬಂಧಗಳ ಮೇರೆಗೆ ವಿಧಿಸಿದ ಅಥವಾ ಆದೇಶಿಸಿದ ಯಾವುದೇ ಸುಂಕ, ಫೀಜು ತೆರಿಗೆ, ಬಾಡಿಗೆ, ಜುಲ್ಮಾನೆ ಅಥವಾ ಮುಟ್ಟುಗೋಲಿನಿಂದ ಬಂದ ಅಥವಾ ಬರಬಹುದಾದ ರಾಜಸ್ವ;

[3][(11ಎ) "ಅಬ್ಕಾರಿ ಮರ" ಎಂಬುದು ಅದರ ಹುಳಿಯೊಡೆದ ಅಥವಾ ಹುಳಿಯೊಡೆಯದ ರಸದಲ್ಲಿ ಮದ್ಯಾಂಶವಿರುವ ಮತ್ತು ಅದರಿಂದ ಹೆಂಡ ಅಥವಾ ಇತರ ಯಾವುದೇ ಮದ್ಯವನ್ನು ತಯಾರಿಸಬಹುದಾದ ಗುಲ್ಮೊಹವಾ, ತೆಂಗು, ಈಚಲು, ತಾಳೆ ಖರ್ಜೂರ ಬಗನಿ ಅಥವಾ ದೊಡ್ಡಸಾಲ ಮರ ಅಥವಾ ಯಾವುದೇ ಇತರ ಮರ;][3]

(12) "ರಫ್ತು" ಎಂದರೆ, 1962ರ ಸೀಮಾಶುಲ್ಕ ಅಧಿನಿಯಮದ (1962ರ ಕೇಂದ್ರ ಅಧಿನಿಯಮ 52) 2ನೇ ಪ್ರಕರಣದಲ್ಲಿ ಪರಿಭಾಷಿಸಿದ ಸೀಮಾಶುಲ್ಕಠಾಣೆಯಿಂದಲ್ಲದೆ ಅನ್ಯಥಾ ರಾಜ್ಯದ ಹೊರಗೆ ಒಯ್ಯುವುದು;

[2][(13) "ವಿದೇಶಿ ಮದ್ಯ" ಎಂಬುದು ಭಾರತಕ್ಕೆ ಆಮದು ಮಾಡಿಕೊಳ್ಳುವ ಪ್ರತಿಯೊಂದು ಮದ್ಯವನ್ನೂ ಒಳಗೊಳ್ಳುವುದು;][2]

(14) "ಭಾರತದಲ್ಲಿ ಆಮದು" ಎಂಬ ಪದಾವಳಿಯಲ್ಲಿ ಇರುವ ಆಮದು ಎನ್ನುವುದನ್ನುಳಿದು ಎಂದರೆ "ಆಮದು" ಎಂದರೆ ಸೀಮಾಶುಲ್ಕ ಅಧಿನಿಯಮದ (1962ರ ಕೇಂದ್ರ ಅಧಿನಿಯಮ 52) 2ನೆಯ ಪ್ರಕರಣದಲ್ಲಿ ಪರಿಭಾಷಿಸಿದಂತೆ ಸೀಮಾಶುಲ್ಕ ಠಾಣೆಯಿಂದಲ್ಲದೆ ಅನ್ಯಥಾ ರಾಜ್ಯದ ಒಳಗೆ ತರುವುದು;

[2][(15) "ಭಾರತೀಯ ಮದ್ಯ" ಎಂದರೆ ಭಾರತಕ್ಕೆ ಆಮದು ಮಾಡಿಕೊಳ್ಳುವ ಜಿನ್, ಬ್ರಾಂದಿ, ವಿಸ್ಕಿ ಅಥವಾ ರಮ್ಮಿನಂತೆ ಅದೇ ರೀತಿಯಲ್ಲಿ ಉತ್ಪಾದಿಸಿದ, ತಯಾರಿಸಿದ ಅಥವಾ ಮಿಶ್ರಣ ಮಾಡಿದ ಮದ್ಯ ಮತ್ತು ಇದು, ಮದ್ಯಸಾರದಿಂದಾದ ಅಥವಾ ಅದನ್ನುಳ್ಳ ಮಿಲ್ಕಪಂಚ್, ಮತ್ತು ಇತರ ಮದ್ಯಗಳನ್ನೂ ಒಳಗೊಳ್ಳುತ್ತದೆ;][2]

(16) "ಮಾದಕ" ಎಂದರೆ (18)ನೇ ಖಂಡದಲ್ಲಿ, ಪರಿಭಾಷಿಸಿದಂಥ ಯಾವುದೇ ಮದ್ಯ ಅಥವಾ (17)ನೇ ಖಂಡದಲ್ಲಿ ಪರಿಭಾಷಿಸಿದಂಥ ಯಾವುದೇ ಮಾದಕ ದ್ರವ್ಯ;

(17) "ಮಾದಕ ದ್ರವ್ಯ" ಎಂದರೆ;–

(i) ಭಂಗಿ, ಸಿದ್ಧಿ ಆಥವಾ ಗಾಂಜಾ ಎಂದು ಕರೆಯಲ್ಪಡುವ ಎಲ್ಲ ಪ್ರಭೇದಗಳೂ ಸೇರಿ ಭಾರತೀಯ ಮಾದಕ ನಾರುಗಿಡದ ಎಲೆಗಳು, ಸಣ್ಣ ಕಾಂಡಗಳು ಮತ್ತು ಹೂ ಬಿಡುವ ಅಥವಾ ಹಣ್ಣಾಗುವ ತುದಿಗಳು;

(ii) ಚರಸ್ ಎಂದರೆ, ಪಿಂಡಿಕಟ್ಟಲು ಮತ್ತು ಸಾಗಿಸಲು ಅವಶ್ಯಕವಾದುದನ್ನುಳಿದು ಯಾವುದೇ ವ್ಯತ್ಯಾಸಕ್ಕೆ ಒಳಪಡಿಸಿರದ ಭಾರತೀಯ ನಾರುಗಿಡದಿಂದ ಪಡೆದುಕೊಂಡ ಅಂಟು;

(iii) ಮೇಲೆ ಹೇಳಿದ ಯಾವುದೇ ಪ್ರಕಾರದ ಮಾದಕ ದ್ರವ್ಯಗಳ ಮದ್ಯವರ್ತಿ ವಸ್ತುಗಳ ಸಹಿತವಾದ ಅಥವಾ ರಹಿತವಾದ ಯಾವುದೇ ಮಿಶ್ರಣ, ಅಥವಾ ಅವುಗಳಿಂದ ತಯಾರಿಸಿದ ಯಾವುದೇ ಪಾನೀಯ; ಮತ್ತು

(iv) ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಮಾದಕ ದ್ರವ್ಯವೆಂದು ಘೋಷಿಸುವ ಇತರ ಮಾದಕ ದ್ರವ್ಯ ಅಥವಾ ಮಂಪರು ಪದಾರ್ಥ, ಅಂಥ ಪದಾರ್ಥವು ಅಫೀಮು, ಕೋಕೆ ಎಲೆ ಅಥವಾ 1930ರ ಅಪಾಯಕಾರಿ ದ್ರವ್ಯಗಳ ಅಧಿನಿಯಮದ (1930ರ 2ನೇ ಕೇಂದ್ರ ಅಧಿನಿಯಮ) 2ನೆಯ ಪ್ರಕರಣದ ಮೇರೆಗೆ ಪರಿಭಾಷಿಸಿದಂತೆ ತಯಾರಿಸಿದ ದ್ರವ್ಯ ಆಗಿರಕೂಡದು;

[6][(17ಎ) "ಅಬ್ಕಾರಿ ಜಂಟಿ ಕಮಿಶನರು" ಎಂದರೆ 4ಎ ಪ್ರಕರಣದ ಅಡಿಯಲ್ಲಿ ನೇಮಿಸಿದ ಅಬ್ಕಾರಿ ಜಂಟಿ ಕಮಿಶನರು;][6]

(18) "ಮದ್ಯ" ಎಂಬುದು,–

(ಎ) ದ್ರಾಕ್ಷಾರಸದ ಮದ್ಯಸಾರಗಳು, ಗುಣಾಪಹೃತ ಮದ್ಯಸಾರಗಳು, ದ್ರಾಕ್ಷಾರಸ, ಬೀರು, ಹೆಂಡ ಮತ್ತು ಮದ್ಯಾಂಶ ಅಥವಾ ಅದರ ಕೊಳೆಯಿಂದಾದ [1][ವಾಷು][1] ಇರುವ ಅಥವಾ ಅದನ್ನು ಒಳಗೊಂಡಿರುವ ಎಲ್ಲ ದ್ರವ್ಯಗಳು; ಮತ್ತು

(ಬಿ) ರಾಜ್ಯ ಸರಕಾರವು ಈ ಅಧಿನಿಯಮದ ಉದ್ದೇಶಕ್ಕಾಗಿ, ಅಧಿಸೂಚನೆಯ ಮೂಲಕ ಮದ್ಯವೆಂದು ಘೋಷಿಸಬಹುದಾದ ಯಾವುದೇ ಇತರ ಮಾದಕ ಪದಾರ್ಥ.

(19) "ತಯಾರಿಕೆ" ಎಂಬುದು ಹುಳಿ ಹಿಡಿದ, ಮದ್ಯಸಾರವುಳ್ಳ ಅಥವಾ ಮಾದಕ ಮದ್ಯ ಅಥವಾ ಮಾದಕ ದ್ರವ್ಯವನ್ನು ಉತ್ಪಾದಿಸುವ ಅಥವಾ ಸಿದ್ಧಪಡಿಸುವ ಎಲ್ಲ ನೈಸರ್ಗಿಕ ಅಥವಾ ಕೃತಕ ಸಂಸ್ಕರಣ ಪದ್ಧತಿಯನ್ನು ಒಳಗೊಳ್ಳುತ್ತದೆ.

[1][(19ಎ) "ಸಾಮಗ್ರಿ" ಎಂಬುದು ಮೊಹರಾ ಹೂವು, ಕಾಕಂಬಿ, ಕೊಳೆ (ವಾಷು), ಕೊಳೆತ ಬೆಲ್ಲ, ದ್ರಾಕ್ಷಿ, ಗೋಡಂಬಿ ಹಣ್ಣುಗಳು ಮತ್ತು ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಉಲ್ಲೇಖಿಸಬಹುದಾದಂಥ ಯಾವುದೇ ಇತರ ಪದಾರ್ಥವನ್ನು ಒಳಗೊಳ್ಳುತ್ತದೆ.

(19ಬಿ) "ಮೊಹರಾ ಹೂವು" ಎಂದರೆ ಪಾಸ್ಸಿಯಾಲಾ ಟಿಪೊಲ್ಲಾ (ಇಪ್ಪೆ) ಹೂವು ಆದರೆ ಇದು ಮೊಹರಾ ಮರದ ಕಾಯಿ ಅಥವಾ ಬೀಜವನ್ನು ಒಳಗೊಳ್ಳುವುದಿಲ್ಲ.

(19ಸಿ) "ಕಾಕಂಬಿ" ಎಂದರೆ ಹುಳಿ ಹಿಡಿಸಬಹುದಾದ ದ್ರವರೂಪದ ಅಥವಾ ತೇಲಾಡುವ ರೂಪದ ಸಕ್ಕರೆಗಳನ್ನೊಳಗೊಂಡ, ಬೆಲ್ಲ ಅಥವಾ ಸಕ್ಕರೆಯ ತಯಾರಿಕೆಯ ಕೊನೆಯ ಘಟ್ಟದಲ್ಲಿ ಶೋಧಿಸಿದನಂತರ ಕೆಳಗುಳಿಯುವ ಭಾರವಾದ, ಕಪ್ಪು ಬಣ್ಣದ ಸಾಂದ್ರರಸ ಮತ್ತು ಇದು ಅಂಥ ರಸದ ಗುಣವನ್ನು ಗಣನಾರ್ಹವಾಗಿ ಬದಲಾಯಿಸಿದ ಯಾವುದೇ ವಸ್ತುವನ್ನು ಅಂಥ ರಸಕ್ಕೆ ಸೇರಿಸಿ ತಯಾರಿಸಿದ ಉತ್ಪನ್ನಗಳನ್ನು ಒಳಗೊಳ್ಳುತ್ತದೆ, ಆದರೆ ಅಧಿಸೂಚನೆಯ ಮೂಲಕ ರಾಜ್ಯ ಸರಕಾರವು ಈ ಅಧಿನಿಯಮದ ಉದ್ದೇಶಕ್ಕಾಗಿ, ಕಾಕಂಬಿ ಅಲ್ಲವೆಂದು ಘೋಷಿಸುವ ಯಾವುದೇ ವಸ್ತುವನ್ನು ಇದು ಒಳಗೊಳ್ಳುವುದಿಲ್ಲ.][1]

(20) "ಅಧಿಸೂಚನೆ" ಎಂದರೆ ಸರಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ಅಧಿಸೂಚನೆ.

(21) "ಸ್ಥಳ" ಎಂಬುದು ಮನೆ, ಕಟ್ಟಡ, ಅಂಗಡಿ, ಚಪ್ಪರ, ಡೇರೆ, ಹಡಗು, ದೋಣಿ ಮತ್ತು ವಾಹನಗಳನ್ನೂ ಒಳಗೊಳ್ಳುತ್ತದೆ.

(22) "ಪೊಲೀಸ್ ಠಾಣೆ" ಎಂಬುದು, ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಕ್ಕಾಗಿ ಪೊಲೀಸ್ ಠಾಣೆಯೆಂದು ಘೋಷಿಸುವ ಯಾವುದೇ ಸ್ಥಳವನ್ನು ಒಳಗೊಳ್ಳುತ್ತದೆ.

(23) "ನಿಯಮಿಸಿದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಿದುದು.

(24) "ಶುದ್ಧೀಕರಣ" ಎಂಬುದು ಯಾವುದೇ ಪದಾರ್ಥವನ್ನು ಅದರೊಂದಿಗೆ ಸೇರಿಸಿ ಮದ್ಯವನ್ನು ಶುದ್ಧಗೊಳಿಸುವ, ಬಣ್ಣಗೊಳಿಸುವ ಅಥವಾ ರುಚಿಗೊಳಿಸುವ ಪ್ರತಿಯೊಂದು ಕ್ರಮವನ್ನೂ ಒಳಗೊಳ್ಳುತ್ತದೆ.

[1][(24ಎ)"ಕೊಳೆತ ಬೆಲ್ಲ" ಎಂದರೆ ಮಾನವ ಬಳಕೆಗೆ ಯೋಗ್ಯವಲ್ಲದ ಅಥವಾ ಅದರ ಉಪಯೋಗವು ಆರೋಗ್ಯಕ್ಕೆ ಅಪಾಯಕಾರಿಯಾದ ಬೆಲ್ಲ.

**ವಿವರಣೆ.–** ಬೆಲ್ಲವು ಗಾಢ ಕಂದುಬಣ್ಣವಾಗಿದ್ದು ತೀಕ್ಷ್ಣ ವಾಸನೆಯುಳ್ಳದ್ದಾಗಿದ್ದರೆ ಅಥವಾ ರಾಸಾಯನಿಕ ವಿಶ್ಲೇಷಣೆಯಿಂದ ಹೆಚ್ಚು ಪ್ರಮಾಣದಲ್ಲಿ ರೂಪಾಂತರ ಹೊಂದುವ ಸಕ್ಕರೆಯನ್ನು ಶೇಕಡಾ ಹದಿನೈದಕ್ಕಿಂತ ಅಥವಾ ಒಟ್ಟು ಸಕ್ಕರೆಯು ಶೇಕಡಾ ಹದಿನೇಳಕ್ಕಿಂತ ಕಡಿಮೆ ಪ್ರಮಾಣದಲ್ಲಿ ಸಕ್ಕರೆಯನ್ನೂ ಹೊಂದಿದ್ದರೆ, ಆ "ಬೆಲ್ಲವು" ಮಾನವ ಬಳಕೆಗೆ ಯೋಗ್ಯವಾಗಿದುದಲ್ಲವೆಂದು ಅಥವಾ ಅದನ್ನು ಉಪಯೋಗಿಸುವುದು ಆರೋಗ್ಯಕ್ಕೆ ಅಪಾಯಕಾರಿಯಾಗಿದೆಯೆಂದು ಭಾವಿಸತಕ್ಕದ್ದು.][1]

(25) "ಮಾರಾಟ" ಅಥವಾ "ಮಾರಾಟ ಮಾಡುವುದು" ಎಂಬುದು ದಾನ ರೂಪವಲ್ಲದ ಯಾವುದೇ ಬಗೆಯ ವರ್ಗಾವಣೆಯನ್ನು ಒಳಗೊಳ್ಳುವುದು.

(26) "ಮದ್ಯಸಾರ" ಎಂದರೆ ಅದು ಗುಣಾಪಹೃತವಾದುದಾಗಿರಲಿ ಅಥವಾ ಇಲ್ಲದಿರಲಿ ಮದ್ಯಾಂಶವನ್ನು ಒಳಗೊಂಡಿರುವ ಮತ್ತು ಬಟ್ಟಿಯಿಳಿಸಿ ಪಡೆದಿರುವ ಯಾವುದೇ ಮದ್ಯ.

[3][(26ಎ)"ಅಬ್ಕಾರಿ ಸಬ್ ಇನ್ಸ್‌ಪೆಕ್ಟರ್" ಎಂದರೆ, 6ನೆಯ ಪ್ರಕರಣದ ಅಡಿಯಲ್ಲಿ ಅಬ್ಕಾರಿ ಸಬ್ ಇನ್ಸ್‌ಪೆಕ್ಟರ್ ಎಂದು ನೇಮಿಸಿದವನು.][3]

[8][(27) "ಹೆಂಡ" ಎಂದರೆ ಅಬ್ಕಾರಿ ಮರದಿಂದ ತೆಗೆಯಲಾದ ಆದರೆ ನೀರಾವನ್ನು ಒಳಗೊಳ್ಳದಿರುವ ಹುಳಿ ಹಿಡಿದ ರಸ.][8]

(27ಎ) "ನೀರಾ" ಎಂದರೆ, ತೆಂಗಿನ ಮರದಿಂದ ತೆಗೆಯಲಾದ ಮತ್ತು ಯಾವುದೇ ವಿಧಾನದಲ್ಲಿ ಪಾತ್ರೆಗಳಲ್ಲಿ ಸಂಗ್ರಹಿಸಿರುವ ಹಾಗೂ ಹುಳಿಹಿಡಿದಿರುವ ಪಾರದರ್ಶಕ, ಪಾಕಯುತವಾದ, ವಾಸನೆ ಮತ್ತು ರುಚಿಯಲ್ಲಿ ಸಿಹಿಯಾಗಿರುವ, ತನ್ನ ಮೇಲ್ಪದರದಲ್ಲಿ ತೆಳು ನೊರೆಯನ್ನೂ ಹೊಂದದಿರುವ ಮತ್ತು ಯಾವುದೇ ಆಮ್ಲದೊಂದಿಗೆ ಸಂರಕ್ಷಿಸದೇ ಇರುವ ರಸ.

[4][(28)XXX][4]

(29) "ಸಾಗಾಣಿಕೆ" ಎಂದರೆ, ಮಧ್ಯಂತರ ಪ್ರದೇಶವು ರಾಜ್ಯದ ಒಳಗಿರಲಿ ಅಥವಾ ಹೊರಗಿರಲಿ, ರಾಜ್ಯದಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವುದು

(30) "ಕೊಳೆ (ವಾಷು)" ಎಂಬುದು ಹುಳಿ ಹಿಡಿದ ಮೊಳೆತ ಧಾನ್ಯದ ಕಷಾಯ (ವೋರ್ಟ್‌ನ್ನು) ಮತ್ತು ಮದ್ಯಸಾರವನ್ನು ಬಟ್ಟಿಯಿಳಿಸುವ ಸಕ್ಕರೆಯ ತೆಳು ದ್ರಾವಣವನ್ನು ಒಳಗೊಳ್ಳುತ್ತದೆ.

1. 1970ರ ಅಧಿನಿಯಮ 1ರ ಮೂಲಕ 23.12.1969ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1971ರ ಅಧಿನಿಯಮ 1ರ ಮೂಲಕ 07.08.1970ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1971ರ ಅಧಿನಿಯಮ 1ರ ಮೂಲಕ 07.08.1970ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
4. 1971ರ ಅಧಿನಿಯಮ 1ರ ಮೂಲಕ 07.08.1970ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
5. 1994ರ ಅಧಿನಿಯಮ 1ರ ಮೂಲಕ 01.07.1993ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
6. 1998ರ ಅಧಿನಿಯಮ 21ರ ಮೂಲಕ 28.05.1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
7. 2003ರ ಅಧಿನಿಯಮ 38ರ ಮೂಲಕ 03.09.2003ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
8. 2017ರ ಅಧಿನಿಯಮ 1ರ ಮೂಲಕ 04.01.2017ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
9. 2017ರ ಅಧಿನಿಯಮ 1ರ ಮೂಲಕ 04.01.2017ಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ-II

## ಸಿಬ್ಬಂದಿ ಮತ್ತು ನಿಯಂತ್ರಣ

**3. ಅಬ್ಕಾರಿ ಕಮೀಶನರನ ನೇಮಕ.–** (1) ರಾಜ್ಯ ಸರಕಾರವು, ಅಧಿಸೂಚನೆಯ ಮೂಲಕ, ಡೆಪ್ಯುಟಿ ಕಮೀಶನರನ ದರ್ಜೆಗೆ ಕಡಿಮೆಯಲ್ಲದ ಒಬ್ಬ ಅಧಿಕಾರಿಯನ್ನು, [1][ಕರ್ನಾಟಕ ರಾಜ್ಯದ][1] ಅಬ್ಕಾರಿ ಕಮಿಶನರೆಂದು ನೇಮಕ ಮಾಡಬಹುದು. ಅವನು, ಈ ಸಂಬಂಧದಲ್ಲಿ ಸರಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಈ ಅಧಿನಿಯಮದ ಆಡಳಿತಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ ಮುಖ್ಯ ನಿಯಂತ್ರಣಾಧಿಕಾರಿಯಾಗಿರತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

(2) ಅಬ್ಕಾರಿ ಕಮಿಶನರರನು, ಅಬ್ಕಾರಿ ಇಲಾಖೆಯ ಆಡಳಿತ ವಿಷಯದಲ್ಲಿ ಡೆಪ್ಯುಟಿ ಕಮಿಶನರರ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

**4. ಡೆಪ್ಯುಟಿ ಕಮಿಶನರು.–** (1) ಡೆಪ್ಯುಟಿ ಕಮಿಶನರರನು, ತನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಗಳೊಳಗೆ, ರಾಜ್ಯ ಸರಕಾರವು ಕಾಲಕಾಲಕ್ಕೆ ನಿರ್ದೇಶಿಸಬಹುದಾದ ನಿಯಂತ್ರಣಕ್ಕೊಳಪಟ್ಟು, ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅವುಗಳ ಮೇರೆಗೆ ಡೆಪ್ಯುಟಿ ಕಮೀಶನರಿಗೆ ವಹಿಸಿಕೊಡಲಾದಂಥ ಶಕ್ತಿಗಳನ್ನು ಚಲಾಯಿಸತಕ್ಕದ್ದು, ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ಈ ಅಧಿನಿಯಮದ ಉದ್ದೇಶಗಳಿಗಾಗಿ, ಎಲ್ಲ ಡೆಪ್ಯುಟಿ ಕಮಿಶನರುಗಳು ಅಬ್ಕಾರಿ ಕಮಿಶನರಿಗೆ ಅಧೀನರಾಗಿರತಕ್ಕದ್ದು.

[1][**4ಎ** [2][**ಅಬ್ಕಾರಿ ಜಂಟಿ ಕಮಿಶನರು ಮತ್ತು ಅಬ್ಕಾರಿ ಡೆಪ್ಯುಟಿ ಕಮಿಶನರು**][2]**.–** (1) ರಾಜ್ಯ ಸರಕಾರವು, ಅಧಿಸೂಚನೆಯ ಮೂಲಕ, ನಿರ್ದಿಷ್ಟ ಪಡಿಸಬಹುದಾದ ಅಂಥಪ್ರದೇಶಕ್ಕಾಗಿ ಅಥವಾ ಪ್ರದೇಶಗಳಿಗಾಗಿ, ತಾನು ಸೂಕ್ತವೆಂದು ಭಾವಿಸಬಹುದಾದಷ್ಟು [2][ಅಬ್ಕಾರಿ ಜಂಟಿ ಕಮಿಶನರು ಮತ್ತು ಅಬ್ಕಾರಿ ಡೆಪ್ಯುಟಿ ಕಮೀಶನರು][2]ಗಳನ್ನು ನೇಮಿಸಬಹುದು.

(2) ರಾಜ್ಯ ಸರ್ಕಾರವು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, (1)ನೇ ಉಪಪ್ರಕರಣದಲ್ಲಿ ನೇಮಿಸಿದ [2][ಅಬ್ಕಾರಿ ಜಂಟಿ ಕಮಿಶನರು ಅಥವಾ ಅಬ್ಕಾರಿ ಡೆಪ್ಯುಟಿ ಕಮಿಶನರು][2] ಈ ಅಧಿನಿಯಮದ ಅಡಿಯಲ್ಲಿ ಡೆಪ್ಯುಟಿ ಕಮಿಶನರಿಗೆ ನಿಯೋಜಿಸಿದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಹಾಗೂ ತದನಂತರ ಡೆಪ್ಯುಟಿ ಕಮಿಶನರನು ಹಾಗೆ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಚಲಾಯಿಸಲು ಹಾಗೂ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸಲು ಸಕ್ಷಮನಾಗಿರತಕ್ಕದ್ದಲ್ಲ.

(3) [2][ಅಬ್ಕಾರಿ ಜಂಟಿ ಕಮಿಶನರು ಮತ್ತು ಅಬ್ಕಾರಿ ಡೆಪ್ಯುಟಿ ಕಮಿಶನರು][2], ಅಬ್ಕಾರಿ ಕಮಿಶನರಿಗೆ ಅಧೀನನಾಗಿರತಕ್ಕದ್ದು ಮತ್ತು ಅಬ್ಕಾರಿ ಕಮಿಶನರರ ಮತ್ತು ರಾಜ್ಯ ಸರಕಾರದ ನಿಯಂತ್ರಣಕ್ಕೆ ಒಳಪಟ್ಟಿರತಕ್ಕುದು.][2]

1. 1971ರ ಅಧಿನಿಯಮ 1ರ ಮೂಲಕ 07.08.1970ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1998ರ ಅಧಿನಿಯಮ 21ರ ಮೂಲಕ 28.05.1998ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿದೆ.

**5. ಅಬ್ಕಾರಿ ಸೂಪರಿಂಟೆಂಡೆಂಟರ ಮತ್ತು ಅಬ್ಕಾರಿ ಡೆಪ್ಯುಟಿ ಸೂಪರಿಂಟೆಂಡೆಂಟರ ನೇಮಕ.–** (1) ರಾಜ್ಯ ಸರಕಾರವು, ಈ ಅಧಿನಿಯಮದ ಆಡಳಿತದ ಸಂಬಂಧದಲ್ಲಿ, ಡೆಪ್ಯುಟಿ ಕಮಿಶನರಿಗೆ ಸಮವರ್ತಿಯಾಗಿ ಅಥವಾ ಅವನಿಗೆ ಅಧೀನವಾಗಿ, ರಾಜ್ಯ ಸರಕಾರವು ನಿರ್ದೇಶಿಸಬಹುದಾದಂಥ ನಿಯಂತ್ರಣಕ್ಕೊಳಪಟ್ಟು, ಡೆಪ್ಯುಟಿ ಕಮಿಶನರರ ಎಲ್ಲ ಅಥವಾ ಯಾವುವೇ ಶಕ್ತಿಗಳನ್ನು ಚಲಾಯಿಸಲು ಮತ್ತು ಎಲ್ಲ ಅಥವಾ ಯಾವುದೇ ಕರ್ತವ್ಯಗಳನ್ನು ನಿರ್ವಹಿಸಲು ಒಂದು ಜಿಲ್ಲೆಯ ಅಥವಾ ಅದರ ಯಾವುದೇ ಭಾಗಕ್ಕೆ ಒಬ್ಬ ಅಧಿಕಾರಿಯನ್ನು [1][ಅಬ್ಕಾರಿ ಸೂಪರಿಂಟೆಂಡೆಂಟನನ್ನಾಗಿ][1] ನೇಮಿಸಬಹುದು.

1. 1971ರ ಅಧಿನಿಯಮ 1ರ ಮೂಲಕ 07.08.1970ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿದೆ.

(2) ರಾಜ್ಯ ಸರಕಾರವು, ತಾನು ನಿರ್ದೇಶಿಸಬಹುದಾದಂಥ ಶಕ್ತಿಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು, ಒಂದು ಜಿಲ್ಲೆಗೆ ಅಥವಾ ಅದರ ಯಾವುದೇ ಭಾಗಕ್ಕೆ, ತಾನು ಸೂಕ್ತವೆಂದು ಆಲೋಚಿಸುವಷ್ಟು ಜನ [1][ಅಬ್ಕಾರಿ ಡೆಪ್ಯುಟಿ ಸೂಪರಿಂಟೆಂಡೆಂಟರನ್ನು][1] ನೇಮಿಸಬಹುದು.

1. 1971ರ ಅಧಿನಿಯಮ 1ರ ಮೂಲಕ 07.08.1970ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿದೆ.

[1][**5ಎ ಗುಪ್ತ ವಾರ್ತಾ ವಿಭಾಗದ ರಚನೆ ಮತ್ತು (ಗುಪ್ತ ವಾರ್ತಾ ವಿಭಾಗದ) ಅಬ್ಕಾರಿ ಸೂಪರಿಂಟೆಂಡೆಂಟರ ಮತ್ತು ಡೆಪ್ಯುಟಿ ಸೂಪರಿಂಟೆಂಡೆಂಟರ ನೇಮಕ.–** (1) ಅಬ್ಕಾರಿ ಕಮಿಶನರು ಮುಖ್ಯಾಧಿಕಾರಿಯಾಗಿರುವ ಒಂದು ಗುಪ್ತ ವಾರ್ತಾ ವಿಭಾಗವಿರತಕ್ಕದ್ದು ಮತ್ತು ಅದು, ಒಬ್ಬ ಡೆಪ್ಯುಟಿ ಕಮಿಶನರನ್ನು ಮತ್ತು (2)ನೆಯ ಉಪಪ್ರಕರಣದ ಮೇರೆಗೆ ರಾಜ್ಯ ಸರಕಾರವು ನೇಮಿಸಬಹುದಾದಷ್ಟು ಜನ [2][ಗುಪ್ತ ವಾರ್ತಾ ವಿಭಾಗದ) ಅಬ್ಕಾರಿ ಡೆಪ್ಯುಟಿ ಸೂಪರಿಂಟೆಂಡೆಂಟರನ್ನೂ (ಗುಪ್ತವಾರ್ತಾ ವಿಭಾಗದ) ಅಬ್ಕಾರಿ ಡೆಪ್ಯುಟಿ ಸೂಪರಿಂಟೆಂಡೆಂಟರನ್ನೂ][2] ಮತ್ತು ರಾಜ್ಯ ಸರಕಾರದ ಪೂರ್ವಾನುಮೋದನೆಯೊಂದಿಗೆ ಅಬ್ಕಾರಿ ಕಮಿಶನರು ನೇಮಿಸಬಹುದಾದಷ್ಟು ಜನ ಇತರ ಅಧಿಕಾರಿಗಳನ್ನೂ ಹೊಂದಿರತಕ್ಕದ್ದು.

(2) ರಾಜ್ಯ ಸರಕಾರವು, ಈ ಅಧಿನಿಯಮದ ಮೇರೆಗೆ ಅಪರಾಧಗಳ ಪತ್ತೆ, ಅನ್ವೇಷಣೆ ಮತ್ತು ಆರೋಪ ವಿಚಾರಣೆಗೆ ಸಂಬಂಧಿಸಿದ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ, ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಅಬ್ಕಾರಿ ಕಮಿಶನರು ನಿರ್ದೇಶಿಸಬಹುದಾದಂಥ ಅಬ್ಕಾರಿ ಅಧಿಕಾರಿಯ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ,–

(i) ಒಂದು ಜಿಲ್ಲೆಗಾಗಿ ಅಥವಾ ಜಿಲ್ಲೆಯ ಭಾಗಕ್ಕಾಗಿ ಅಥವಾ ಒಂದಕ್ಕಿಂತ ಹೆಚ್ಚು ಜಿಲ್ಲೆಗಾಗಿ ಒಬ್ಬ ಅಧಿಕಾರಿಯನ್ನು (ಗುಪ್ತವಾರ್ತಾ ಕೇಂದ್ರದ) ಅಬ್ಕಾರಿ ಸೂಪರಿಂಟೆಂಡೆಂಟನನ್ನಾಗಿ ನೇಮಿಸಬಹುದು;

(ii) ಒಂದು ಜಿಲ್ಲೆಗಾಗಿ ಅಥವಾ ಅದರ ಭಾಗಕ್ಕಾಗಿ ಅಥವಾ ಒಂದಕ್ಕಿಂತ ಹೆಚ್ಚು ಜಿಲ್ಲೆಗಳಿಗಾಗಿ ಒಬ್ಬ ಅಧಿಕಾರಿಯನ್ನು (ಗುಪ್ತವಾರ್ತಾ ವಿಭಾಗದ) ಅಬ್ಕಾರಿ ಸೂಪರಿಂಟೆಂಡೆಂಟರನ್ನಾಗಿ ನೇಮಿಸಬಹುದು.][1]

1.1971ರ ಅಧಿನಿಯಮ 1ರ ಮೂಲಕ 07.08.1970ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.1998ರ ಅಧಿನಿಯಮ 21ರ ಮೂಲಕ 28.05.1998ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿದೆ.

**6**. [1][**ಅಬ್ಕಾರಿ ಇನ್ಸ್‌ಪೆಕ್ಟರುಗಳ ಮತ್ತು ಅಬ್ಕಾರಿ ಸಬ್‌ಇನ್ಸ್‌ಪೆಕ್ಟರುಗಳ**][1] **ಮತ್ತು ಇತರ ಅಧೀನಾಧಿಕಾರಿಗಳ ನೇಮಕ.–** (1) ಈ ಅಧಿನಿಯಮದ ಮೇರೆಗೆ ಅಪರಾಧಗಳ ಪತ್ತೆ, ಅನ್ವೇಷಣೆ ಮತ್ತು ಆರೋಪ ವಿಚಾರಣೆಯ ಸಂಬಂಧದಲ್ಲಿ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು, ರಾಜ್ಯ ಸರ್ಕಾರವು, [1][ಅಬ್ಕಾರಿ ಇನ್ಸ್‌ಪೆಕ್ಟರುಗಳನ್ನು ಮತ್ತು ಅಬ್ಕಾರಿ ಸಬ್‌ಇನ್ಸ್‌ಪೆಕ್ಟರುಗಳನ್ನು][1] ನೇಮಿಸಬಹುದು.

1. 1971ರ ಅಧಿನಿಯಮ 1ರ ಮೂಲಕ 07.08.1970ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ ತಾನು ಸೂಕ್ತವೆಂದು ಆಲೋಚಿಸುವಂಥ ವರ್ಗಗಳನ್ನು ಮತ್ತು ಪದನಾಮಗಳನ್ನು, ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಹೊಂದಿರುವಂಥ ಅಧೀನಾಧಿಕಾರಿಗಳನ್ನು ನೇಮಿಸಬಹುದು.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ (1)ನೇ ಮತ್ತು (2)ನೇ ಉಪಪ್ರಕರಣಗಳ ಅಡಿಯಲ್ಲಿ [1][ಅಬ್ಕಾರಿ ಇನ್ಸ್‌ಪೆಕ್ಟರುಗಳ ಮತ್ತು ಅಬ್ಕಾರಿ ಸಬ್‌ಇನ್ಸ್‌ಪೆಕ್ಟರುಗಳ][1] ಅಥವಾ ಅಧೀನಾಧಿಕಾರಿಗಳ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಮತ್ತು ಅವರಿಗೆ ವಹಿಸಿಕೊಡಲಾದ ಕರ್ತವ್ಯಗಳನ್ನು, ರಾಜ್ಯ ಸರ್ಕಾರದ ಯಾವನೇ ಅಧಿಕಾರಿಯು ಚಲಾಯಿಸತಕ್ಕದ್ದೆಂದು ಮತ್ತು ನಿರ್ವಹಿಸತಕ್ಕದ್ದೆಂದು, ನಿರ್ದೇಶಿಸಬಹುದು.

1. 1971ರ ಅಧಿನಿಯಮ 1ರ ಮೂಲಕ 07.08.1970ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, (1)ನೇ, (2)ನೇ ಮತ್ತು (3)ನೇ ಒಳಪ್ರಕರಣಗಳ ಮೇರೆಗಿನ ಅಧಿಕಾರಗಳನ್ನು ಅಬ್ಕಾರಿ ಕಮಿಶನರಿಗೆ, [2][ಅಬ್ಕಾರಿ ಜಂಟಿ ಕಮಿಶನರಿಗೆ][2], ಡೆಪ್ಯುಟಿ ಕಮಿಶನರಿಗೆ, [1][ಅಬ್ಕಾರಿ ಸೂಪರಿಂಟೆಂಡೆಂಟನಿಗೆ ಮತ್ತು ಸಂದರ್ಭಾನುಸಾರವಾಗಿ, ಅಬ್ಕಾರಿ ಡೆಪ್ಯುಟಿ ಸೂಪರಿಂಟೆಂಡೆಂಟನಿಗೆ][1] ಪ್ರತ್ಯಾಯೋಜಿಸಬಹುದು.

1.1970ರ ಅಧಿನಿಯಮ 1ರ ಮೂಲಕ 23.12.1969ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1998ರ ಅಧಿನಿಯಮ 21ರ ಮೂಲಕ 28.05.1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**7. ಅಧಿಕಾರಗಳ ಪ್ರತ್ಯಾಯೋಜನೆ.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ 67 ಮತ್ತು 71ನೇ ಪ್ರಕರಣಗಳ ಅಡಿಯಲ್ಲಿನ ಅಧಿಕಾರಗಳನ್ನುಳಿದು ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು ಅಬ್ಕಾರಿ ಕಮಿಶನರನಿಗೆ ಅಥವಾ ಇತರ ಯಾವನೇ ಅಬ್ಕಾರಿ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

(2) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅಬ್ಕಾರಿ ಕಮಿಶನರಿಗೆ ಅಥವಾ [2][ಅಬ್ಕಾರಿ ಜಂಟಿ ಕಮಿಶನರಿಗೆ][2] ಅಥವಾ ಡೆಪ್ಯುಟಿ ಕಮಿಶನರಿಗೆ ಈ ಅಧಿನಿಯಮದಿಂದ ಅಥವಾ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರಗಳನ್ನು, ಅದರಲ್ಲಿ ಉಲ್ಲೇಖಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಯಾವನೇ ಅಬ್ಕಾರಿ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.][1]

1. 1971ರ ಅಧಿನಿಯಮ 1ರ ಮೂಲಕ 07.08.1970ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1998ರ ಅಧಿನಿಯಮ 21ರ ಮೂಲಕ 28.05.1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ–III

## ಆಮದು, ರಫ್ತು ಮತ್ತು ಸಾಗಾಣಿಕೆ

**8. ಮಾದಕದ ಆಮದು.–** (1) ಈ ಅಧಿನಿಯಮದ ಅಡಿಯಲ್ಲಿ ವಿಧಿಸಬಹುದಾದಂಥ ಪ್ರತಿ ಶುಲ್ಕದ ಸಂದಾಯದ ಮೇಲೆ ಮತ್ತು ನಿಯಮಿಸಬಹುದಾದಂಥ ಇತರ ನಿಬಂಧನೆಗಳ ಮೇಲೆ ಡೆಪ್ಯುಟಿ ಕಮಿಶನರು ಕೊಟ್ಟ ಅನುಮತಿ ಪತ್ರದ ಮೇರೆಗೆ ಹೊರತು ಯಾವ ಮಾದಕವನ್ನೂ ಆಮದು ಮಾಡತಕ್ಕದ್ದಲ್ಲ:

ಪರಂತು, ಪ್ರತಿ ಶುಲ್ಕದ ವಸೂಲಿಯನ್ನು ಖಚಿತಪಡಿಸಿಕೊಳ್ಳಲು ನಿಯಮಿಸಬಹುದಾದ ಅಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಡೆಪ್ಯುಟಿ ಕಮಿಶನರು ಪ್ರತಿಶುಲ್ಕದ ಸಂದಾಯವಿಲ್ಲದೆ, ಯಾವುದೇ ಮಾದಕವನ್ನು ಆಮದು ಮಾಡಲು ಅನುಮತಿ ಕೊಡಬಹುದು:

ಮತ್ತು ಪರಂತು, ಯಾವುದೇ ಮಾದಕವು ಭಾರತೀಯ ಆಮದು ರಫ್ತು ಶುಲ್ಕ ಅಧಿನಿಯಮ, 1934ರ ಅಥವಾ ಭಾರತಕ್ಕೆ ಆಮದು ಮಾಡಿಕೊಂಡ ಸರಕುಗಳ ಮೇಲೆ ಸೀಮಾ ಶುಲ್ಕಕ್ಕೆ ಸಂಬಂಧಿಸಿ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ವಿಧಿಯ ಮೇರೆಗೆ ಶುಲ್ಕ ಸಂದಾಯಕ್ಕೆ ಹೊಣೆಯಾಗಿದ್ದು, ಅಂಥ ವಿಧಿಯ ಮೇರೆಗೆ ಅದರ ಬಗ್ಗೆ ವ್ಯವಹರಿಸಿದರೆ, ಅದರ ಮೇಲೆ ಪ್ರತಿಶುಲ್ಕವು ಸಂದಾಯವಾಗತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಕೊಟ್ಟ ಅನುಮತಿ ಪತ್ರವನ್ನು, ಅದನ್ನು ಕೊಟ್ಟ ನಿಬಂಧನೆಗಳ ಉಲ್ಲಂಘನೆಗಾಗಿ ಅಥವಾ ಬರಹದಲ್ಲಿ ಅಭಿಲೇಖಿಸುವ ಇತರ ಯಾವುದೇ ಕಾರಣಕ್ಕಾಗಿ, ಡೆಪ್ಯುಟಿ ಕಮಿಶನರು ರದ್ದುಗೊಳಿಸಬಹುದು.

**9. ಮಾದಕದ ರಫ್ತು.–** (1) ಈ ಅಧಿನಿಯಮದ ಅಡಿಯಲ್ಲಿ ವಿಧಿಸಬಹುದಾದ ಅಂಥ ಫೀಜು ಸಂದಾಯವಾದ ನಂತರ ಮತ್ತು ನಿಯಮಿಸಬಹುದಾದ ಅಂಥ ನಿಬಂಧನೆಗಳ ಮೇಲೆ ಡೆಪ್ಯುಟಿ ಕಮಿಶನರು ಕೊಟ್ಟ ಅನುಮತಿ ಪತ್ರದ ಅಡಿಯಲ್ಲಿ ಹೊರತು, ಯಾವ ಮಾದಕವನ್ನೂ ರಫ್ತು ಮಾಡತಕ್ಕದ್ದಲ್ಲ.

ಪರಂತು, ಭಾರತದಲ್ಲಿ ಉತ್ಪಾದಿಸಿದ ಅಥವಾ ತಯಾರಿಸಿದ ಯಾವ ಮಾದಕವನ್ನು 66ನೇ ಪ್ರಕರಣದಲ್ಲಿ ಉಪಬಂಧಿಸಿದಂತಲ್ಲದೆ, ಅದು ಗುರಿಯಾಗುವ ಅಬ್ಕಾರಿ ಶುಲ್ಕವು ಅಥವಾ ಪ್ರತಿಶುಲ್ಕವು ಸಂದಾಯವಾಗಿದ್ದ ಹೊರತು, ರಫ್ತು ಮಾಡಲು ಅನುಮತಿ ನೀಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಕೊಟ್ಟ ಅನುಮತಿ ಪತ್ರವನ್ನು ಅದನ್ನು ಕೊಟ್ಟ ನಿಬಂಧನೆಗಳ ಉಲ್ಲಂಘನೆಗಾಗಿ ಅಥವಾ ಬರಹದಲ್ಲಿ ಅಭಿಲೇಖಿಸುವ ಇತರ ಯಾವುದೇ ಕಾರಣಕ್ಕಾಗಿ, ಡೆಪ್ಯುಟಿ ಕಮಿಶನರನು ರದ್ದುಗೊಳಿಸಬಹುದು.

**10. ಮಾದಕದ ಸಾಗಾಣಿಕೆಯ ನಿಷೇಧ.–** ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಒಂದು ಸ್ಥಳೀಯ ಪ್ರದೇಶದಿಂದ ಇತರ ಯಾವುದೇ ಸ್ಥಳೀಯ ಪ್ರದೇಶಕ್ಕೆ ಮಾದಕಗಳ ಅಥವಾ ಯಾವುದೇ ಬಗೆಯ ಮಾದಕಗಳ ಸಾಗಾಣಿಕೆಯನ್ನು ನಿಷೇಧಿಸಬಹುದು.

**11. ಮಾದಕದ ಸಾಗಾಣಿಕೆ.–** 12ನೇ ಪ್ರಕರಣದ ಮೇರೆಗೆ ಕೊಟ್ಟ ಅನುಮತಿ ಪತ್ರದ ಮೇರೆಗೆ ಹೊರತು, ಸಾಮಾನ್ಯವಾಗಿ ಅಥವಾ ಯಾವುದೇ ಸ್ಥಳೀಯ ಪ್ರದೇಶಕ್ಕಾಗಿ ನಿಯಮಿಸಲಾದ ಅಂಥ ಪ್ರಮಾಣವನ್ನು ಮೀರಿ ಯಾವುದೇ ಮಾದಕವನ್ನು ಸಾಗಿಸತಕ್ಕದ್ದಲ್ಲ.

**12. ಸಾಗಾಣಿಕೆ ಅನುಮತಿ ಪತ್ರಗಳು.–** (1) ಡೆಪ್ಯುಟಿ ಕಮಿಶನರು ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ಯಥಾವಿಧಿ ಶಕ್ತಗೊಳಿಸಲಾದ ಯಾವನೇ ಇತರ ವ್ಯಕ್ತಿಯು, ಮಾದಕಗಳ ಸಾಗಾಣಿಕೆಗಾಗಿ ಅನುಮತಿ ಪತ್ರ ಕೊಡಬಹುದು.

(2) (1)ನೇ ಒಳಪ್ರಕರಣದ ಅಡಿಯಲ್ಲಿನ ಅನುಮತಿ ಪತ್ರವು, ನಿರ್ದಿಷ್ಟ ಅವಧಿಗಳಿಗಾಗಿ ಮತ್ತು ವಿಶಿಷ್ಟ ಬಗೆಯ ಮಾದಕಗಳಿಗಾಗಿ ಕೊಟ್ಟ ಸಾಮಾನ್ಯ ಅನುಮತಿ ಪತ್ರವಾಗಿರಬಹುದು ಅಥವಾ ನಿರ್ದಿಷ್ಟ ಸಂದರ್ಭಗಳಿಗಾಗಿ ಮತ್ತು ವಿಶಿಷ್ಟ ರವಾನೆ ವಸ್ತುಗಳಿಗಾಗಿ ಮಾತ್ರ ಕೊಟ್ಟ ವಿಶೇಷ ಅನುಮತಿ ಆಗಿರಬಹುದಾಗಿದೆ:

ಪರಂತು, ಸಾಮಾನ್ಯ ಅನುಮತಿ ಪತ್ರವನ್ನು, ಈ ಅಧಿನಿಯಮದ ಮೇರೆಗೆ ಲೈಸೆನ್ಸ್ ಪಡೆದ ವ್ಯಕ್ತಿಗಳಿಗೆ ಮಾತ್ರ ಕೊಡತಕ್ಕದ್ದು ಮತ್ತು ಅದು ಅನುಮತಿ ಪತ್ರದಲ್ಲಿ ಉಲ್ಲೇಖಿಸಿದ ಪ್ರಮಾಣಕ್ಕೆ ಹೆಚ್ಚಾಗದಂತೆ ಒಂದೇ ಬಾರಿಗೆ ಸಾಗಿಸಬಹುದಾದ ಮದ್ಯದ ಯಾವುದೇ ಪ್ರಮಾಣಕ್ಕೆ ಅನ್ವಯಿಸಬಹುದಾಗಿದೆ.

(3) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅನುಮತಿಪತ್ರದಲ್ಲಿ.–

(ಎ) ಮಾದಕಗಳನ್ನು ಸಾಗಿಸಲು ಅಧಿಕೃತನಾದ ವ್ಯಕ್ತಿಯ ಹೆಸರು;

(ಬಿ) ಅನುಮತಿಪತ್ರ ಜಾರಿಯಲ್ಲಿರುವ ಅವಧಿ;

(ಸಿ) ಅದನ್ನು ಯಾವ ಮಾದಕದ ಬಗ್ಗೆ ಕೊಡಲಾಗಿದೆಯೋ ಆ ಮಾದಕದ ಪ್ರಮಾಣ ಹಾಗೂ ವಿವರಣೆ; ಮತ್ತು

(ಡಿ) ನಿಯಮಿಸಬಹುದಾದ ಇತರ ಯಾವುದೇ ವಿವರ.

–ಇವುಗಳನ್ನು ಉಲ್ಲೇಖಿಸತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ಕೊಟ್ಟ ಅನುಮತಿ ಪತ್ರವು ಅದನ್ನು ಪಡೆದವನಿಂದ ನಿಯೋಜಿತರಾದ ಮತ್ತು ಅವನ ಪರವಾಗಿ ಕೆಲಸ ಮಾಡುವ ನೌಕರರಿಗೆ ಮತ್ತು ಇತರ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದು ಮತ್ತು ಅವರನ್ನು ಒಳಗೊಳ್ಳತಕ್ಕದ್ದು.

## ಅಧ್ಯಾಯ–IV

## ತಯಾರಿಕೆ, ಸ್ವಾಧೀನ ಮತ್ತು ಮಾರಾಟ

**13. ಲೈಸೆನ್ಸಿನ ಮೇರೆಗೆ ಹೊರತು ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳ ತಯಾರಿಕೆ ಇತ್ಯಾದಿಗಳ ನಿಷೇಧ.–** (1) ಯಾವ ವ್ಯಕ್ತಿಯೂ ಈ ಕೆಳಗಿನವುಗಳ ಸಂಬಂಧದಲ್ಲಿ ಡೆಪ್ಯುಟಿ ಕಮಿಶನರನು ಕೊಟ್ಟ ಲೈಸೆನ್ಸಿನ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಮೇಲಲ್ಲದೆ ಅಥವಾ 18ನೇ ಪ್ರಕರಣದ ಉಪಬಂಧಗಳ ಮೇರೆಗಲ್ಲದೆ–

(ಎ) ಮಾದಕವನ್ನು ತಯಾರಿಸತಕ್ಕದ್ದಲ್ಲ ಅಥವಾ ಸಂಗ್ರಹಿಸತಕ್ಕದ್ದಲ್ಲ; ಅಥವಾ

(ಬಿ) ನಾರುಗಿಡವನ್ನು ಬೆಳಸತಕ್ಕದ್ದಲ್ಲ; ಅಥವಾ

(ಸಿ) ಹೆಂಡ ಕೊಡುವ ಮರದಿಂದ ಹೆಂಡ ಇಳಿಸತಕ್ಕದ್ದಲ್ಲ ಅಥವಾ ಯಾವುದೇ ಮರದಿಂದ ಹೆಂಡ ತೆಗೆಯತಕ್ಕದ್ದಲ್ಲ; ಅಥವಾ

(ಡಿ) ಬಟ್ಟಿಯನ್ನು ಅಥವಾ ಸಾರಾಯಿ ಕಾರ್ಖಾನೆಯನ್ನು ನಿರ್ಮಿಸತಕ್ಕದ್ದಲ್ಲ ಅಥವಾ ನಡೆಸತಕ್ಕುದಲ್ಲ; ಅಥವಾ

(ಇ) ಮಾರಾಟಕ್ಕಾಗಿ ಮದ್ಯವನ್ನು ಸೀಸೆಗೆ ತುಂಬತಕ್ಕದ್ದಲ್ಲ; ಅಥವಾ

(ಎಫ್) ಹೆಂಡವಲ್ಲದ ಯಾವುದೇ ಮಾದಕದ ತಯಾರಿಕೆಯ ಉದ್ದೇಶಕ್ಕಾಗಿ ಯಾವುದೇ ಸಾಮಾಗ್ರಿಯನ್ನು, ಬಟ್ಟಿಯಂತ್ರವನ್ನು, ಪಾತ್ರೆಗಳನ್ನು, ಉಪಕರಣವನ್ನು ಅಥವಾ ಯಂತ್ರ ಸಲಕರಣೆಗಳನ್ನು ಉಪಯೋಗಿಸತಕ್ಕದ್ದಲ್ಲ, ಇಟ್ಟಿರತಕ್ಕದ್ದಲ್ಲ ಅಥವಾ ಸ್ವಾಧೀನ ಹೊಂದಿರತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಕೊಡಲ್ಪಟ್ಟ ಲೈಸೆನ್ಸು ಅದನ್ನು ಪಡೆದವನು ನಿಯೋಜಿಸಿದ ಮತ್ತು ಅವನ ಪರವಾಗಿ ಕೆಲಸ ಮಾಡುವ ನೌಕರರಿಗೆ ಮತ್ತು ಇತರ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದು ಮತ್ತು ಅವರನ್ನು ಒಳಗೊಳ್ಳತಕ್ಕದ್ದು.

[1][**13ಎ. ಲೈಸೆನ್ಸನ್ನು ಪಡೆಯದ ಹೊರತು ನೀರಾ ಮತ್ತು ನೀರಾ ಉತ್ಪನ್ನಗಳ ಉತ್ಪಾದನೆ ಇತ್ಯಾದಿಯ ನಿಷೇಧ.–** ನಿಯಮಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಹಾಗೂ ಸಕ್ಷಮ ಪ್ರಾಧಿಕಾರಿಯ ಮೂಲಕ ಮಂಜೂರಾದ ಲೈಸನ್ಸನ್ನು ಪಡೆಯದ ಹೊರತು ಅಥವಾ ಅಂಥ ಫೀಜನ್ನು ಪಾವತಿಸದ ಹೊರತು, ಯಾವೊಬ್ಬ ವ್ಯಕ್ತಿಯು ತೆಂಗಿನ ಮರದಿಂದ ನೀರಾವನ್ನು ಇಳಿಸತಕ್ಕದ್ದಲ್ಲ ಅಥವಾ ಸಂಸ್ಕರಿಸತಕ್ಕದ್ದಲ್ಲ.][1]

1. 2017ರ ಅಧಿನಿಯಮ 1ರ ಮೂಲಕ 04.01.2017ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**14. ನಿಯಮಿಸಿದುದಕ್ಕಿಂತ ಹೆಚ್ಚು ಪರಿಮಾಣದಲ್ಲಿ ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳ ಸ್ವಾಧೀನ.–** (1) ರಾಜ್ಯ ಸರಕಾರವು, ಅಧಿಸೂಚನೆಯ ಮೂಲಕ, ಸ್ವಾಧೀನದಲ್ಲಿಟ್ಟುಕೊಳ್ಳಬಹುದಾದ ಯಾವುದೇ ಮಾದಕದ ಪರಿಮಾಣದ ಪರಿಮಿತಿಯನ್ನು ನಿಯಮಿಸಬಹುದು:

ಪರಂತು, ಒಂದೇ ವಸ್ತುವಿನ ಬಗ್ಗೆ ಅದರ ಬೇರೆ ಗುಣಾನುಸಾರವಾಗಿ ಬೇರೆ ಬೇರೆ ಪರಿಮಿತಿಗಳನ್ನು ನಿಯಮಿಸಬಹುದು,

(2) ಯಾವ ವ್ಯಕ್ತಿಯೂ, (1)ನೇ ಉಪಪ್ರಕರಣದ ಮೇರೆಗೆ ನಿಯಮಿಸಿದ ಪರಿಮಾಣಕ್ಕಿಂತ ಹೆಚ್ಚಾಗಿ, ಯಾವುದೇ ಮಾದಕವನ್ನು,

(ಎ) ಅಂಥ ವಸ್ತುವಿನ ತಯಾರಿಕೆ, ಬಳಸುವಿಕೆ, ಸಂಗ್ರಹಣೆ, ಮಾರಾಟ ಅಥವಾ ಸರಬರಾಜಿಗಾಗಿ ಕೊಟ್ಟ ಲೈಸೆನ್ಸಿನ; ಅಥವಾ

(ಬಿ) ಆ ಬಗ್ಗೆ ಡೆಪ್ಯುಟಿ ಕಮಿಶನರು ಕೊಟ್ಟ ಅನುಮತಿ ಪತ್ರದ ಅಧಿಕಾರದ ಮೇರೆಗೆ ಹೊರತು ಮತ್ತು ಅವುಗಳ ನಿಬಂಧನೆಗಳು ಮತ್ತು ಷರತ್ತುಗಳಿಗನುಸಾರವಾಗಿ ಹೊರತು ಸ್ವಾಧೀನದಲ್ಲಿಟ್ಟುಕೊಳ್ಳತಕ್ಕದ್ದಲ್ಲ.

**15. ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳನ್ನು ಲೈಸೆನ್ಸಿಲ್ಲದೆ ಮಾರಾಟಕ್ಕೆ ನಿಷೇಧ.–** (1) ಯಾವ ಮಾದಕವನ್ನು ಅದಕ್ಕಾಗಿ ಮಂಜೂರಾದ ಪ್ರಾಧಿಕಾರ ಮತ್ತು ಲೈಸೆನ್ಸಿನ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟ ಹೊರತು ಮಾರಾಟ ಮಾಡತಕ್ಕದ್ದಲ್ಲ.

ಪರಂತು, ಅಬ್ಕಾರಿ ಕಮಿಶನರು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಉಲ್ಲೇಖಿಸುವಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೊಳಪಟ್ಟು,–

(ಎ) ಯಾವುದೇ ಮರದಿಂದ ತೆಗೆದ ಹೆಂಡಕ್ಕೆ ಅಧಿಕಾರ ಹೊಂದಿದ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಹೆಂಡವನ್ನು ತಯಾರಿಸಲು ಅಥವಾ ಮಾರಾಟ ಮಾಡಲು ಲೈಸೆನ್ಸು ಹೊಂದಿರುವ ವ್ಯಕ್ತಿಗೆ ಅಂಥ ಹೆಂಡವನ್ನು ಲೈಸೆನ್ಸಿಲ್ಲದೆ, ಮಾರಾಟ ಮಾಡಬಹುದು.

(ಬಿ) ಅದರಿಂದ ಮಾದಕ ವಸ್ತುವು ಉತ್ಪಾದಿತವಾಗುವ ಗಿಡದ ಸಾಗುವಳಿದಾರನು ಅಥವಾ ಒಡೆಯನು, ಈ ಅಧಿನಿಯಮದ ಮೇರೆಗೆ ಮಾದಕ ದ್ರವ್ಯಗಳನ್ನು ಮಾರಲು, ತಯಾರಿಸಲು ಅಥವಾ ರಫ್ತು ಮಾಡಲು ಲೈಸೆನ್ಸು ಪಡೆದಿರುವ ಯಾವೊಬ್ಬ ವ್ಯಕ್ತಿಗೆ, ಅಥವಾ ಅಬ್ಕಾರಿ ಕಮಿಶನರನನ್ನು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಬಹುದಾದ ಯಾವನೇ ಅಧಿಕಾರಿಗೆ, ಲೈಸೆನ್ಸಿಲ್ಲದೆ, ಮಾರಾಟ ಮಾಡಬಹುದು.

(2) 1ನೇ ಉಪಪ್ರಕರಣದ ಅಡಿಯಲ್ಲಿ ಮಾರಾಟದ ಲೈಸೆನ್ಸನ್ನು–

(ಎ) ಮಾರಾಟವು ಜಿಲ್ಲೆಯ ಒಳಗೆ ಇದ್ದರೆ, ಡೆಪ್ಯುಟಿ ಕಮಿಶನರು, ಅಥವಾ

(ಬಿ) ಮಾರಾಟವು ಒಂದಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿದ್ದರೆ, ಅಬ್ಕಾರಿ ಕಮಿಶನರು,

– ಕೊಡತಕ್ಕದ್ದು:

ಪರಂತು, ಅಬ್ಕಾರಿ ಕಮಿಶನರು ನಿರ್ಧರಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಇತರ ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ ಅಬ್ಕಾರಿ ಕಾನೂನಿನ ಅಡಿಯಲ್ಲಿ ನೀಡಲಾದ ಲೈಸೆನ್ಸು, ಈ ಅಧಿನಿಯಮದ ಅಡಿಯಲ್ಲಿ ಕೊಟ್ಟ ಲೈಸೆನ್ಸೆಂದು ಭಾವಿಸಬಹುದು.

(3) ಈ ಪ್ರಕರಣದಲ್ಲಿರುವುದು ಯಾವುದೂ, ಯಾವನೇ ವ್ಯಕ್ತಿಯು ತನ್ನ ಖಾಸಗಿ ಉಪಯೋಗಕ್ಕಾಗಿ ವಿಧಿಬದ್ಧವಾಗಿ ಪಡೆದಿದ್ದ ಮದ್ಯವನ್ನು ಅವನು ಆ ಸ್ಥಳವನ್ನು ಬಿಟ್ಟ ಬಳಿಕ ಅಥವಾ ಅವನ ಮರಣದ ತರುವಾಯ ಅವನು ಅಥವಾ ಅವನ ಪರವಾಗಿ ಅಥವಾ ಅವನ ಹಿತಾಸಕ್ತಿಯ ಪ್ರತಿನಿಧಿಗಳ ಪರವಾಗಿ ಮಾಡುವ ಮದ್ಯದ ಮಾರಾಟಕ್ಕೆ, ಅನ್ವಯಿಸತಕ್ಕದ್ದಲ್ಲ.

(4) (1) ಮತ್ತು (2)ನೇ ಒಳಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಅಬ್ಕಾರಿ ಕಮಿಶನರು ಈ ಸಂಬಂಧದಲ್ಲಿ ಕೊಟ್ಟ ಲೈಸೆನ್ಸಿನ ಅಧಿಕಾರದ ಮೇರೆಗೆ ಹೊರತು ಮತ್ತು ಅದರ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟ ಹೊರತು ಮತ್ತು ಈ ಬಗ್ಗೆ ರಾಜ್ಯ ಸರಕಾರದಿಂದ ನಿಗದಿಯಾಗುವ ಫೀಜಿನ ಪ್ರಮಾಣಗಳಿಗನುಸಾರವಾಗಿ ಫೀಜು ಸಂದಾಯ ಮಾಡಿದುದಲ್ಲದೇ ಯಾವ ಕ್ಲಬ್ಬೂ ತನ್ನ ಸದಸ್ಯರಿಗೆ ಬೆಲೆ ಅಥವಾ ಯಾವುದೇ ಫೀ ಅಥವಾ ಚಂದಾ ಹಣಕ್ಕಾಗಿ ಮದ್ಯವನ್ನು ಸರಬರಾಜು ಮಾಡತಕ್ಕದ್ದಲ್ಲ.

[1][**15ಎ. ಅನುಮತಿಯಿಲ್ಲದ ಸಾರ್ವಜನಿಕ ಸ್ಥಳಗಳಲ್ಲಿ ಮದ್ಯದ ಬಳಕೆ ಅಥವಾ ಬಳಕೆಗೆ ಒಪ್ಪಿಗೆ.–** ಅಬ್ಕಾರಿ ಕಮಿಶನರು ಅಥವಾ ಡೆಪ್ಯುಟಿ ಕಮಿಶನವರು ಮಂಜೂರು ಮಾಡಿದ ಲೈಸೆನ್ಸಿನಡಿ ಅಂಥ ಸ್ಥಳಕ್ಕೆ ಅನುಮತಿ ನೀಡಿದ ಹೊರತು, ಯಾವೊಬ್ಬ ವ್ಯಕ್ತಿಯು ಯಾವುದೇ ಸಾರ್ವಜನಿಕ ಸ್ಥಳದ ಮಾಲೀಕನಾಗಿ ಅಥವಾ ವ್ಯವಸ್ಥಾಪನೆಯ ಉಸ್ತುವಾರಿಯಾಗಿ ಅಥವಾ ನಿಯಂತ್ರಕನಾಗಿ ಮದ್ಯವನ್ನು ಬಳಸಲು ಅನುಮತಿಸತಕ್ಕದ್ದಲ್ಲ ಅಥವಾ ಯಾವೊಬ್ಬ ವ್ಯಕ್ತಿಯು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಮದ್ಯವನ್ನು ಬಳಸತಕ್ಕದ್ದಲ್ಲ.

**ವಿವರಣೆ–1:** ಈ ಪ್ರಕರಣದ ಮತ್ತು 32ನೇ ಪ್ರಕರಣದ ಉದ್ದೇಶಕ್ಕಾಗಿ "ಸಾರ್ವಜನಿಕ ಸ್ಥಳ" ಎಂದರೆ ಯಾವುದೇ ಸಾರ್ವಜನಿಕ ಕಚೇರಿ ಅಥವಾ ಸಾರ್ವಜನಿಕ ಮನರಂಜನೆಯ ಯಾವುದೇ ಸ್ಥಳ ಅಥವಾ ರೆಸಾರ್ಟ್, ಮನೋರಂಜನಾ ಕೇಂದ್ರ ಅಥವಾ ಪ್ರಯಾಣ ಸ್ಥಳ, ಪ್ರಯಾಣಿಕ ದೋಣಿ ಅಥವಾ ಹಡಗು ಅಥವಾ ಯಾವುದೇ ಸಾರ್ವಜನಿಕ ಪ್ರಯಾಣಿಕರ ವಾಹನ ಅಥವಾ ವಿವಿಧ ವ್ಯಕ್ತಿಗಳು ಅಥವಾ ವ್ಯಕ್ತಿಗಳ ಗುಂಪುಗಳು ಆಹಾರವನ್ನು ಬಳಸುವ ಉಪಹಾರ ಗೃಹ ಅಥವಾ ಹೋಟೆಲಿನ ಊಟದ ಅಥವಾ ಉಪಹಾರದ ಕೋಣೆ ಆದರೆ ಯಾವುದೇ ಖಾಸಗಿ ವಸತಿ ಕೊಠಡಿಯನ್ನು ಅಥವಾ ಖಾಸಗಿ ವಸತಿ ಗೃಹವನ್ನು ಒಳಗೊಳ್ಳತಕ್ಕದ್ದಲ್ಲ.

**ವಿವರಣೆ–2:** 1ನೇ ವಿವರಣೆಯ ಉದ್ದೇಶಕ್ಕಾಗಿ"ಸಾರ್ವಜನಿಕ ಪ್ರಯಾಣಿಕ ವಾಹನ" ಎಂದರೆ ಒಟ್ಟಾರೆ ನಿರ್ದಿಷ್ಟಪಡಿಸಿದ ಅಥವಾ ಒಪ್ಪಿತ ದರದಲ್ಲಿ ಪೂರ್ತಿಯಾಗಿ ಗುತ್ತಿಗೆ, ಶೀಘ್ರ ಅಥವಾ ಅಂತರ್ಗತ ಬಳಕೆಗೆ ಬಾಡಿಗೆ ಅಥವಾ ಸೇವೆಗಾಗಿ ಪ್ರಯಾಣಿಕರನ್ನು ಕರೆದೊಯ್ಯುವ ವಾಹನದ ಹೊರತಾಗಿರುವ ಬಾಡಿಗೆ ಅಥವಾ ಸೇವೆಗಾಗಿ ಪ್ರಯಾಣಿಕರನ್ನು ಕರೆದೊಯ್ಯಲು ಬಳಸುವ ವಾಹನ][1]

1. 2001ರ ಅಧಿನಿಯಮ 15ರ ಮೂಲಕ 19.04.2001ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**16. ಡಿಸ್ಟಿಲರಿಗಳ ಮತ್ತು ಉಗ್ರಾಣಗಳ ಸ್ಥಾಪನೆ.–** (1) ಅಬ್ಕಾರಿ ಕಮಿಶನರು, ರಾಜ್ಯ ಸರಕಾರದ ಪೂರ್ವ ಮಂಜೂರಾತಿ ಪಡೆದು–

(ಎ) 13ನೇ ಪ್ರಕರಣದ ಮೇರೆಗೆ ಕೊಟ್ಟ ಲೈಸೆನ್ಸಿನ ಮೇರೆಗೆ ರಾಜ್ಯ ಸರಕಾರವು ವಿಧಿಸಬಹುದಾದ ಷರತ್ತುಗಳ ಮೇಲೆ, ಮದ್ಯಸಾರವನ್ನು ತಯಾರಿಸಬಹುದಾದ, ಡಿಸ್ಟಿಲರಿಯನ್ನು ಸ್ಥಾಪಿಸಬಹುದು;

(ಬಿ) ಹಾಗೆ ಸ್ಥಾಪಿಸಿದ ಯಾವುದೇ ಡಿಸ್ಟಿಲರಿಯನ್ನು ನಿಲ್ಲಿಸಬಹುದು;

(ಸಿ) ರಾಜ್ಯ ಸರಕಾರವು ವಿಧಿಸಲು ಯೋಗ್ಯವೆಂದು ಭಾವಿಸುವಂಥ ಷರತ್ತುಗಳ ಮೇಲೆ, ಬಟ್ಟಿಯ ಅಥವಾ ಸಾರಾಯಿ ಕಾರ್ಖಾನೆಯ ನಿರ್ಮಾಣಕ್ಕೆ ಮತ್ತು ಕೆಲಸಕ್ಕೆ ಲೈಸೆನ್ಸು ಕೊಡಬಹುದು;

(ಡಿ) ಖಾಸಗಿ ಶುಲ್ಕಬಂಧ ಉಗ್ರಾಣಕ್ಕೆ ಲೈಸನ್ಸು ಕೊಡಬಹುದು.

(ಇ) ಶುಲ್ಕ ಸಂದಾಯ ಮಾಡದೇ ಮಾದಕಗಳನ್ನು ನಿಕ್ಷೇಪಿಸಬಹುದಾದಂಥ ಮತ್ತು ಇಡಬಹುದಾದಂಥ ಉಗ್ರಾಣವನ್ನು ಸ್ಥಾಪಿಸಬಹುದು ಅಥವಾ ಅದಕ್ಕಾಗಿ ಲೈಸನ್ಸು ಕೊಡಬಹುದು ಮತ್ತು

(ಎಫ್) ಹಾಗೆ ಸ್ಥಾಪಿಸಿದ ಯಾವುದೇ ಉಗ್ರಾಣವನ್ನು ನಿಲ್ಲಿಸಬಹುದು.

(2) 1ನೇ ಉಪಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಉಗ್ರಾಣದಲ್ಲಿ, ಸ್ಥಳೀಯ ಬಳಕೆಗಾಗಿ ಅಥವಾ ರಫ್ತಿಗಾಗಿ ಸಾಗಿಸುವವರೆಗೆ ಶುಲ್ಕಕ್ಕೊಳಪಟ್ಟ ಮಾದಕಗಳನ್ನು ಇಟ್ಟಿರಲು ಸಾಮಾನ್ಯ ಸ್ಥಳಾವಕಾಶವಿರತಕ್ಕದ್ದು.

(3) ರಾಜ್ಯ ಸರಕಾರದ ಮಂಜೂರಾತಿಯಿಲ್ಲದೆ, ಈ ಅಧಿನಿಯಮದ ಮೇರೆಗೆ ಸ್ಥಾಪಿಸಿದ ಅಥವಾ ಲೈಸನ್ಸು ಕೊಡಲಾದ ಯಾವುದೇ ಬಟ್ಟಿ ಕಾರ್ಖಾನೆಯಿಂದ, ಸಾರಾಯಿ ಕಾರ್ಖಾನೆಯಿಂದ, ಉಗ್ರಾಣದಿಂದ ಅಥವಾ ಇತರ ಸಂಗ್ರಹ ಸ್ಥಳದಿಂದ, ಈ ಅಧಿನಿಯಮದ ಮೇರೆಗೆ ವಿಧಿಸಿದ ಶುಲ್ಕವೇನಾದರೂ ಇದ್ದರೆ ಅದನ್ನು ಸಂದಾಯ ಮಾಡಿದ ಹೊರತು ಅಥವಾ ಸಂದಾಯ ಮಾಡುವ ಬಗ್ಗೆ ಒಂದು ಬಂಧಕ ಪತ್ರವನ್ನು ಬರೆದು ಕೊಟ್ಟ ಹೊರತು ಯಾವ ಮಾದಕವನ್ನೂ ಸಾಗಿಸತಕ್ಕದ್ದಲ್ಲ.

[1][**16ಎ. ಮಾರಾಟಕ್ಕಾಗಿ ಸಾರಾಯಿಯನ್ನು ತಯಾರಿಸುವುದಕ್ಕಾಗಿ, ಸೀಸೆಗೆ ತುಂಬುವುದಕ್ಕಾಗಿ ಅಥವಾ ತಯಾರಿಸಿ ಸೀಸೆಗೆ ತುಂಬುವುದಕ್ಕಾಗಿ ಲೈಸೆನ್ಸಿನ ಮಂಜೂರಾತಿ ಅಥವ ನವೀಕರಣದ ಮೇಲೆ ನಿಷೇಧ ಇತ್ಯಾದಿ.–** ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಏನೇ ಇದ್ದರೂ ಸಾರಾಯಿಯನ್ನು ಮಾರಾಟಕ್ಕಾಗಿ,–

(ಎ) ತಯಾರಿಸಲು; ಅಥವಾ

(ಬಿ) ಸೀಸೆಗೆ ತುಂಬಲು; ಅಥವಾ

(ಸಿ) ತಯಾರಿಸಿ ಸೀಸೆಗೆ ತುಂಬಲು

– 2007ನೇ ಜುಲೈ 1ರಿಂದ ಯಾವ ವ್ಯಕ್ತಿಗೂ ಲೈಸೆನ್ಸನ್ನೂ ಮಂಜೂರು ಮಾಡತಕ್ಕದ್ದಲ್ಲ ಅಥವಾ ನವೀಕರಿಸತಕ್ಕದ್ದಲ್ಲ.

(2) ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಅಥವಾ ಯಾವುದೇ ನ್ಯಾಯಾಲಯದ ಯಾವುದೇ ತೀರ್ಪಿನಲ್ಲಿ, ಆದೇಶದಲ್ಲಿ ಅಥವಾ ಡಿಕ್ರಿಯಲ್ಲಿ ಏನೇ ಇದ್ದರೂ, ಸಾರಾಯಿಯನ್ನು ಮಾರಾಟಕ್ಕಾಗಿ,–

(ಎ) ತಯಾರಿಸಲು; ಅಥವಾ

(ಬಿ) ಸೀಸೆಗೆ ತುಂಬಲು; ಅಥವಾ

(ಸಿ) ತಯಾರಿಸಿ ಸೀಸೆಗೆ ತುಂಬಲು,

–ನೀಡಿದ್ದ ಪ್ರತಿಯೊಂದು ಲೈಸೆನ್ಸು ಸಿಂಧುವಾಗಿರುವುದು 2007ರ ಜೂನ್ 30ನೇ ದಿನಾಂಕವು ಮುಕ್ತಾಯವಾದ ತರುವಾಯ ನಿಂತುಹೋಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಇರುವುದಾವುದೂ, 2007ರ ಜುಲೈ 1ನೇ ದಿನಾಂಕಕ್ಕೆ ಮೊದಲು ನೀಡಲಾಗಿದ್ದ ಅಂಥ ಲೈಸೆನ್ಸಿನ ಸಂಬಂಧದಲ್ಲಿ ಯಾವುದೇ ದಾಯಿತ್ವಗಳು ಅಥವಾ ಹೊಣೆಗಾರಿಕೆಗಳಿಗೆ ಬಾಧಕವಾಗತಕ್ಕದ್ದಲ್ಲ.][1]

1. 2007ರ ಅಧಿನಿಯಮ 27ರ ಮೂಲಕ 01.07.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**16ಬಿ. ಸಾರಾಯಿಯ ಮಾರಾಟಕ್ಕಾಗಿ ಮಂಜೂರಾದ ಲೈಸೆನ್ಸು ಅಥವಾ ಗುತ್ತಿಗೆಯ ನವೀಕರಣದ ಮೇಲೆ ನಿಷೇಧ.–** (1) ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ಯಾವುದೇ ನಿಯಮಗಳಲ್ಲಿ ಏನೇ ಇದ್ದರೂ, ಸಾರಾಯಿಯನ್ನು,–

(ಎ) ಸಗಟಾಗಿ ತಯಾರಿಸುವ ಅಥವಾ ಸರಬರಾಜು ಮಾಡುವ ಅಥವಾ ಎರಡನ್ನೂ ಮಾಡುವ; ಅಥವಾ

(ಬಿ) ಸಗಟಾಗಿ ಅಥವಾ ಚಿಲ್ಲರೆಯಾಗಿ ಮಾರಾಟ ಮಾಡುವ; ಅಥವಾ

(ಸಿ) ಸಗಟಾಗಿ ತಯಾರಿಸುವ ಅಥವಾ ಸರಬರಾಜು ಮಾಡುವ ಅಥವಾ ಎರಡನ್ನೂ ಮಾಡುವ ಮತ್ತು ಚಿಲ್ಲರೆ ಮಾರಾಟ ಮಾಡುವ,

–ಸಂಪೂರ್ಣ ಹಕ್ಕಿನ ಅಥವಾ ಇತರ ಹಕ್ಕಿನ ಯಾವ ಗುತ್ತಿಗೆಯನ್ನು 2007ರ ಜುಲೈ 1ನೇ ದಿನಾಂಕದಿಂದ ಮಂಜೂರು ಮಾಡತಕ್ಕದ್ದಲ್ಲ ಅಥವಾ ನವೀಕರಿಸತಕ್ಕದ್ದಲ್ಲ.

(2) ಈ ಅಧಿನಿಯಮದಡಿಯಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳು, ಅಥವಾ ಯಾವುದೇ ನ್ಯಾಯಾಲಯದ ತೀರ್ಪು, ಆದೇಶ ಅಥವಾ ಡಿಕ್ರಿಯಲ್ಲಿ, ಏನೇ ಇದ್ದರೂ,-

(ಎ) ಸಗಟಾಗಿ ತಯಾರಿಸುವ ಅಥವಾ ಸರಬರಾಜು ಮಾಡುವ ಅಥವಾ ಎರಡನ್ನೂ ಮಾಡುವ; ಅಥವಾ

(ಬಿ) ಸಗಟಾಗಿ ಅಥವಾ ಚಿಲ್ಲರೆಯಾಗಿ ಮಾರಾಟ ಮಾಡುವ; ಅಥವಾ

(ಸಿ) ಸಗಟಾಗಿ ತಯಾರಿಸುವ ಅಥವಾ ಸರಬರಾಜು ಮಾಡುವ ಅಥವಾ ಎರಡನ್ನೂ ಮಾಡುವ ಮತ್ತು ಚಿಲ್ಲರೆ ಮಾರಾಟ ಮಾಡುವ,

-ಸಂಪೂರ್ಣ ಹಕ್ಕಿನ ಅಥವಾ ಇತರ ಪ್ರತಿಯೊಂದು ಹಕ್ಕಿನ ಗುತ್ತಿಗೆಯು 2007ನೇ ಜೂನ್ 30ನೇ ದಿನಾಂಕ ಮುಕ್ತಾಯವಾದ ತರುವಾಯ ನಿಂತು ಹೋಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ ಅಂಥ ಸಂಪೂರ್ಣ ಹಕ್ಕಿನ ಅಥವಾ ಇತರ ಹಕ್ಕಿನ ಗುತ್ತಿಗೆಯ ಸಂಬಂಧದಲ್ಲಿನ ಯಾವುದೇ ದಾಯಿತ್ವಗಳು ಅಥವಾ ಹೊಣೆಗಾರಿಕೆಗಳಿಗೆ ಬಾಧಕವಾಗತಕ್ಕದ್ದಲ್ಲ.][1]

1. 2007ರ ಅಧಿನಿಯಮ 27ರ ಮೂಲಕ 01.07.2007ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**17. ತಯಾರಿಕೆ ಇತ್ಯಾದಿಗೆ ಗುತ್ತಿಗೆಯ ಹಕ್ಕನ್ನು ಮಂಜೂರು ಮಾಡುವ ಅಧಿಕಾರ.-** (1) ರಾಜ್ಯ ಸರಕಾರವು ಯಾವನೇ ವ್ಯಕ್ತಿಗೆ ಯಾವುದೇ ಭಾರತೀಯ ಮದ್ಯವನ್ನು ಅಥವಾ ಮಾದಕ ದ್ರವ್ಯವನ್ನು ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ-

(ಎ) ಬಟ್ಟಿಗಟ್ಟಲೇ ತಯಾರಿಸುವ ಅಥವಾ ಸರಬರಾಜು ಮಾಡುವ ಅಥವಾ ಎರಡನ್ನೂ ಮಾಡುವ ಅಥವಾ

(ಬಿ) ಸಗಟು ಅಥವಾ ಚಿಲ್ಲರೆಯಾಗಿ ಮಾರಾಟ ಮಾಡುವ, ಅಥವಾ

(ಸಿ) ಒಟ್ಟು ತಯಾರಿಸುವ ಅಥವಾ ಸರಬರಾಜು ಮಾಡುವ ಅಥವಾ ಎರಡನ್ನೂ ಮಾಡುವ ಮತ್ತು ಚಿಲ್ಲರೆ ಮಾರಾಟ ಮಾಡುವ, - ಸಂಪೂರ್ಣ ಅಥವಾ ಇತರ ಅಧಿಕಾರವನ್ನು, ತಾನು ಸೂಕ್ತವೆಂದು ಆಲೋಚಿಸುವಂಥ ಷರತ್ತುಗಳ ಮೇಲೆ ಮತ್ತು ಅಂಥ ಅವಧಿಗಾಗಿ ಗುತ್ತಿಗೆ ಕೊಡಬಹುದು.

[1][(1ಎ) (1)ನೇ ಉಪಪ್ರಕರಣದ ಮೇರೆಗೆ ಕೊಟ್ಟ ಯಾವುದೇ ಗುತ್ತಿಗೆಯನ್ನು ವರ್ಗಾಯಿಸತಕ್ಕದ್ದಲ್ಲ.

ಪರಂತು, (ವರ್ಗಾಂತರಿತನು ರಾಜ್ಯ ಸರಕಾರದೊಂದಿಗೆ ಗುತ್ತಿಗೆಯ ಒಪ್ಪಂದ ಮಾಡಿಕೊಳ್ಳುವುದನ್ನೂ ಒಳಗೊಂಡು) ನಿಯಮಿಸಬಹುದಾದಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಗುತ್ತಿಗೆಯನ್ನು ಅಥವಾ ಅದರ ಒಂದು ಭಾಗವನ್ನು ಇತರ ಯಾವನೇ ವ್ಯಕ್ತಿಗೆ ವರ್ಗಾಯಿಸಲು ಗುತ್ತಿಗೆದಾರನಿಗೆ ರಾಜ್ಯ ಸರಕಾರವು, ಅನುಮತಿ ಕೊಡಬಹುದು.][1]

1. 1971ರ ಅಧಿನಿಯಮ 1ರ ಮೂಲಕ 07.08.1970ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಲೈಸೆನ್ಸು ಕೊಡುವ ಪ್ರಾಧಿಕಾರಿಯು, (1)ನೇ ಉಪಪ್ರಕರಣದ ಅಡಿಯಲ್ಲಿ ಗುತ್ತಿಗೆದಾರನಿಗೆ ಅಥವಾ [1][(1ಎ) ಉಪಪ್ರಕರಣದ ಮೇರೆಗೆ ವರ್ಗಾಂತರಿತನಿಗೆ ಅವನ ಗುತ್ತಿಗೆಯ ನಿಬಂಧನೆಗಳ ಪ್ರಕಾರ ಲೈಸೆನ್ಸು ಕೊಡಬಹುದು,][1] ಮತ್ತು ಗುತ್ತಿಗೆಯಲ್ಲಿ ಒಳಗುತ್ತಿಗೆಗೆ ಕೊಡುವುದನ್ನು ನಿಷೇಧಿಸುವ ಯಾವ ಷರತ್ತು ಇಲ್ಲದಿರುವಾಗ ಗುತ್ತಿಗೆದಾರನಿಗೆ ಮನವಿ ಮಾಡುವ ಮೂಲಕ ಅಂಥ ಪ್ರಾಧಿಕಾರಿಯಿಂದ ಅನುಮೋದಿತವಾದ ಯಾವನೇ ಒಳಗುತ್ತಿಗೆದಾರನಿಗೆ ಲೈಸನ್ಸು ಕೊಡಬಹುದು.

1. 1971ರ ಅಧಿನಿಯಮ 1ರ ಮೂಲಕ 07.08.1970ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(3) (1)ನೇ ಉಪಪ್ರಕಣದಲ್ಲಿ ಅಥವಾ (1ಕ) ಉಪಪ್ರಕರಣದಲ್ಲಿ ಉಲ್ಲೇಖಿಸಿದ ಗುತ್ತಿಗೆಯನ್ನು,-

(ಎ) ಗುತ್ತಿಗೆದಾರನು ಕೊಡಬೇಕಾಗಿರುವ ಯಾವುದೇ ಶುಲ್ಕವನ್ನು ಅಥವಾ ಫೀಜನ್ನು ಯಥಾವಿಧಿ ಸಂದಾಯ ಮಾಡದಿದ್ದರೆ, ಅಥವಾ

(ಬಿ) ಗುತ್ತಿಗೆಯ ಯಾವುದೇ ನಿಬಂಧನೆಗಳನ್ನು ಅಥವಾ ಷರತ್ತನ್ನು ಗುತ್ತಿಗೆದಾರನು ಅಥವಾ ಅವನ ಯಾವನೇ ನೌಕರನು, ಅಥವಾ ಅವನ ಪರವಾಗಿ ಅಥವಾ ಗುತ್ತಿಗೆದಾರನ ಸ್ಪಷ್ಟ ಅಥವಾ ಇಂಗಿತ ಅನುಮತಿಯೊಂದಿಗೆ ಕೆಲಸ ಮಾಡುವ ಯಾವನೇ ವ್ಯಕ್ತಿಯು ಉಲ್ಲಂಘಿಸಿದರೆ ಅಥವಾ

(ಸಿ) ಗುತ್ತಿಗೆದಾರನು ವ್ಯವಹಾರವನ್ನು ನಡೆಸಲು ಅಸಮರ್ಥನಾದರೆ ಅಥವಾ

(ಡಿ) ಗುತ್ತಿಗೆಯ ಷರತ್ತುಗಳು ಅವನು ಇಷ್ಟ ಬಂದಾಗ ಕೊನೆಗೊಳಿಸಲು ಉಪಬಂಧ ಕಲ್ಪಿಸಿದ್ದರೆ;- ಕೊನೆಗೊಳಿಸಬಹುದು:

ಪರಂತು, ಅದರಿಂದ ಬಾಧಿತನಾದ ವ್ಯಕ್ತಿಗೆ ಅಂಥ ಕೊನೆಗೊಳಿಸುವಿಕೆಯ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶ ಕೊಡಲ್ಪಟ್ಟಿದ್ದ ಹೊರತು, ಅದನ್ನು ಹಾಗೆ ಕೊನೆಗೊಳಿಸತಕ್ಕದ್ದಲ್ಲ.

(4) (3)ನೇ ಉಪಪ್ರಕರಣದ (ಎ), (ಬಿ), (ಸಿ) ಖಂಡಗಳ ಅಡಿಯಲ್ಲಿ ಗುತ್ತಿಗೆಯನ್ನು ಕೊನೆಗೊಳಿಸಿರುವಲ್ಲಿ, ಆ ಅಧಿಕಾರವನ್ನು ತನ್ನ ಆಡಳಿತದಲ್ಲಿ ತೆಗೆದುಕೊಳ್ಳಲು ಮತ್ತು ಅದನ್ನು ಮರು ಮಾರಾಟದ ಮೂಲಕ ಅಥವಾ ಅನ್ಯಥಾ ಮತ್ತೆ ಗುತ್ತಿಗೆಗೆ ಕೊಡಲು ರಾಜ್ಯ ಸರ್ಕಾರವು, ಡೆಪ್ಯುಟಿ ಕಮಿಶನರಿಗೆ ನಿರ್ದೇಶಿಸಬಹುದು; ಮತ್ತು ಹಾಗೆ ಆಡಳಿತಕ್ಕೆ ತೆಗೆದುಕೊಂಡಾಗ ಅಥವಾ ಮರು ಮಾರಾಟ ಮಾಡಿದಾಗ, ವಸೂಲಾದ ಮೊಬಲಗು ಕೊನೆಗೊಳಿಸಲ್ಪಟ್ಟ ಗುತ್ತಿಗೆಯ ಪ್ರಕಾರ ಸಂದಾಯವಾಗಬಹುದಾದ ಮೊಬಲಿಗಿಗಿಂತ ಕಡಿಮೆಯಾಗಿದ್ದರೆ, ಅಂಥ ನಷ್ಟವು ಯಾರ ಗುತ್ತಿಗೆಯನ್ನು ಕೊನೆಗೊಳಿಸಲಾಯಿತೋ ಆ ವ್ಯಕ್ತಿಯಿಂದ ಸಂದಾಯವಾಗಿರತಕ್ಕದ್ದು.][1]

1. 1971ರ ಅಧಿನಿಯಮ 1ರ ಮೂಲಕ (3) ಮತ್ತು (4)ನೇ ಉಪಪ್ರಕರಣಗಳನ್ನು ದಿನಾಂಕ:07.08.1970ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**18. ಹೆಂಡ ತೆಗೆಯಲು ಗುತ್ತಿಗೆದಾರನ ಅನುಮತಿ.–** 17ನೇ ಪ್ರಕರಣದ ಮೇರೆಗೆ ಹೆಂಡವನ್ನು ತಯಾರಿಸುವ ಅಧಿಕಾರವನ್ನು ಗುತ್ತಿಗೆಗೆ ಕೊಟ್ಟಿರುವಲ್ಲಿ, ಹೆಂಡವನ್ನು ತೆಗೆಯಲು ಗುತ್ತಿಗೆದಾರನು ಕೊಟ್ಟ ಲಿಖಿತ ಅನುಮತಿಯು ಆ ಉದ್ದೇಶಕ್ಕಾಗಿ ಡೆಪ್ಯುಟಿ ಕಮಿಷನರು ಪ್ರಕರಣ 13ರ ಅಡಿಯಲ್ಲಿ ಕೊಡುವ ಲೈಸೆನ್ಸಿನಷ್ಟೇ ಪ್ರಭಾವ ಮತ್ತು ಪರಿಣಾಮವನ್ನು ಹೊಂದಿರತಕ್ಕದ್ದೆಂದು ರಾಜ್ಯ ಸರ್ಕಾರವು ಘೋಷಿಸಬಹುದು.

**19. ಅಳತೆ ಮತ್ತು ಪರೀಕ್ಷೆಯ ಬಗ್ಗೆ ಲೈಸೆನ್ಸುದಾರರ ಕರ್ತವ್ಯಗಳು.–** ಈ ಅಧಿನಿಯಮದ ಅಡಿಯಲ್ಲಿ ಕೊಟ್ಟ ಲೈಸೆನ್ಸಿನ ಮೇರೆಗೆ ಯಾವುದೇ ಮಾದಕವನ್ನು ತಯಾರಿಸುವ ಅಥವಾ ಮಾರಾಟ ಮಾಡುವ ಪ್ರತಿಯೊಬ್ಬ ವ್ಯಕ್ತಿಯು,–

(ಎ) ಅಬ್ಕಾರಿ ಕಮಿಷನರನು ನಿಯಮಿಸಬಹುದಾದ ಅಂಥ ಅಳತೆಗಳನ್ನು, ತೂಕಗಳನ್ನು ಮತ್ತು ಉಪಕರಣಗಳನ್ನು ಇಟ್ಟುಕೊಳ್ಳಲು ಮತ್ತು ಅವುಗಳನ್ನು ಸುಸ್ಥಿತಿಯಲ್ಲಿ ಲೈಸೆನ್ಸಿಗೆ ಒಳಪಟ್ಟಿರುವ ಆವರಣದಲ್ಲಿ ಇಟ್ಟಿರಲು; ಮತ್ತು

(ಬಿ) ಈ ಬಗ್ಗೆ ಯುಕ್ತವಾಗಿ ಅಧಿಕಾರ ನೀಡಲಾದ ಅಬ್ಕಾರಿ ಅಧಿಕಾರಿಯು ಅಗತ್ಯಪಡಿಸಿದಾಗ, ಯಾವುದೇ ಕಾಲಕ್ಕೆ, ತನ್ನ ಸ್ವಾಧೀನದಲ್ಲಿರುವ ಯಾವುದೇ ಮಾದಕವನ್ನು ಸದರಿ ಅಬ್ಕಾರಿ ಅಧಿಕಾರಿಯು ಅಗತ್ಯಪಡಿಸಬಹುದಾದ ವಿಧಾನದಲ್ಲಿ ಅಳೆಯಲು, ತೂಕ ಮಾಡಲು ಅಥವಾ ಪರೀಕ್ಷಿಸಲು ಬದ್ಧನಾಗಿರತಕ್ಕದ್ದು.

**20. ಮಕ್ಕಳನ್ನು ಮತ್ತು ಹೆಂಗಸರನ್ನು ನಿಯೋಜಿಸುವುದಕ್ಕೆ ನಿಷೇಧ.–** (1) ಯಾವುದೇ ಮಾದಕವನ್ನು ತನ್ನ ಆವರಣದಲ್ಲಿ ಸೇವನೆಗಾಗಿ ಮಾರಾಟ ಮಾಡಲು ಲೈಸೆನ್ಸು ಪಡೆದ ಯಾವ ವ್ಯಕ್ತಿಯೂ, ಅಂಥ ಆವರಣವನ್ನು ಜನರಿಗಾಗಿ ತೆರೆದಿಡುವ ಕಾಲದಲ್ಲಿ, ಸಂಭಾವನೆ ಸಹಿತವಾಗಿ ಅಥವಾ ರಹಿತವಾಗಿ, ರಾಜ್ಯ ಸರಕಾರವು ಈ ಸಂಬಂಧದಲ್ಲಿ ನಿಯಮಿಸಬಹುದಾದಂಥ ವಯಸ್ಸಿಗೆ ಕಡಿಮೆಯಿರುವ ಯಾವುದೇ ಮಕ್ಕಳನ್ನು, ಯಾವುದೇ ಅಬ್ಕಾರಿ ಶುಲ್ಕ ವಿಧಿಸಬಹುದಾದಂಥ ವಸ್ತುವನ್ನು ಸಾರ್ವಜನಿಕರು ಸೇವಿಸುವಂಥ ಆವರಣದ ಯಾವುದೇ ಭಾಗದಲ್ಲಿ ನಿಯೋಜಿಸತಕ್ಕದ್ದಲ್ಲ ಅಥವಾ ನಿಯೋಜಿಸಲು ಅನುಮತಿ ಕೊಡತಕ್ಕದ್ದಲ್ಲ.

(2) ಯಾವುದೇ ಮಾದಕವನ್ನು ತನ್ನ ಆವರಣದಲ್ಲಿ ಸೇವನೆಗಾಗಿ ಮಾರಾಟ ಮಾಡಲು ಲೈಸೆನ್ಸು ಕೊಡಲ್ಪಟ್ಟ ಯಾವ ವ್ಯಕ್ತಿಯೂ, ಡೆಪ್ಯುಟಿ ಕಮೀಷನರರ ಪೂರ್ವ ಲಿಖಿತ ಅನುಮತಿಯಿಲ್ಲದೆ, ಅಂಥ ಆವರಣವನ್ನು ಜನರಿಗಾಗಿ ತೆರೆದಿರುವ ಕಾಲದಲ್ಲಿ, ಸಂಭಾವನೆ ಸಹಿತವಾಗಿ ಅಥವಾ ರಹಿತವಾಗಿ, ಅಬ್ಕಾರಿ ಶುಲ್ಕ ವಿಧಿಸಬಹುದಾದಂಥ ವಸ್ತುವನ್ನು ಸಾರ್ವಜನಿಕರು ಸೇವಿಸುವ ಆ ಆವರಣದ ಯಾವುದೇ ಭಾಗದಲ್ಲಿ, ಯಾವ ಹೆಂಗಸನ್ನೂ ನಿಯೋಜಿಸತಕ್ಕದ್ದಲ್ಲ ಅಥವಾ ನಿಯೋಜಿಸಲು ಅನುಮತಿ ಕೊಡತಕ್ಕದ್ದಲ್ಲ.

(3) (2)ನೇ ಉಪಪ್ರಕರಣದ ಮೇರೆಗೆ ಕೊಡಲಾದ ಪ್ರತಿಯೊಂದು ಅನುಮತಿಯು ಲೈಸೆನ್ಸಿನಲ್ಲಿ ಹಿಂಬರಹಗೊಳಿಸತಕ್ಕದ್ದು ಮತ್ತು ಅದನ್ನು ಬದಲಾಯಿಸಬಹುದು ಮತ್ತು ಹಿಂತೆಗೆದುಕೊಳ್ಳಬಹುದು.

**21. ಸಾರ್ವಜನಿಕ ಶಾಂತಿ [1][ಇತ್ಯಾದಿಯನ್ನು][1] ಕಾಪಾಡಲು ಅಂಗಡಿಗಳನ್ನು ಮುಚ್ಚುವುದು.–** (1) ಜಿಲ್ಲಾ ಮ್ಯಾಜಿಸ್ಟ್ರೇಟನು, ಯಾವುದೇ ಮಾದಕವನ್ನು ಮಾರುವ ಯಾವುದೇ ಅಂಗಡಿಯನ್ನು ಸಾರ್ವಜನಿಕ ಶಾಂತಿ ಪಾಲನೆಯ ಸಲುವಾಗಿ [1][ಅಥವಾ ಯಾವುದೇ ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಗಟ್ಟಲು][1] ತಾನು ಅವಶ್ಯವೆಂದು ಆಲೋಚಿಸುವಂಥ ಕಾಲದಲ್ಲಿ ಮತ್ತು ಅವಧಿಯಲ್ಲಿ ಮುಚ್ಚಿರಬೇಕೆಂದು ಲೈಸೆನ್ಸುದಾರನಿಗೆ ಲಿಖಿತ ಮೂಲಕವಾದ ನೋಟೀಸನ್ನು ಅಗತ್ಯಪಡಿಸಬಹುದು.

1. 1987ರ ಅಧಿನಿಯಮ 36ರ ಮೂಲಕ ದಿನಾಂಕ:10.08.1987ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಅಂಥ ಯಾವುದೇ ಅಂಗಡಿಯ ಸಮೀಪದಲ್ಲಿ ಯಾವುದೇ ದೊಂಬಿ ಅಥವಾ ವಿಧಿ ವಿರುದ್ಧ ಕೂಟವು ನಡೆಯಬಹುದೆಂದು ಶಂಕಿಸಿದರೆ, ಅಥವಾ ಜರುಗಿದರೆ, ಹಾಜರಿರುವ ಯಾವೊಬ್ಬ ಮ್ಯಾಜಿಸ್ಟ್ರೇಟನು ಅಥವಾ ಸಬ್ ಇನ್ಸ್‌ಪೆಕ್ಟರನ ದರ್ಜೆಗೆ ಕಡಿಮೆಯಿರದ ಯಾವೊಬ್ಬ ಪೋಲೀಸು ಅಧಿಕಾರಿಯು, ತಾನು ಅವಶ್ಯವೆಂದು ಆಲೋಚಿಸುವ ಅವಧಿಯವರೆಗೆ ಅಂಥ ಅಂಗಡಿಯನ್ನು ಮುಚ್ಚಬೇಕೆಂದು ಅಗತ್ಯಪಡಿಸಬಹುದು:

ಪರಂತು, ಹಾಗೆ ದೊಂಬಿಯು ಅಥವಾ ಕಾನೂನು ವಿರುದ್ಧ ಕೂಟವು ನಡೆದಲ್ಲಿ, ಅಂಥ ಮ್ಯಾಜಿಸ್ಟ್ರೇಟನು ಅಥವಾ ಅಧಿಕಾರಿಯು ಇಲ್ಲದಿರುವಾಗ, ಲೈಸೆನ್ಸುದಾರನು, ಯಾವ ಆದೇಶವಿಲ್ಲದೆಯೇ ಆ ಅಂಗಡಿಯನ್ನು ಮುಚ್ಚತಕ್ಕದ್ದು ಮತ್ತು ಅಂಥ ದೊಂಬಿಯು ಅಥವಾ ವಿಧಿ ವಿರುದ್ಧ ಕೂಟವು ನಡೆಯುವವರೆಗೆ ಅದನ್ನು ಮುಚ್ಚಿಯೇ ಇರತಕ್ಕದ್ದು.

## ಅಧ್ಯಾಯ-V

## ಅಬ್ಕಾರಿ ಶುಲ್ಕ ಮತ್ತು ಪ್ರತಿಶುಲ್ಕ

**22. ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳ ಮೇಲೆ ಅಬ್ಕಾರಿ ಶುಲ್ಕ ಅಥವಾ ಪ್ರತಿಶುಲ್ಕ.-** (1) ಈ ಅಧಿನಿಯಮದ ಅಡಿಯಲ್ಲಿ ನೀಡಿದ ಯಾವುದೇ ಲೈಸೆನ್ಸಿನ ಅಥವಾ ಅನುಮತಿ ಪತ್ರದ ಮೇರೆಗೆ ರಾಜ್ಯದಲ್ಲಿ ತಯಾರಿಸಲಾದ ಅಥವಾ ಉತ್ಪಾದಿಸಲಾದ ಅಬ್ಕಾರಿ ಶುಲ್ಕ ವಿಧಿಸಬಹುದಾದ ಯಾವುದೇ ವಸ್ತುವಿನ ಮೇಲೆ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ದರ ಅಥವಾ ದರಗಳ ಪ್ರಕಾರ ಅಬ್ಕಾರಿ ಶುಲ್ಕವನ್ನು ವಿಧಿಸತಕ್ಕದ್ದು.

(2) ರಾಜ್ಯದ ಹೊರಗೆ ಭಾರತದಲ್ಲಿ ತಯಾರಿಸಲಾದ ಅಥವಾ ಉತ್ಪಾದಿಸಲಾದ ಮತ್ತು ಈ ಅಧಿನಿಯಮದ ಅಡಿಯಲ್ಲಿ ನೀಡಿದ ಲೈಸೆನ್ಸಿನ ಮೇರೆಗೆ ರಾಜ್ಯದಲ್ಲಿ ಆಮದು ಮಾಡಲಾದ ಅಬ್ಕಾರಿ ಶುಲ್ಕ ವಿಧಿಸಬಹುದಾದ ಯಾವುದೇ ವಸ್ತುವಿನ ಮೇಲೆ, ರಾಜ್ಯ ಸರಕಾರವು ನಿಯಮಿಸಬಹುದಾದಂಥ ದರ ಅಥವಾ ದರಗಳ ಪ್ರಕಾರ ಪ್ರತಿಶುಲ್ಕವನ್ನು ವಿಧಿಸತಕ್ಕದ್ದು.

(3) (1)ನೇ ಮತ್ತು (2)ನೇ ಉಪಪ್ರಕರಣಗಳ ಅಡಿಯಲ್ಲಿ ನಿಯಮಿಸಲಾದ ದರಗಳು ಅಬ್ಕಾರಿ ಶುಲ್ಕ ವಿಧಿಸಬಹುದಾದ ಬೇರೆ ಬೇರೆ ತರಹದ ವಸ್ತುಗಳ ಬಗ್ಗೆ ಬೇರೆ ಬೇರೆಯಾಗಿರಬಹುದು ಮತ್ತು 23ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಬೇರೆ ಬೇರೆ ರೀತಿಯಲ್ಲಿ ಶುಲ್ಕ ವಿಧಿಸಿದಾಗ ದರವು ಬೇರೆ ಬೇರೆಯಾಗಿಯೂ ಇರಬಹುದು.

**23. ಅಂಥ ಶುಲ್ಕಗಳನ್ನು ವಿಧಿಸುವ ರೀತಿಗಳು.-** ಕಾಲ, ಸ್ಥಳ ಮತ್ತು ವಿಧಾನವನ್ನು ನಿಯಂತ್ರಿಸುವ ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು 22ನೇ ಪ್ರಕರಣದ ಅಡಿಯಲ್ಲಿ ಅಬ್ಕಾರಿ ಶುಲ್ಕ ಮತ್ತು ಪ್ರತಿಶುಲ್ಕವನ್ನು ಈ ಮುಂದಿನ ಒಂದು ಅಥವಾ ಹೆಚ್ಚಿನ ವಿಧಾನಗಳಲ್ಲಿ ನಿಯಮಿಸಬಹುದಾದಂತೆ ವಿಧಿಸತಕ್ಕದ್ದು ಎಂದರೆ;-

(ಎ) ಯಾವುದೇ ಡಿಸ್ಟಿಲರಿಯಲ್ಲಿ, ಸಾರಾಯಿ ಕಾರ್ಖಾನೆಯಲ್ಲಿ ತಯಾರಿಕಾ ಕೇಂದ್ರದಲ್ಲಿ ಅಥವಾ ಉಗ್ರಾಣದಲ್ಲಿ ಉತ್ಪಾದಿಸಲಾದ ಅಥವಾ ತಯಾರಿಸಲಾದ ಅಥವಾ ಅಲ್ಲಿಂದ ಹೊರಕಳಿಸಿದ ಅಥವಾ ರಾಜ್ಯಕ್ಕೆ ಆಮದು ಮಾಡಿಕೊಂಡ ಅಬ್ಕಾರಿ ಶುಲ್ಕ ವಿಧಿಸಬಹುದಾದ ಯಾವುದೇ ವಸ್ತುವಿನ ಪ್ರಮಾಣಕ್ಕನುಸಾರವಾಗಿ,

[1][(ಎಎ) ಯಾವೊಬ್ಬ ವ್ಯಕ್ತಿಯು ಆಮದು ಮಾಡಿಕೊಂಡ ಅಥವಾ ಯಾವುದೇ ಡಿಸ್ಟಿಲರಿಯಿಂದ, ಸಾರಾಯಿ ಕಾರ್ಖಾನೆಯಿಂದ, ತಯಾರಿಕಾ ಕೇಂದ್ರದಿಂದ ಅಥವಾ ಸಂದರ್ಭಾನುಸಾರವಾಗಿ ಉಗ್ರಾಣದಿಂದ ಪಡೆದುಕೊಂಡ ಅಬ್ಕಾರಿ ಶುಲ್ಕ ವಿಧಿಸಬಹುದಾದ ಯಾವುದೇ ವಸ್ತುವಿನ ಪ್ರಮಾಣಕ್ಕನುಸಾರವಾಗಿ (ಲೀಟರ್ ಫೀ ಎಂದು ಕರೆಯಲಾಗುವ) ಫೀಜುಗಳ ಮೂಲಕ][1]

**ವಿವರಣೆ.-** ಈ ಖಂಡದಲ್ಲಿ "ಉಗ್ರಾಣ" ಎಂಬುದು ಮದ್ಯದ ಸಗಟು ಮಾರಾಟಗಾರನು ಮದ್ಯವನ್ನು ಇಟ್ಟಿರುವ ಸ್ಥಳವನ್ನು ಒಳಗೊಳ್ಳುತ್ತದೆ.

1. 1971ರ ಅಧಿನಿಯಮ 1ರ ಮೂಲಕ 30.09.1967ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಎಎಎ) ಡಿಸ್ಟಿಲರಿಯಿಂದ, ಸಾರಾಯಿ ಕಾರ್ಖಾನೆಯಿಂದ, ತಯಾರಿಕಾ ಕೇಂದ್ರದಿಂದ ಅಥವಾ ಉಗ್ರಾಣದಿಂದ ತಯಾರಿಸಿದ ಅಥವಾ ಉತ್ಪಾದಿಸಿದ ಅಥವಾ ಹೊರಕಳಿಸಿದ ಅಬ್ಕಾರಿ ಶುಲ್ಕ ವಿಧಿಸಬಹುದಾದ ಸಾಮಗ್ರಿಗಳ ಕೊಳ್ಳುವ ದರ ಅಥವಾ ಮೌಲ್ಯದ ಮೇಲಿನ ಶುಲ್ಕ ಅಥವಾ ಹೆಚ್ಚುವರಿ ಶುಲ್ಕದ ರೂಪದಲ್ಲಿ ಅಥವಾ ರಾಜ್ಯಕ್ಕೆ ಆಮದು ಮಾಡಿಕೊಂಡ ಮದ್ಯದ ಮೌಲ್ಯ, ಬೆಲೆ ಅಥವಾ ದರದ ಮೇಲಿನ ಪ್ರತಿಶುಲ್ಕ ಅಥವಾ ಹೆಚ್ಚುವರಿ ಪ್ರತಿಶುಲ್ಕದ ರೂಪದಲ್ಲಿ ನಿಯಮಿಸಬಹುದಾದ ಅಂಥ ದರ ಅಥವಾ ದರಗಳಲ್ಲಿ ಅಥವಾ ಅಂಥ ಹಂತ ಅಥವಾ ಹಂತಗಳಲ್ಲಿ ಮತ್ತು ಅಂಥ ವಿಧಾನದ ಮೂಲಕ][1]

1. 2000ರ ಅಧಿನಿಯಮ 21ರ ಮೂಲಕ 11.01.2001ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಸೇರಿಸಲಾಗಿದೆ.

(ಬಿ) ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾದ ಡಿಸ್ಟಿಲರಿಯಲ್ಲಿ ಅಥವಾ ಲೈಸೆನ್ಸು ಕೊಡಲಾದ ಡಿಸ್ಟಿಲರಿ, ಸಾರಾಯಿ ಕಾರ್ಖಾನೆ ಅಥವಾ ತಯಾರಿಕಾ ಕೇಂದ್ರದಲ್ಲಿ ಉತ್ಪಾದಿಸಲಾದ ಮದ್ಯಸಾರದ ಅಥವಾ ಇತರ ಮದ್ಯದ ಸಂದರ್ಭದಲ್ಲಿ ನಿಯಮಿಸಬಹುದಾದಂತೆ ಅದರ ಗುಣ ಅಥವಾ ಸತ್ವಕ್ಕನುಸಾರವಾಗಿ ಉಪಯೋಗಿಸಿದ ಪದಾರ್ಥಗಳ ಪ್ರಮಾಣದ ಮೇಲೆ ಲೆಕ್ಕ ಹಾಕಲಾದ ಸಮಾನಕಗಳ ಪ್ರಮಾಣಾನುಸಾರವಾಗಿ, ಅಥವಾ ಸಂದರ್ಭಾನುಸಾರವಾಗಿ ಕೊಳೆಯ ಅಥವಾ ಮೊಳೆತ ಧಾನ್ಯದ ಕಷಾಯದ ನಿಸ್ಸತ್ವದ ಪ್ರಮಾಣಕ್ಕನುಸಾರವಾಗಿ;

(ಸಿ) ಹೆಂಡದ ಸಂದರ್ಭದಲ್ಲಿ, ಹೆಂಡವನ್ನು ತೆಗೆಯಲಾಗುವ ಪ್ರತಿಯೊಂದು ಮರದ ಮೇಲೆ ಕರ ಹಾಕುವ ಮೂಲಕ;

(ಡಿ) ಅಬ್ಕಾರಿ ಶುಲ್ಕ ವಿಧಿಸಬಹುದಾದ ಯಾವುದೇ ವಸ್ತುವಿನ ತಯಾರಿಕೆ ಅಥವಾ ಮಾರಾಟದ ಸಂಬಂಧದಲ್ಲಿ ಲೈಸೆನ್ಸುಗಳ ಮೇಲಿನ ಫೀಜಿನ ಮೂಲಕ.

[1][**23ಎ. ವಿದ್ಯುನ್ಮಾನ ಸಾಧನಗಳ ಮೂಲಕ ಅಬ್ಕಾರಿ ರಾಜಸ್ವದ ರವಾನೆ (ರೆಮಿಟೆನ್ಸ್).**–ಅಬ್ಕಾರಿ ರಾಜಸ್ವದ ಎಲ್ಲಾ ಸಂದಾಯಗಳನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ವಿದ್ಯುನ್ಮಾನ ಸಾಧನಗಳ (ಅಂತರ್ಜಾಲ) ಮೂಲಕ ರವಾನಿಸತಕ್ಕದ್ದು ಅಥವಾ ಮಾಡತಕ್ಕದ್ದು. ಅಬ್ಕಾರಿ ಕಮಿಶನರು, ನಿಯಮಿಸಲಾದ ರೀತಿಯಲ್ಲಿ ಎಲ್ಲಾ ಅಬ್ಕಾರಿ ರಾಜಸ್ವವನ್ನು ಪರಿಣಾಮಕಾರಿಯಾಗಿ ರವಾನಿಸಲು ಯುಕ್ತ ವಿದ್ಯುನ್ಮಾನ ಸಾಧನಗಳನ್ನು ಅಭಿವೃದ್ಧಿಪಡಿಸುವಂತೆ ಮಾಡತಕ್ಕದ್ದು.][1]

1. 2014ರ ಅಧಿನಿಯಮ 11ರ ಮೂಲಕ 22.02.2014ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[2][[1][**24. ಗುತ್ತಿಗೆ ಅಥವಾ ಲೈಸೆನ್ಸನ್ನು ನೀಡಲು ಅಥವಾ ನವೀಕರಿಸಲು ಶುಲ್ಕಗಳ ಸಂದಾಯ.**– (1) 22 ಮತ್ತು 23ನೇ ಪ್ರಕರಣಗಳ ಅಡಿಯಲ್ಲಿ ವಿಧಿಸಬಹುದಾದ ಯಾವುದೇ ಅಬ್ಕಾರಿ ಸುಂಕ ಅಥವಾ ಪ್ರತಿ ಶುಲ್ಕಕ್ಕೆ ಬದಲಾಗಿ ಅಥವಾ ಹೆಚ್ಚುವರಿಯಾಗಿ ರಾಜ್ಯ ಸರ್ಕಾರವು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಲೈಸೆನ್ಸ ಅಥವಾ ಗುತ್ತಿಗೆ ಅಥವಾ ಅವೆರಡರ ನೀಡಿಕೆ ಅಥವಾ ನವೀಕರಣವನ್ನು ಗಣನೆಗೆ ತೆಗೆದುಕೊಂಡು ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ ನಿರ್ಧರಿಸಬಹುದಾದಂತೆ ಲೈಸೆನ್ಸ್ ಶುಲ್ಕವೆಂದು ಅಥವಾ ವಿಶೇಷಾಧಿಕಾರ ಶುಲ್ಕವೆಂದು ಅಂಥ ಮೊಬಲಗನ್ನು ವಿಧಿಸಬಹುದು ಮತ್ತು ಸಂಗ್ರಹಿಸಬಹುದು.

(2) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ವಿತರಕರನ ಲೈಸೆನ್ಸಿನ ನೀಡಿಕೆ ಅಥವಾ ನವೀಕರಣವನ್ನು ಪರಿಗಣಿಸಿ ರಾಜ್ಯ ಸರ್ಕಾರವು ನಿಯಮಿಸಬಹುದಾದ ಅಂಥ ನಿಯಮಗಳಿಗೊಳಪಟ್ಟು ಅಧಿಸೂಚನೆ ಮೂಲಕ ನಿರ್ಧರಿಸಬಹುದಾದ ಅಂಥ ದರದಲ್ಲಿ ಅಥವಾ ಮೊಬಲಗನ್ನು ವಿಶೇಷಾಧಿಕಾರ ಶುಲ್ಕವಾಗಿ ವಿಧಿಸತಕ್ಕದ್ದು ಮತ್ತು ವಿಶೇಷಾಧಿಕಾರ ಶುಲ್ಕವನ್ನು ವರ್ಷದ ಯಾವುದೇ ಸಮಯದಲ್ಲಿ ಅಧಿಸೂಚಿಸಲಾದ ರೀತಿಯಲ್ಲಿ ಸಂಗ್ರಹಿಸಬಹುದು.][1]][2]

1. 1994ರ ಅಧಿನಿಯಮ 2ರ ಮೂಲಕ 30.09.1967ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2013ರ ಅಧಿನಿಯಮ 26ರ ಮೂಲಕ 30.06.2003ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

[1][**24ಎ. ವಿದೇಶಿ ಮದ್ಯದ ಸಂದರ್ಭದಲ್ಲಿ ವಿಶಿಷ್ಟ ಅಥವಾ ಇತರ ಸವಲತ್ತಿನ ಮಂಜೂರಾತಿ.– (1)** ಅಬ್ಕಾರಿ ಕಮಿಶನರು ಅಥವಾ ಡೆಪ್ಯೂಟಿ ಕಮಿಶನರು ಯಾವೊಬ್ಬ ವ್ಯಕ್ತಿಗೆ ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ಇಡೀ ರಾಜ್ಯಕ್ಕೆ ಅಥವಾ ನಿರ್ದಿಷ್ಟ ಪ್ರದೇಶಕ್ಕೆ ವಿಶಿಷ್ಟ ಅಥವಾ ಇತರ ಸವಲತ್ತಿಗಾಗಿ ಲೈಸೆನ್ಸನ್ನು ಮಂಜೂರು ಮಾಡಬಹುದು,–

(ಎ) ಭಾರತದ ಹೊರಗಡೆ ಉತ್ಪಾದಿಸಲಾದ ಯಾವುದೇ ವಿದೇಶಿ ಮದ್ಯವನ್ನು ದೇಶದ ಹೊರಭಾಗದಿಂದ ಅಥವಾ ರಾಜ್ಯದ ಹೊರಭಾಗದಿಂದ ನೇರವಾಗಿ ಆಮದು ಮಾಡಿಕೊಳ್ಳುವುದಕ್ಕಾಗಿ; ಅಥವಾ

(ಬಿ) ಭಾರತದ ಹೊರಗಡೆ ಉತ್ಪಾದಿಸಲಾದ ಮತ್ತು ರಾಜ್ಯಕ್ಕೆ ಆಮದು ಮಾಡಿಕೊಳ್ಳಲಾದ ಯಾವುದೇ ವಿದೇಶಿ ಮದ್ಯವನ್ನು ಸಗಟು ಅಥವಾ ಚಿಲ್ಲರೆಯಾಗಿ ವಿತರಿಸುವುದಕ್ಕೆ ಅಥವಾ ಸಗಟು ಅಥವಾ ಚಿಲ್ಲರೆಯಾಗಿ ಮಾರಾಟಮಾಡುವುದಕ್ಕಾಗಿ;

(2) (1)ನೇ ಉಪಪ್ರಕರಣದ ಅಡಿಯಲ್ಲಿ ವಿದೇಶಿ ಮದ್ಯವನ್ನು ಆಮದು ಮಾಡಿಕೊಳ್ಳಲು ಲೈಸೆನ್ಸನ್ನು, ಭಾರತ ಸರ್ಕಾರವು ಮಂಜೂರು ಮಾಡಿದ ಲೈಸೆನ್ಸು ಅಥವಾ ಅಧಿಕಾರದ ಅಡಿಯಲ್ಲಿ ವಿದೇಶಿ ಮದ್ಯವನ್ನು ಆಮದು ಮಾಡಿಕೊಳ್ಳಲು ಅಧಿಕಾರ ಹೊಂದಿರುವ ವ್ಯಕ್ತಿಗೆ ಮಾತ್ರ ಮಂಜೂರು ಮಾಡತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಲೈಸೆನ್ಸಿನ ಮಂಜೂರಾತಿಗಾಗಿ ರಾಜ್ಯ ಸರ್ಕಾರವು ಅಂಥ ಲೈಸೆನ್ಸು ಶುಲ್ಕ, ಸವಲತ್ತಿನ ಶುಲ್ಕ, ಕ್ರಯದ ಶುಲ್ಕ ಅಥವಾ ಯಾವುದೇ ಇತರ ಶುಲ್ಕದ ರೂಪದಲ್ಲಿ ಪರಿಗಣೆನೆಯನ್ನು ವಿಧಿಸಬಹುದು.][1]

1. 2001ರ 15ನೇ ಅಧಿನಿಯಮದ ಮೂಲಕ 19.04.2001ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**25. ಮರಗಳಿಂದ ಹೆಂಡ ಇಳಿಸುವ ಬಗೆಗಿನ ಕರವನ್ನು ಯಾರಿಂದ ವಸೂಲು ಮಾಡಬೇಕು.–** ಪ್ರಕರಣ 23ರ ಮೇರೆಗೆ [1][ಅಬ್ಕಾರಿ ಮರಗಳ][1] ಮೇಲೆ ಕರ ಹಾಕುವ ಮೂಲಕ ಶುಲ್ಕವನ್ನು ವಿಧಿಸಿದಾಗ, ಮತ್ತು [1][ಅಬ್ಕಾರಿ ಮರಗಳಿಂದ][1] ಲೈಸೆನ್ಸಿಲ್ಲದೆ ಹೆಂಡ ಇಳಿಸಿದಾಗ, ಬರಬೇಕಾದ ಕರವನ್ನು ಪ್ರಥಮತಃ ಹೆಂಡ ಇಳಿಸುವವನಿಂದ ಅಥವಾ ಅವನು ತಪ್ಪಿದಲ್ಲಿ, ಆ ಭೂಮಿಯ ಅಧಿಭೋಗದಾರನು ಯಾರಾದರೂ ಇದ್ದರೆ, ಅವನಿಂದ ಅಥವಾ ಮರಗಳು ಆ ಭೂಮಿಯ ಅಧಿಭೋಗದಾರನಿಗೆ ಸೇರಿಲ್ಲವಾದರೆ ಅಥವಾ ಭೂಮಿಯು ಅಧಿಭೋಗದಲ್ಲಿರದಿದ್ದರೆ, ಅದರ ಒಡೆತನ ಅಥವಾ ಸ್ವಾಧೀನಹೊಂದಿದ ವ್ಯಕ್ತಿಯಿಂದ, ಮರಗಳಿಂದ ತನ್ನ ಸಮ್ಮತಿಯಿಲ್ಲದೆ ಹೆಂಡ ಇಳಿಸಲಾಗಿದೆಯೆಂಬುದನ್ನು ಅವನು ರುಜುವಾತು ಪಡಿಸಿದ ಹೊರತು, ವಸೂಲು ಮಾಡತಕ್ಕದ್ದು.

1. 1971 ರ ಅಧಿನಿಯಮ 1ರ ಮೂಲಕ 7–08–1970 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

## ಅಧ್ಯಾಯ–VI

## ಲೈಸೆನ್ಸುಗಳು ಮತ್ತು ಅನುಮತಿ ಪತ್ರಗಳು

**26. ಲೈಸೆನ್ಸು ಇತ್ಯಾದಿಗಳ ನಮೂನೆ ಮತ್ತು ಷರತ್ತುಗಳು.–** (1) ಈ ಅಧಿನಿಯಮದ ಅಡಿಯಲ್ಲಿ ಕೊಡಲಾಗುವ ಪ್ರತಿಯೊಂದು ಲೈಸೆನ್ಸು ಅಥವಾ ಅನುಮತಿ ಪತ್ರವನ್ನು ನಿಯಮಿಸಬಹುದಾದಂಥ ಫೀಜಿನ ಸಂದಾಯದ ಮೇಲೆ ಅಂಥ ಅವಧಿಗಾಗಿ ಮತ್ತು ಅಂಥ ನಿರ್ಬಂಧಗಳ ಮೇಲೆ ಮತ್ತು ಅಂಥ ಷರತ್ತುಗಳ ಮೇಲೆ ಕೊಡತಕ್ಕದ್ದು. ಮತ್ತು ಅದು ಅಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ವಿವರಗಳನ್ನೊಳಗೊಂಡಿರತಕ್ಕದ್ದು.

(2) ಲೈಸೆನ್ಸಿಗೆ ಒಳಪಟ್ಟ ಆವರಣಗಳಲ್ಲಿ ಅಬ್ಕಾರಿ ಅಧಿಕಾರಿಗಳಿಗೆ ಇಳಿದುಕೊಳ್ಳುವುದಕ್ಕಾಗಿ ಲೈಸೆನ್ಸುದಾರನು ಸ್ಥಳಾವಕಾಶ ಒದಗಿಸುವುದನ್ನು ಅಥವಾ ಲೈಸೆನ್ಸಿಗೆ ಒಳಪಟ್ಟ ಆವರಣದಲ್ಲಿ ಅಥವಾ ಅದರ ಸಮೀಪದಲ್ಲಿ ಅಂಥ ಸ್ಥಳಾವಕಾಶದ ಬಗ್ಗೆ ಬಾಡಿಗೆ ಅಥವಾ ಇತರ ವೆಚ್ಚ ಸಂದಾಯ ಮಾಡಬೇಕಾಗುವುದನ್ನು ಮತ್ತು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಮತ್ತು ಲೈಸೆನ್ಸಿನ ಉಪಬಂಧಗಳನ್ನು ಪಾಲಿಸಲಾಗುತ್ತಿದೆಯೆಂಬುದನ್ನು ಖಚಿತಪಡಿಸಿಕೊಳ್ಳಲು ಮೇಲ್ವಿಚಾರಣೆ ನಡೆಸುವ ಸಂಬಂಧದಲ್ಲಿ ರಾಜ್ಯ ಸರಕಾರಕ್ಕೆ ತಗಲಬಹುದಾದ (ಅಬ್ಕಾರಿ ಅಧಿಕಾರಿಗಳ ಸಂಬಳಗಳು ಮತ್ತು ಭತ್ಯೆಗಳೂ ಸೇರಿ) ಖರ್ಚುಗಳು, ವೆಚ್ಚಗಳು ಮತ್ತು ವ್ಯಯಗಳ ಸಂದಾಯ ಮಾಡಬೇಕಾಗುವುದನ್ನು (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಷರತ್ತುಗಳನ್ನು ಒಳಗೊಳ್ಳಬಹುದು.

**27. ಜಾಮೀನು ಮತ್ತು ಎದುರೊಪ್ಪಂದವನ್ನು ತೆಗೆದುಕೊಳ್ಳಲು ಅಧಿಕಾರ.–** ನಿಯಮಿಸಬಹುದಾದ ಅಂಥ ನಿಯಮಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ಲೈಸೆನ್ಸು ಕೊಡುವ ಯಾವನೇ ಪ್ರಾಧಿಕಾರಿಯು,–

(ಎ) ಲೈಸೆನ್ಸುದಾರನು ತನ್ನ ಲೈಸೆನ್ಸಿನ ನಿಬಂಧನೆಗಳ ಪಾಲನೆಯ ಬಗ್ಗೆ ಜಾಮೀನು ಕೊಡಬೇಕೆಂದು ಮತ್ತು

(ಬಿ) ತನ್ನ ಲೈಸೆನ್ಸಿನ ರೀತಿಗನುಸಾರವಾಗಿ ಎದುರೊಪ್ಪಂದವನ್ನು ಬರೆದುಕೊಡಲು ಲೈಸೆನ್ಸುದಾರನನ್ನು ಅಗತ್ಯಪಡಿಸಬಹುದು.

**28. ತಾಂತ್ರಿಕ ದೋಷಗಳು, ಅಕ್ರಮಗಳು ಮತ್ತು ಲೋಪಗಳು.–** (1) ಈ ಅಧಿನಿಯಮದ ಮೇರೆಗೆ ಕೊಡಲಾದ ಯಾವ ಲೈಸೆನ್ಸೂ, ಲೈಸೆನ್ಸಿನಲ್ಲಿ ಅಥವಾ ಅದನ್ನು ಕೊಡುವುದಕ್ಕೆ ಮುಂಚೆ ನಡೆದ ಯಾವುವೇ ವ್ಯವಹರಣೆಗಳಲ್ಲಿ ಕೇವಲ ಪಾರಿಭಾಷಿಕ ದೋಷಗಳು, ಅಕ್ರಮಗಳು ಅಥವಾ ಲೋಪಗಳಿವೆಯೆಂಬ ಕಾರಣದಿಂದ ಸಿಂಧುವಲ್ಲವೆಂದು ಭಾವಿಸತಕ್ಕದ್ದಲ್ಲ.

(2) ಯಾವುದು ತಾಂತ್ರಿಕ ದೋಷ, ಅಕ್ರಮತೆ ಅಥವಾ ಲೋಪ ಎಂಬ ಬಗ್ಗೆ ಅಬ್ಕಾರಿ ಕಮಿಶನರನ ತೀರ್ಮಾನವು ಅಂತಿಮವಾಗಿರತಕ್ಕದ್ದು.

**29. ಲೈಸೆನ್ಸು ಇತ್ಯಾದಿಗಳನ್ನು ರದ್ದು ಮಾಡಲು ಅಥವಾ ಅಮಾನತು ಮಾಡಲು ಅಧಿಕಾರ.–** (1) ರಾಜ್ಯ ಸರಕಾರವು ನಿಯಮಿಸಬಹುದಾದಂಥ ನಿರ್ಬಂಧಗಳಿಗೊಳಪಟ್ಟು ಈ ಅಧಿನಿಯಮದ ಮೇರೆಗೆ ಲೈಸೆನ್ಸನ್ನು ಅಥವಾ ಅನುಮತಿ ಪತ್ರವನ್ನು ಕೊಡುವ ಪ್ರಾಧಿಕಾರಿಯು,–

(ಎ) ಅದನ್ನು ಪಡೆದವನು ಸಂದಾಯ ಮಾಡಬೇಕಾಗಿರುವ ಯಾವುದೇ ಶುಲ್ಕವು ಅಥವಾ ಫೀಜು ಯಥಾವಿಧಿ ಸಂದಾಯವಾಗದಿದ್ದರೆ; ಅಥವಾ

(ಬಿ) ಅದನ್ನು ಪಡೆದವನು ಅಥವಾ ಅವನ ಯಾವನೇ ನೌಕರನು ಅಥವಾ ಅವನ ಸ್ಪಷ್ಟ ಅಥವಾ ಇಂಗಿತ ಅನುಮತಿಯಿಂದ ಅವನ ಪರವಾಗಿ ಕೆಲಸ ಮಾಡುವ ಯಾವೊಬ್ಬನು ಅದರ ಯಾವುದೇ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸಿದ ಪ್ರಸಂಗದಲ್ಲಿ; ಅಥವಾ

(ಸಿ) ಅದನ್ನು ಪಡೆದವನು ಅಥವಾ ಅವನ ಯಾವನೇ ನೌಕರನು ಅಥವಾ ಅವನ ಸ್ಪಷ್ಟ ಅಥವಾ ಇಂಗಿತ ಅನುಮತಿಯಿಂದ ಅವನ ಪರವಾಗಿ ಕೆಲಸ ಮಾಡುವ ಯಾವೊಬ್ಬನು ಈ ಅಧಿನಿಯಮದ ಮೇರೆಗಿನ ಯಾವುದೇ ಸಿದ್ಧಾಪರಾಧಿಯಾಗಿದ್ದರೆ; ಅಥವಾ

(ಡಿ) ಅದನ್ನು ಪಡೆದವನು ಸಂಜ್ಞೇಯವಾದ ಮತ್ತು ಜಾಮೀನಿನ ಮೇಲೆ ಬಿಡಲಾಗದ ಯಾವುದೇ ಅಪರಾಧದ, ಅಥವಾ ಅಪಾಯಕಾರಿ ದ್ರವ್ಯಗಳ, ಅಧಿನಿಯಮ, 1930ರ ಮೇರೆಗಿನ ಅಥವಾ ವೈದ್ಯಕೀಯ ಮತ್ತು ಪ್ರಸಾಧನ ಸಾಮಗ್ರಿಗಳ ತಯಾರಿಕೆ ಅಧಿನಿಯಮ, 1955ರ ಅಥವಾ ವ್ಯಾಪಾರ ಮತ್ತು ವಾಣಿಜ್ಯ ಗುರುತುಗಳ ಅಧಿನಿಯಮ, 1958ರ ಮೇರೆಗಿನ ಅಥವಾ ಭಾರತೀಯ ದಂಡ ಸಂಹಿತೆಯ ಪ್ರಕರಣ 481, 482, 483, 484, 485, 486, 487, 488 ಅಥವಾ 489ರ ಮೇರೆಗಿನ ಅಥವಾ 1962ರ ಸೀಮಾ ಶುಲ್ಕ ಅಧಿನಿಯಮದ ಪ್ರಕರಣ 112 ಅಥವಾ 114ರ ಮೇರೆಗಿನ ಯಾವುದೇ ದಂಡನೀಯವಾದ ಯಾವುದೇ ಅಪರಾಧದ ಸಿದ್ಧಾಪರಾಧಿಯಾಗಿದ್ದರೆ; ಅಥವಾ

(ಇ) ಲೈಸೆನ್ಸಿನ ಅಥವಾ ಅನುಮತಿ ಪತ್ರದ ಷರತ್ತುಗಳು ಹಾಗೆ ರದ್ದು ಮಾಡುವ ಅಥವಾ ಅಮಾನತು ಮಾಡುವ ಬಗ್ಗೆ ಉಪಬಂಧಿಸಿದ್ದರೆ,

–[1][ಅದನ್ನು ರದ್ದು ಮಾಡಬಹುದು][1].

1. 2005ರ ಅಧಿನಿಯಮ 14ರ ಮೂಲಕ 11.04.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿದೆ.

[1][ಪರಂತು, (ಸಿ), (ಜಿ) ಮತ್ತು (ಎಚ್) ಖಂಡಗಳನ್ನು ಹೊರುತುಪಡಿಸಿ 36ನೇ ಪ್ರಕರಣದ (1) ಉಪಪ್ರಕರಣದ ಉಪಖಂಡಗಳ ಉಲ್ಲಂಘನೆಯ ಸಂದರ್ಭದಲ್ಲಿ, ಲೈಸೆನ್ಸು ಅಥವಾ ಪರ್ಮಿಟ್‌ಅನ್ನು ಮಂಜೂರು ಮಾಡುವ ಪ್ರಾಧಿಕಾರವು ಲೈಸೆನ್ಸು ಅಥವಾ ಪರ್ಮಿಟ್‌ಅನ್ನು ರದ್ದು ಮಾಡುವ ಅಥವಾ ನಿಲಂಬನ ಮಾಡುವ ವಿವೇಚನೆಯನ್ನು ಹೊಂದಿರತಕ್ಕದ್ದು;

ಮತ್ತು ಪರಂತು, ಲೆಸೆನ್ಸುದಾರನಿಗೆ ಅಥವಾ ಸಂದರ್ಭಾನುಸಾರವಾಗಿ ಪರ್ಮಿಟ್‌ಅನ್ನು ಹೊಂದಿರುವವನಿಗೆ, ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡದೇ ಲೈಸೆನ್ಸು ಅಥವಾ ಪರ್ಮಿಟ್‌ಅನ್ನು ರದ್ದು ಮಾಡತಕ್ಕದ್ದಲ್ಲ ಅಥವಾ ಅಮಾನತು ಮಾಡತಕ್ಕದ್ದಲ್ಲ][1]

1. 2005ರ ಅಧಿನಿಯಮ 14ರ ಮೂಲಕ 11-04-2005 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಯಾವನೇ ವ್ಯಕ್ತಿಯು ಹೊಂದಿರುವ ಲೈಸೆನ್ಸು ಅಥವಾ ಅನುಮತಿ ಪತ್ರವು (1)ನೇ ಉಪಪ್ರಕರಣದ [1][xxx][1] ಮೇರೆಗೆ ರದ್ದಾಗಿರುವಲ್ಲಿ, ಮೇಲೆ ಹೇಳಿದ ಪ್ರಾಧಿಕಾರಿಯು, ಈ ಅಧಿನಿಯಮದ ಅಥವಾ ಅಫೀಮು ಅಧಿನಿಯಮ, 1878ರ ಮೇರೆಗೆ ಅಂಥ ವ್ಯಕ್ತಿಗೆ ಕೊಟ್ಟ ಯಾವುದೇ ಇತರ ಲೈಸೆನ್ಸನ್ನು ಅಥವಾ ಪರ್ಮಿಟ್‌ಅನ್ನು ರದ್ದು ಮಾಡಬಹುದು.

1. 2005ರ ಅಧಿನಿಯಮ 14ರ ಮೂಲಕ 11-04-2005 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(3) ಅದನ್ನು ಪಡೆದವನು ಅಂಥ ರದ್ದಿಯಾತಿ ಅಥವಾ ನಿಲಂಬನೆಯ ಕಾರಣದಿಂದ ಯಾವುದೇ ಪರಿಹಾರಕ್ಕೆ ಅಥವಾ ಅದರ ಸಂಬಂಧದಲ್ಲಿ ಕೊಟ್ಟ ಯಾವುದೇ ಫೀಜಿನ ಅಥವಾ ಮಾಡಿದ ಯಾವುದೇ ಠೇವಣಿಯ ವಾಪಸಾತಿಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

**30. ಲೈಸೆನ್ಸನ್ನು ಹಿಂತೆಗೆದುಕೊಳ್ಳುವ ಅಧಿಕಾರ.–** (1) ಈ ಅಧಿನಿಯಮದ ಅಡಿಯಲ್ಲಿ ಲೈಸೆನ್ಸು ನೀಡಿದ ಪ್ರಾಧಿಕಾರಿಯು, 29ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದವುಗಳನ್ನುಳಿದು ಇತರ ಯಾವುದೇ ಕಾರಣಕ್ಕಾಗಿ ಅಂಥ ಲೈಸೆನ್ಸನ್ನು ಹಿಂತೆಗೆದುಕೊಳ್ಳಬೇಕೆಂದು ಯಾವುದೇ ಸಮಯದಲ್ಲಿ ಪರಿಗಣಿಸಿದರೆ, ಅದು, ತಾನು ಹಾಗೆ ಮಾಡಬೇಕೆಂದಿರುವ ಉದ್ದೇಶದ ಬಗ್ಗೆ ಕನಿಷ್ಠ ಮೂವತ್ತು ದಿನಗಳಿಗೆ ಕಡಿಮೆಯಲ್ಲದ ಲಿಖಿತ ನೋಟೀಸು ಕೊಟ್ಟ ನಂತರ ಆ ಲೈಸೆನ್ಸನ್ನು ಹಿಂತೆಗೆದುಕೊಳ್ಳಬಹುದು.

(2) (1)ನೆಯ ಉಪಪ್ರಕರಣದ ಮೇರೆಗೆ ಲೈಸೆನ್ಸನ್ನು ಹಿಂತೆಗೆದುಕೊಂಡಾಗ, ಲೈಸೆನ್ಸಿನ ಉಳಿದಿರುವ ಅವಧಿಯ ಭಾಗಕ್ಕೆ ಅನುಗುಣವಾದ ಲೈಸೆನ್ಸು ಫೀಜಿನ ಒಂದು ಭಾಗವನ್ನು ಮತ್ತು ಲೈಸೆನ್ಸುದಾರನು ಆ ಬಗ್ಗೆ ಇಟ್ಟ ಠೇವಣಿಯನ್ನು, ಅವನಿಂದ ರಾಜ್ಯ ಸರಕಾರಕ್ಕೆ ಬರಬೇಕಾದ ಮೊಬಲಗನ್ನು ವಜಾ ಮಾಡಿಕೊಂಡು ಅವನಿಗೆ ಮರುಪಾವತಿ ಮಾಡತಕ್ಕದ್ದು.

**31. ಲೈಸೆನ್ಸನ್ನು ಬಿಟ್ಟುಕೊಡುವುದು.–** (1) ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುವನ್ನು ಮಾರಾಟ ಮಾಡಲು ಈ ಅಧಿನಿಯಮದ ಮೇರೆಗೆ ಕೊಟ್ಟ ಲೈಸೆನ್ಸನ್ನು ಹೊಂದಿರುವವನು ಅದನ್ನು ಬಿಟ್ಟುಕೊಡುವ ತನ್ನ ಉದ್ದೇಶದ ಬಗ್ಗೆ ಡೆಪ್ಯುಟಿ ಕಮಿಶನರನಿಗೆ, ಒಂದು ತಿಂಗಳ ಲಿಖಿತ ನೋಟೀಸು ಕೊಟ್ಟು, ಆ ಅವಧಿ ಮುಗಿದ ನಂತರ ಹಾಗೆ ಬಿಟ್ಟು ಕೊಡದಿದ್ದರೆ ಅದು ಚಾಲ್ತಿ ಇರಬಹುದಾಗಿದ್ದ ಉಳಿದ ಅವಧಿಯ ಬಗ್ಗೆ ಸಂದಾಯವಾಗಬಹುದಾದ ಫೀಜನ್ನು ಸಂದಾಯ ಮಾಡಿ ತನ್ನ ಲೈಸೆನ್ಸನ್ನು ಬಿಟ್ಟುಕೊಡಬಹುದು:

ಪರಂತು, ಲೈಸೆನ್ಸನ್ನು ಬಿಟ್ಟುಕೊಡಲು ಸಾಕಷ್ಟು ಕಾರಣವಿದೆಯೆಂದು ಅಬ್ಕಾರಿ ಕಮಿಶನರನಿಗೆ ಮನದಟ್ಟಾದರೆ, ಹಾಗೆ ಬಿಟ್ಟುಕೊಟ್ಟಾಗ ಹಾಗೆ ಸಂದಾಯವಾಗಬಹುದಾದ ಮೊಬಲಗನ್ನು ಅಥವಾ ಅದರ ಯಾವುದೇ ಭಾಗವನ್ನು ಮಾಫಿ ಮಾಡಬಹುದು.

(2) (1)ನೇ ಉಪಪ್ರಕರಣವು 17ನೇ ಪ್ರಕರಣದ ಮೇರೆಗೆ ಕೊಟ್ಟ ಲೈಸೆನ್ಸಿನ ಸಂದರ್ಭದಲ್ಲಿ ಅನ್ವಯಿಸತಕ್ಕದ್ದಲ್ಲ.

## ಅಧ್ಯಾಯ–VII

## ಅಪರಾಧಗಳು ಮತ್ತು ದಂಡಗಳು

**32. ಕಾನೂನು ವಿರುದ್ಧ ಆಮದು ಇತ್ಯಾದಿಗಳ ಬಗ್ಗೆ ದಂಡ.–** (1) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ, ಹೊರಡಿಸಿದ ಅಥವಾ ಕೊಟ್ಟ ಯಾವುದೇ ನಿಯಮದ, ಅಧಿಸೂಚನೆಯ ಅಥವಾ ಆದೇಶಗಳ ಅಥವಾ ಈ ಅಧಿನಿಯಮದ ಮೇರೆಗೆ ಕೊಟ್ಟ ಯಾವುದೇ ಲೈಸೆನ್ಸನ್ನು ಅಥವಾ ಅನುಮತಿ ಪತ್ರವನ್ನು ಉಲ್ಲಂಘಿಸಿದಲ್ಲಿ, ಯಾವೊಬ್ಬನು, ಯಾವುದೇ ಮಾದಕವನ್ನು ರಫ್ತು ಮಾಡಿದರೆ, ಸಾಗಿಸಿದರೆ, ತಯಾರಿಸಿದರೆ, ಸಂಗ್ರಹಿಸಿದರೆ ಅಥವಾ ಸ್ವಾಧೀನದಲ್ಲಿಟ್ಟುಕೊಂಡರೆ, ಅವನ ಅಪರಾಧ ನಿರ್ಣಿತನಾದ ಬಳಿಕ, [1][ಪ್ರತಿಯೊಂದು ಅಪರಾಧಕ್ಕಾಗಿ [2][ಐದು

ವರ್ಷಗಳವರೆಗಿನ ಕಠಿಣ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು]:[2]][1]

[1][ಪರಂತು ಅಂಥ ದಂಡನೆಯು–

(i) ಮೊದಲನೆಯ ಅಪರಾಧಕ್ಕಾಗಿ [4][[2][ ಒಂದು ವರ್ಷದ ಕಠಿಣ ಕಾರಾವಾಸಕ್ಕೆ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ;][2]][4] ಮತ್ತು

(ii) ಎರಡನೆಯ ಮತ್ತು ಅನಂತರದ ಅಪರಾಧಗಳಿಗಾಗಿ, ಅಂಥ ಪ್ರತಿಯೊಂದು ಅಪರಾಧಕ್ಕೆ [2][ಎರಡು ವರ್ಷಗಳ ಕಠಿಣ ಕಾರಾವಾಸಕ್ಕೆ ಮತ್ತು ಇಪ್ಪತ್ತು ಸಾವಿರ ರೂಪಾಯಿಗಳ][2] ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ.][1]

(2) ಈ ಅಧಿನಿಯಮದ ಅಥವಾ ಅದರನ್ವಯ ರಚಿತವಾದ, ಹೊರಡಿಸಿದ ಅಥವಾ ಕೊಟ್ಟ ಯಾವುದೇ ನಿಯಮ, ಅಧಿಸೂಚನೆ ಅಥವಾ ಆದೇಶದ ಅಥವಾ ಈ ಅಧಿನಿಯಮದ ಮೇರೆಗೆ ಕೊಟ್ಟ ಯಾವುದೇ ಲೈಸೆನ್ಸನ್ನು ಅಥವಾ ಅನುಮತಿ ಪತ್ರವನ್ನು ಉಲ್ಲಂಘಿಸಿ ಯಾವೊಬ್ಬನು–

(ಎ) 37ನೇ ಪ್ರಕರಣದಲ್ಲಿ ಉಪಬಂಧಿಸಿದ ಸಂದರ್ಭಗಳನ್ನುಳಿದು, ಯಾವುದೇ ಮಾದಕವನ್ನು ಮಾರಿದರೆ; ಅಥವಾ

(ಬಿ) ಮಾದಕ ನಾರಿನ ಗಿಡದ ಸಾಗುವಳಿ ಮಾಡಿದರೆ ಅಥವಾ ಅದು ತಾನಾಗಿಯೇ ಬೆಳೆಯುವುದನ್ನು ತಡೆಗಟ್ಟಲು ಅಥವಾ ಅದರ ಮೂಲೋತ್ಪಾಟನ ಮಾಡಲು ನಿಯಮಿಸಿದ ಕ್ರಮಗಳನ್ನು ಕೈಗೊಳ್ಳಲು ತಪ್ಪಿದರೆ; ಅಥವಾ

(ಸಿ) ಹೆಂಡ ಉತ್ಪತ್ತಿಯಾಗುವ ಮರದಿಂದ ಹೆಂಡ ಇಳಿಸಿದರೆ ಅಥವಾ ಅದರಿಂದ ಹೆಂಡ ತೆಗೆದರೆ; ಅಥವಾ

(ಡಿ) ಯಾವುದೇ ಡಿಸ್ಟಿಲರಿಯನ್ನು ಅಥವಾ ಬ್ರಿವರಿಯನ್ನು, ಸಾರಾಯಿ ಕಾರ್ಖಾನೆಯನ್ನು ನಿರ್ಮಾಣ ಮಾಡಿದರೆ ಅಥವಾ ನಡೆಸಿದರೆ; ಅಥವಾ

(ಇ) ಹೆಂಡವನ್ನುಳಿದು ಇತರ ಯಾವುದೇ ಮಾದಕವನ್ನು ತಯಾರಿಸುವ ಉದ್ದೇಶಕ್ಕಾಗಿ ಯಾವುದೇ ಪದಾರ್ಥವನ್ನು ಬಟ್ಟಿಯಂತ್ರವನ್ನು, ಪಾತ್ರೆಯನ್ನು ಉಪಕರಣವನ್ನು ಅಥವಾ ಸಲಕರಣೆಯನ್ನು ಉಪಯೋಗಿಸಿದರೆ, ಇಟ್ಟಿದ್ದರೆ ಅಥವಾ ಸ್ವಾಧೀನದಲ್ಲಿಟ್ಟುಕೊಂಡಿದ್ದರೆ;

(ಎಫ್) ಈ ಅಧಿನಿಯಮದ ಮೇರೆಗೆ ಲೈಸೆನ್ಸು ಕೊಡಲಾದ, ಸ್ಥಾಪಿತವಾದ ಅಥವಾ ಮುಂದುವರಿಯುತ್ತಿರುವ ಯಾವುದೇ ಡಿಸ್ಟಿಲರಿಯಿಂದ, ಸಾರಾಯಿ ಕಾರ್ಖಾನೆಯಿಂದ ಅಥವಾ ಉಗ್ರಾಣದಿಂದ ಯಾವುದೇ ಮಾದಕವನ್ನು ಸಾಗಿಸಿದರೆ; ಅಥವಾ

(ಜಿ) ಯಾವುದೇ ಮದ್ಯವನ್ನು ಸೀಸೆಗೆ ತುಂಬಿದರೆ;

ಅವನು ಅಪರಾಧ ಸಿದ್ಧಪಟ್ಟ ಮೇಲೆ [1][ಪ್ರತಿಯೊಂದು ಅಪರಾಧಕ್ಕಾಗಿ [2][ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ಅಥವಾ ಇಪ್ಪತ್ತು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:][2]][1]

[1][ಪರಂತು ದಂಡನೆಯು–

(i) ಮೊದಲನೆಯ ಅಪರಾಧಕ್ಕೆ [4][ಒಂದು ವರ್ಷದ ಕಠಿಣ ಕಾರಾವಾಸಕ್ಕೆ ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ;][4] ಮತ್ತು

(ii) ಎರಡನೆಯ ಮತ್ತು ಅನಂತರದ ಅಪರಾಧಗಳಿಗಾಗಿ [2][ಅಂಥ ಪ್ರತಿಯೊಂದು ಅಪರಾಧಕ್ಕೆ ಒಂದು ವರ್ಷದ ಕಠಿಣ ಕಾರಾವಾಸಕ್ಕೆ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ.][2]][1]

[3][(3) ಯಾವುದೇ ಸಾರ್ವಜನಿಕ ಸ್ಥಳದ ಒಡೆಯನಾಗಿರುವ ಅಥವಾ ಮೇಲ್ವಿಚಾರಣೆ ಅಥವಾ ನಿಯಂತ್ರಣವನ್ನು ಹೊಂದಿರುವ ಯಾವೊಬ್ಬನ್ನು, ಮದ್ಯವನ್ನು ಬಳಸುವುದಕ್ಕೆ ಅನುಮತಿಸಿದರೆ ಅಥವಾ 15ಎ ಪ್ರಕರಣದ ಉಪಬಂಧಗಳ ಉಲ್ಲಂಘನೆಯಲ್ಲಿ, ಅಬಕಾರಿ ಕಮಿಷನರ್ ಅಥವಾ ಡೆಪ್ಯೆಟಿಕಮೀಷನರ್ ಮೂಲಕ ಪಡೆದ ಲೈಸೆನ್ಸನ ಅಡಿಯಲ್ಲಿ ಮದ್ಯ ಬಳಸುವುದಕ್ಕೆ ಅನುಮತಿಯಲ್ಲದ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಮದ್ಯವನ್ನು ಒಳಸುವ ಯೊರೊಬ್ಬನು, ಅಪರಾಧ ನಿರ್ಣಯವಾದ ಮೇಲೆ, ಎರಡುನೂರು ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ [4][ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು][4]][3]

[5][(4) 13 ಎ ಪ್ರಕಣದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವವನು ಅಪರಾದ ನಿರ್ಣೀತವಾದ ಮೇಲೆ ಮೊದಲ ಐದು ಅಪರಾಧಗಳವರೆಗೆ ಪ್ರತಿ ಸಲವೂ ಐದು ಸಾವಿರಚಿಥ ರೂಪಾಯಿಗಳ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು. ತರುವಾಯದ ಅಪರಾಧದ ಸಂದರ್ಭದಲ್ಲಿ, ಆತನು

ಆರು ತಿಂಗಳ ಅವಧಿಯ ಕಾರವಾಸದೊಂದಿಗೆ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಅಥವಾ ಅವೆರಡರಿಂದಲೂ ದಂಡತನಾಗತಕ್ಕದ್ದು.][5]

1. 1970ರ ಅಧಿನಿಯಮ 1 ರ ಮೂಲಕ 23-12-1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1987ರ ಅಧಿನಿಯಮ 36 ರ ಮೂಲಕ 10-08-1987 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2001ರ ಅಧಿನಿಯಮ 15 ರ ಮೂಲಕ 19-04-2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
4. 2005ರ ಅಧಿನಿಯಮ 14 ರ ಮೂಲಕ 11-04-2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2017ರ ಅಧಿನಿಯಮ 01 ರ ಮೂಲಕ 4-01-2017 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**33. ಗುಣಾಪಹೃತ ಮದ್ಯಸಾರವನ್ನು ಮನುಷ್ಯೋಪಯೋಗಕ್ಕೆ ತಕ್ಕದುದನ್ನಾಗಿ ಮಾಡುವುದಕ್ಕೆ ದಂಡ.**-ಯಾವೊಬ್ಬನು,-

(ಎ) ಗುಣಾಪಹೃತ ಯಾವುದೇ ಮದ್ಯಸಾರವನ್ನು ಮನುಷ್ಯೋಪಯೋಗಕ್ಕೆ ತಕ್ಕುದುದುನ್ನಾಗಿ ಮಾಡಿದರೆ; ಅಥವಾ

(ಬಿ) ತತ್ಸಂಬಂಧದಲ್ಲಿ ಅಂಥ ಅಪರಾಧ ಮಾಡಲಾಗಿದೆ ಅಥವಾ ಅಂಥ ಅಪರಾಧ ಮಾಡಲು ಯತ್ನಿಸಲಾಗಿದೆಯೆಂದು ತಾನು ತಿಳಿಯುವ ಅಥವಾ ನಂಬಲು ಕಾರಣವಿರುವ ಯಾವುದೇ ಮದ್ಯಸಾರವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದರೆ;

ಅವನು ಅಪರಾಧ ಸಿದ್ದ ಪಟ್ಟ ಮೇಲೆ, [1][ಪ್ರತಿಯೊಂದು ಅಪರಾಧಕ್ಕಾಗಿ [3][ನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ಮತ್ತು ಇಪ್ಪತ್ತು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.][3]][1]

[2][(1) ಪರಂತು ದಂಡನೆಯು,

(i) ಮೊದಲನೆಯ ಅಪರಾಧಕ್ಕಾಗಿ [3][ಎರಡು ವರ್ಷಗಳ ಕಠಿಣ ಕಾರಾವಾಸಕ್ಕೆ ಮತ್ತು ಐದುಸಾವಿರ ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ;][3] ಮತ್ತು

(ii) ಎರಡನೆಯ ಮತ್ತು ಅನಂತರದ ಅಪರಾಧಗಳಿಗಾಗಿ ಅಂಥ [3][ಪ್ರತಿಯೊಂದು ಅಪರಾಧಕ್ಕಾಗಿ ಎರಡು ವರ್ಷಗಳ ಕಠಿಣ ಕಾರಾವಾಸಕ್ಕೆ ಮತ್ತು ಹತ್ತು ಸಾವಿರ ರೂಪಾಯಿಗಳ][3] ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ;][2]

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ ತದ್ವಿರುದ್ಧ ರುಜುವಾತಾದ ಹೊರತು ಯಾವುದೇ ಮದ್ಯಸಾರವು ಅದನ್ನು ರಾಸಾಯನಿಕ ವಿಶ್ಲೇಷಣೆಗೊಳಪಡಿಸಿದಾಗ ನಿಯಿಮಿಸಿದ ಗುಣಾಪಹೃತ ದ್ರವ್ಯಗಳ ಯಾವುದೇ ಪ್ರಮಾಣವನ್ನು ಒಳಗೊಂಡಿರುವುದು ರುಜುವಾತಾದರೆ ಅದು ಗುಣಾಪಹೃತವಾಗಿದೆ ಎಂದು ಅಥವಾ ಅದನ್ನೊಳಗೊಂಡಿದೆಯೆಂದು ಅಥವಾ ಗುಣಾಪಹೃತ ಮದ್ಯಸಾರದಿಂದ ತೆಗೆಯಲಾಗಿದೆ ಎಂದು ಪೂರ್ವಭಾವನೆ ಮಾಡತಕ್ಕದ್ದು.

1. 1970ರ ಅಧಿನಿಯಮ 1 ರ ಮೂಲಕ 23-12-1969ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1970ರ ಅಧಿನಿಯಮ 1 ರ ಮೂಲಕ 23-12-1969ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2005ರ ಅಧಿನಿಯಮ 1 ರ ಮೂಲಕ 11-4-2005ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**34. ಕಾನೂನು ವಿರೋಧಿ ಸ್ವಾಧೀನಕ್ಕೆ ದಂಡ.-** ಕಾನೂನು ಅಧಿಕಾರವಿಲ್ಲದೆ ಯಾವನೊಬ್ಬನು ಅದನ್ನು ಕಾನೂನು ವಿರುದ್ಧವಾಗಿ ಆಮದು ಮಾಡಲಾಗಿದೆ, ಸಾಗಿಸಲಾಗಿದೆ, ತಯಾರಿಸಲಾಗಿದೆ, ಬಳಸಲಾಗಿದೆ ಅಥವಾ ಸಂಗ್ರಹಿಸಲಾಗಿದೆಯೆಂದು ಅಥವಾ ಅದರ ಬಗ್ಗೆ ನಿಯಮಿಸಿದ ಫೀಜು ಸಂದಾಯವಾಗಿಲ್ಲವೆಂದು ತಿಳಿದೂ ಯಾವುದೇ ಮಾದಕದ ಯಾವುದೇ ಪ್ರಮಾಣವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದರೆ, ಅವನು ಅಪರಾಧ ನಿರ್ಣಿತನಾದ ಮೇಲೆ [1][ನಾಲ್ಕು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು;][1]

[2][ಪರಂತು, ದಂಡನೆಯು-

(i) ಮೊದಲನೆಯ ಅಪರಾಧಕ್ಕಾಗಿ, [1][ಒಂದು ವರ್ಷದ ಕಾರಾವಾಸಕ್ಕೆ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ;][1] ಮತ್ತು

(ii) ಎರಡನೆಯ ಮತ್ತು ಅನಂತರ ಅಪರಾಧಗಳಿಗಾಗಿ, ಅಂಥ ಪ್ರತಿಯೊಂದು ಅಪರಾಧಕ್ಕಾಗಿ [1][ಎರಡು ವರ್ಷಗಳ ಕಾರಾವಾಸಕ್ಕೆ ಮತ್ತು ಇಪ್ಪತ್ತು ಸಾವಿರ ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ:][1]

ಮತ್ತೂ ಪರಂತು, ವಿಧಿಸಿದ ಜುಲ್ಮಾನೆಯು ಅಂಥ ಮಾದಕದ ಮೇಲೆ ವಿಧಿಸಬಹುದಾದ ಶುಲ್ಕದ ಮೊಬಲಗಿನ ನಾಲ್ಕರಷ್ಟಕ್ಕಿಂತ ಕಡಿಮೆಯಾಗಿರತಕ್ಕದ್ದಲ್ಲ.][2]

1. 1987ರ ಅಧಿನಿಯಮ36ರ ಮೂಲಕ 10.8.1987 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಹಾಗೂ ಮತ್ತೆ 2005ರ ಅಧಿನಿಯಮ 14ರ ಮೂಲಕ 11-04-2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1970ರ ಅಧಿನಿಯಮ 1ರ ಮೂಲಕ 23-12-1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**35. ಅನ್ಯಥಾ ಉಪಬಂಧಿಸಿದ ಅಪರಾಧಕ್ಕಾಗಿ ದಂಡ.–** ಈ ಅಧಿನಿಯಮದ ಅಥವಾ ಅದರನ್ವಯ ರಚಿಸಿದ, ಹೊರಡಿಸಿದ ಅಥವಾ ನೀಡಲಾದ ಯಾವುದೇ ನಿಯಮ, ಅಧಿಸೂಚನೆ ಅಥವಾ ಆದೇಶವನ್ನು ಉಲ್ಲಂಘಿಸಿದ ಯಾವನೊಬ್ಬನು ಏನೊಂದು ಕೃತ್ಯವನ್ನು ಮಾಡಿದರೆ ಮತ್ತು ಅದರ ಬಗ್ಗೆ ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧವಿರದಿದ್ದರೆ, ಅವನು ಅಪರಾಧ ನಿರ್ಣಿತನಾದ ಮೇಲೆ [1][ಎರಡು ನೂರು ರೂಪಾಯಿಗಳಿಗೆ ಕಡಿಮೆಯಿರದ ಮತ್ತು ಒಂದು ಸಾವಿರ ರೂಪಾಯಿಗೆ ಹೆಚ್ಚಾಗದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.][1]

1. 1970 ರ ಅಧಿನಿಯಮ 1ರ ಮೂಲಕ 23-12-1969 ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**36. ಲೈಸೆನ್ಸುದಾರ ಮೊದಲಾದವರ ದುರ್ವರ್ತನೆಗೆ ದಂಡ.–** (1) ಈ ಅಧಿನಿಯಮದ ಮೇರೆಗೆ ಕೊಟ್ಟ ಲೈಸೆನ್ಸನ್ನು ಅಥವಾ ಅನುಮತಿ ಪತ್ರವನ್ನು ಪಡೆದವನು ಅಥವಾ ಹಾಗೆ ಪಡೆದವನ ನೌಕರನಾಗಿರುವ ಅಥವಾ ಅವನ ಪರವಾಗಿ ಕೆಲಸ ಮಾಡುವ ಯಾವೊಬ್ಬನು–

(ಎ) ಅಬ್ಕಾರಿ ಅಧಿಕಾರಿಯು ಕೇಳಿದಾಗ ಅಥವಾ ಹಾಗೆ ಕೇಳಲು ಯುಕ್ತವಾಗಿ ಅಧಿಕಾರ ನೀಡಿದ ಯಾವೊಬ್ಬ ಇತರ ಅಧಿಕಾರಿಯು ಕೇಳಿದಾಗ ಅಂಥ ಲೈಸನ್ಸನ್ನು ಅಥವಾ ಅನುಮತಿ ಪತ್ರವನ್ನು ಹಾಜರುಪಡಿಸಲು ತಪ್ಪಿದರೆ; ಅಥವಾ

(ಬಿ) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರದ ಲೈಸೆನ್ಸಿನ ಅಥವಾ ಅನುಮತಿ ಪತ್ರದ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿ ಉದ್ದೇಶ ಪೂರ್ವಕವಾಗಿ ಯಾವುದೇ ಕೃತ್ಯವನ್ನು ಮಾಡಿದರೆ ಅಥವಾ ಮಾಡಲು ತಪ್ಪಿದರೆ; ಅಥವಾ

(ಸಿ) 32ನೇ ಪ್ರಕರಣದಲ್ಲಿ ಉಪಬಂಧಿಸಿರುವ ಸಂದರ್ಭವನ್ನುಳಿದು 71ನೇ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿದರೆ; ಅಥವಾ

(ಡಿ) ಯಾವುದೇ ಮಾದಕವನ್ನು ಮಾರಾಟ ಮಾಡುವ ಅಥವಾ ತಯಾರಿಸುವ ಯಾವುದೇ ಸ್ಥಳದಲ್ಲಿ ಕುಡಿದು ಅಮಲಿನಲ್ಲಿರಲು, ದುರ್ವರ್ತಿಸಲು ಅಥವಾ ಜೂಜಾಡಲು ಅವಕಾಶ ಕೊಟ್ಟರೆ; ಅಥವಾ

(ಇ) ಜಾಮೀನಿನ ಮೇಲೆ ಬಿಡಲಾಗದ ಯಾವುದೇ ಅಪರಾಧದ ಸಿದ್ಧಾಪರಾಧಿಯೆಂದು ತಾನು ತಿಳಿದಿರುವ ಅಥವಾ ನಂಬಲು ಕಾರಣವಿರುವ ಅಥವಾ ಕುಪ್ರಸಿದ್ಧ ವ್ಯಭಿಚಾರಿಗಳನ್ನು ಅಥವಾ ರೂಢಾಪರಾಧಿಗಳನ್ನು, ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುವನ್ನು ಮಾರಾಟ ಮಾಡುವ ಅಥವಾ ತಯಾರಿಸುವ ಆವರಣದಲ್ಲಿ ಹೋಗಲು, ಬರಲು ಅಥವಾ ಅಲ್ಲಿ ಸೇರಲು ಅಥವಾ ಅಲ್ಲಿ ಉಳಿಯಲು ಅವಕಾಶ ಕೊಟ್ಟರೆ ಅಥವಾ ಅದನ್ನು ಸಹಿಸಿದರೆ; ಅಥವಾ

(ಎಫ್) ಕುಡಿದ ಅಮಲಿನಲ್ಲಿರುವ ಯಾವೊಬ್ಬ ವ್ಯಕ್ತಿಗೆ ಮಾದಕವನ್ನು ಮಾರಾಟ ಮಾಡಿದರೆ; ಅಥವಾ

(ಜಿ) ನೋಡಲು ಹದಿನೆಂಟು ವರ್ಷ ವಯಸ್ಸಿಗೆ ಕಡಿಮೆಯೆಂದು ಕಾಣುವ ಯಾವುದೇ ಮಗುವಿಗೆ ಯಾವುದೇ ಮಾದಕವನ್ನು ಮಾರಾಟ ಮಾಡಿದರೆ ಅಥವಾ ಕೊಟ್ಟರೆ ಅಥವಾ ಅಬ್ಕಾರಿ ಶುಲ್ಕ ವಿಧಿಸಬಹುದಾದ ಯಾವುದೇ ವಸ್ತುವನ್ನು ಮಾರಾಟ ಮಾಡುವ ಅಥವಾ ತಯಾರಿಸುವ ಯಾವುದೇ ಆವರಣದಲ್ಲಿ ಅಂಥ ಮಗುವು ಉಳಿದುಕೊಳ್ಳಲು ಅವಕಾಶ ಕೊಟ್ಟರೆ ಅಥವಾ ಅದನ್ನು ಸಹಿಸಿದರೆ; ಅಥವಾ

(ಎಚ್) 20ನೇ ಪ್ರಕರಣವನ್ನು ಉಲ್ಲಂಘಿಸಿ, ಆ ಪ್ರಕರಣದಲ್ಲಿ ಉಲ್ಲೇಖಿಸಿದ ತನ್ನ ಲೈಸೆನ್ಸ್ ಪಡೆದಿರುವ ಆವರಣದ ಯಾವುದೇ ಭಾಗದಲ್ಲಿ ಯಾವುದೇ ಮಗುವನ್ನು ಅಥವಾ ಹೆಂಗಸನ್ನು ನಿಯೋಜಿಸಿಕೊಂಡರೆ ಅಥವಾ ನಿಯೋಜಿಸಲು ಅವಕಾಶ ಕೊಟ್ಟರೆ;–

ಅವನು, ಅಪರಾಧ ಸಿದ್ಧಪಟ್ಟ ಮೇಲೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಲೈಸೆನ್ಸನ್ನು ಅಥವಾ ಅನುಮತಿ ಪತ್ರವನ್ನು ಹೊಂದಿರುವವನು ಅಥವಾ ಅವನ ನಿಯೋಜನೆಯಲ್ಲಿರುವ ಅಥವಾ ಅವನ ಪರವಾಗಿ ಕೆಲಸ ಮಾಡುವ ಯಾವೊಬ್ಬ ವ್ಯಕ್ತಿಯು ಹಾಗೆ ಲೈಸೆನ್ಸು ಅಥವಾ ಅನುಮತಿ ಪತ್ರವನ್ನು ಪಡೆದಿರುವವನ ಆವರಣದಲ್ಲಿ ಕುಡಿದು ಅಮಲಿನಲ್ಲಿರಲು ಅನುಮತಿ ಕೊಟ್ಟಿರುವನೆಂದು ಆರೋಪಿತನಾಗಿರುವಲ್ಲಿ, ಮತ್ತು ಅಂಥ ಆವರಣದಲ್ಲಿ ಯಾವೊಬ್ಬ ವ್ಯಕ್ತಿಯು ಕುಡಿದು ಅಮಲಿನಲ್ಲಿದ್ದನೆಂದು ರುಜುವಾತಾದರೆ, ಲೈಸೆನ್ಸು ಪಡೆದವನು ಮತ್ತು ಅವನಿಂದ ನಿಯೋಜಿತರಾದ ವ್ಯಕ್ತಿಗಳು ಅಂಥ ಆವರಣದಲ್ಲಿ ಕುಡಿದು ಅಮಲಿನಲ್ಲಿರದಂತೆ ತಡೆಯಲು ಎಲ್ಲ ಯುಕ್ತ ಕ್ರಮಗಳನ್ನು ಕೈಗೊಂಡಿದ್ದರೆಂಬುದನ್ನು ರುಜುವಾತುಪಡಿಸುವ ಭಾರವು ಆರೋಪಣೆಗೆ ಗುರಿಯಾದ ವ್ಯಕ್ತಿಯ ಮೇಲೆ ಇರುವುದು.

**37. ಲೈಸೆನ್ಸು ಪಡೆದ ಮಾರಾಟಗಾರ ಅಥವಾ ತಯಾರಿಕೆದಾರರಿಂದ [1][ಅಥವಾ ಯಾವೊಬ್ಬ ಇತರ ವ್ಯಕ್ತಿಯಿಂದ][1] ಕಲಬೆರಕೆ ಇತ್ಯಾದಿಗಳಿಗೆ ದಂಡ.–** (1) ಈ ಅಧಿನಿಯಮದ ಮೇರೆಗೆ ಯಾವುದೇ ಮಾದಕವನ್ನು ಮಾರಾಟ ಮಾಡಲು ಅಥವಾ ತಯಾರಿಸಲು ಲೈಸೆನ್ಸು ಪಡೆದಿರುವ ಯಾವೊಬ್ಬನು, ಅಥವಾ ಹಾಗೆ ಲೈಸೆನ್ಸು ಪಡೆದವನ ನಿಯೋಜನೆಯಲ್ಲಿರುವ ಯಾವೊಬ್ಬ

ವ್ಯಕ್ತಿಯು,[1][ಅಥವಾ ಯಾವೊಬ್ಬ ಇತರೆ ವ್ಯಕ್ತಿಯು][1] ತನ್ನಿಂದ ಮಾರಾಟವಾಗುವ ಅಥವಾ ತಯಾರಿಸಲಾಗುವ ಮಾದಕದೊಂದಿಗೆ, ಅದರ ಮಾದಕ ಗುಣ ಅಥವಾ ಬಲವನ್ನು ವಾಸ್ತವಿಕವಾಗಿ ಅಥವಾ ತೋರಿಬರುವಂತೆ ಹೆಚ್ಚಿಸಬಹುದಾದ ಯಾವುದೇ ಹಾನಿಕಾರಕ ದ್ರವ್ಯವನ್ನು ಅಥವಾ ವಿದೇಶೀ ಪದಾರ್ಥವನ್ನು ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮದಿಂದ ನಿಷೇಧಿಸಲಾದ ಯಾವುದೇ ಪದಾರ್ಥವನ್ನು ಬೆರೆಸಿದರೆ ಅಥವಾ ಬೆರೆಸಲು ಅವಕಾಶ ಕೊಟ್ಟರೆ, ಹಾಗೆ ಬೆರೆಸುವುದು ಭಾರತೀಯ ದಂಡ ಸಂಹಿತೆಯ 272ನೇ ಪ್ರಕರಣದ ಮೇರೆಗೆ ಕಲಬೆರಕೆಯೆಂದೆನಿಸದಿದ್ದಾಗ್ಯೂ, ಅವನು ಅಪರಾಧ ನಿರ್ಣಿತನಾದ ಮೇಲೆ, [2][ಮೂರು ವರ್ಷಗಳವರೆಗಿನ ಅವಧಿಯವರೆಗಿನ ಕಾರಾವಾಸದಿಂದ ಮತ್ತು (ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿರದ ಮತ್ತು ಎರಡು ಐವತ್ತು ರೂಪಾಯಿಗಳಿಗೆ ಹೆಚ್ಚಾಗಿರದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು)][2].

(2) ಈ ಅಧಿನಿಯಮದ ಮೇರೆಗೆ ಯಾವುದೇ ಮಾದಕದ ಮಾರಾಟಕ್ಕೆ ಅಥವಾ ತಯಾರಿಕೆಗೆ ಲೈಸೆನ್ಸು ಪಡೆದಿರುವ ಯಾವೊಬ್ಬನು, ಅಥವಾ ಹಾಗೆ ಲೈಸೆನ್ಸು ಹೊಂದಿರುವವನ ನೌಕರಿಯಲ್ಲಿರುವ ವ್ಯಕ್ತಿಯು [1][ಅಥವಾ ಯಾವೊಬ್ಬ ಇತರ ವ್ಯಕ್ತಿಯು][1]

1. 2007ರ ಅಧಿನಿಯಮ 27ರ ಮೂಲಕ 29-08-2007 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1970ರ ಅಧಿನಿಯಮ 1 ರ ಮೂಲಕ 23-12-1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಮತ್ತು 2005ರ ಅಧಿನಿಯಮ 14ರ ಮೂಲಕ 11.4.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಅದು ಭಾರತೀಯ ಮದ್ಯವೆಂಬುದು ತನಗೆ ತಿಳಿದಿದ್ದರೂ ಅಥವಾ ನಂಬಲು ಕಾರಣವಿದ್ದರೂ, ಅದನ್ನು ವಿದೇಶಿ ಮದ್ಯವೆಂದು ಮಾರಿದರೆ, ಅಥವಾ ಇಟ್ಟರೆ ಅಥವಾ ಮಾರಾಟಕ್ಕೆ ಪ್ರದರ್ಶಿಸಿದರೆ; ಅಥವಾ

(ಬಿ) ಸೀಸೆ, ಪೆಟ್ಟಿಗೆ, ಪಿಂಡಿ ಅಥವಾ ಪಾತ್ರೆಯು ವಿದೇಶಿ ಮದ್ಯವುಳ್ಳದ್ದಾಗಿದೆ ಎಂದು ನಂಬುವಂತೆ ಮಾಡುವ ಉದ್ದೇಶದಿಂದ ಭಾರತೀಯ ಮದ್ಯವುಳ್ಳ ಅಂಥ ಯಾವುದೇ ಸೀಸೆ ಅಥವಾ ಸೀಸೆಯ ಯಾವುದೇ ಮುಚ್ಚಳಕ್ಕೆ, ಪೆಟ್ಟಿಗೆಗೆ, ಪಿಂಡಿಗೆ ಅಥವಾ ಇತರ ಪಾತ್ರೆಗೆ ಗುರುತು ಹಾಕಿದರೆ, ಅಥವಾ ಭಾರತೀಯ ಮದ್ಯವಿರುವ ಅದರ ಮೇಲೆ ಅಥವಾ ಅದರ ಮುಚ್ಚಳದ ಮೇಲೆ ಗುರುತುಳ್ಳ ಯಾವುದೇ ಸೀಸೆ, ಪೆಟ್ಟಿಗೆ, ಪಿಂಡಿ ಅಥವಾ ಇತರ ಪಾತ್ರೆಯನ್ನು ಉಪಯೋಗಿಸಿದರೆ ಮತ್ತು ಅಂಥ ಕೃತ್ಯವು ಭಾರತ ದಂಡ ಸಂಹಿತೆಯ 482ನೇ ಪ್ರಕರಣದ ಮೇರೆಗೆ ಯಾವನೇ ವ್ಯಕ್ತಿಗೆ ಮೋಸ ಮಾಡುವ ಅಥವಾ ಕ್ಷತಿಗೊಳಿಸುವ ಉದ್ದೇಶದಿಂದ ಸುಳ್ಳು ವ್ಯಾಪಾರದ ಗುರುತು ಉಪಯೋಗಿಸಿದ ಅಪರಾಧವಾಗದಿದ್ದಾಗ್ಯೂ; ಅಥವಾ

(ಸಿ) ಸೀಸೆ, ಪೆಟ್ಟಿಗೆ, ಪಿಂಡಿ ಅಥವಾ ಇತರ ಪಾತ್ರೆಯು ವಿದೇಶೀ ಮದ್ಯವುಳ್ಳದ್ದಾಗಿದೆಯೆಂದು ನಂಬುವಂತೆ ಮಾಡುವ ಉದ್ದೇಶದಿಂದ ಅದರ ಮೇಲೆ ಅಥವಾ ಅದರ ಮುಚ್ಚಳದ ಮೇಲೆ ಗುರುತಿರುವ ಸೀಸೆ, ಪೆಟ್ಟಿಗೆ, ಪಿಂಡಿ ಅಥವಾ ಇತರ ಪಾತ್ರೆಯಲ್ಲಿ ಭಾರತೀಯ ಮದ್ಯವನ್ನು ಮಾರಿದರೆ ಅಥವಾ ಇಟ್ಟರೆ, ಅಥವಾ ಮಾರಾಟಕ್ಕೆ ಪ್ರದರ್ಶಿಸಿದರೆ, ಮತ್ತು ಅಂಥ ಕೃತ್ಯವು ಭಾರತೀಯ ದಂಡ ಸಂಹಿತೆಯ 486ನೇ ಪ್ರಕರಣದ ಮೇರೆಗೆ ಖೋಟಾ ವ್ಯಾಪಾರ ಗುರುತು ಹಾಕಿ ಸರಕುಗಳನ್ನು ಮಾರಾಟ ಮಾಡುವ ಅಪರಾಧವಾಗದಿದ್ದಾಗ್ಯೂ ಅಥವಾ ಅವನು, ಅಪರಾಧ ಸಿದ್ಧಪಟ್ಟಮೇಲೆ, ಎರಡು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕುದು:

[2][ಪರಂತು, ದಂಡನೆಯು-

(i) ಮೊದಲನೆಯ ಅಪರಾಧಕ್ಕಾಗಿ, [1][ಮೂರು ವರ್ಷಗಳ ಕಾರಾವಾಸಕ್ಕೆ ಮತ್ತು ಇಪ್ಪತ್ತು ಸಾವಿರ ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ;][1] ಮತ್ತು

(ii) ಎರಡನೆಯ ಮತ್ತು ಅನಂತರದ ಅಪರಾಧಗಳಿಗಾಗಿ, ಅಂಥ ಪ್ರತಿಯೊಂದು ಅಪರಾಧಕ್ಕಾಗಿ, [1][ಐದು ವರ್ಷಗಳ ಕಾರಾವಾಸಕ್ಕೆ ಮತ್ತು ಐವತ್ತು ಸಾವಿರ ರೂಪಾಯಿಗಳ][1] ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ:][2]

1. 2005ರ ಅಧಿನಿಯಮ14ರ ಮೂಲಕ 11.4.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1970ರ ಅಧಿನಿಯಮ 1ರ ಮೂಲಕ 23.12.1969ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**38. ಔಷಧಿ ವಸ್ತು ಅಂಗಡಿ ಇತ್ಯಾದಿಗಳಲ್ಲಿ ಸೇವನೆಗಾಗಿ ದಂಡ.-** (1) ಔಷದಿ ವಸ್ತು ವ್ಯಾಪಾರಿಯು, ಔಷಧಿ ಅಂಗಡಿಯವನು, ಔಷಧಿ ಸಮ್ಮಿಶ್ರಕನು, ಅಥವಾ ಔಷಧಾಲಯವನ್ನಿಟ್ಟುಕೊಂಡಿರುವವನು, ವಿಶ್ವಾಸನೀಯವಾಗಿ ಔಷಧೋದ್ದೇಶಕ್ಕಾಗಿ ಔಷಧೀಯವಾಗಿಸಿರದ ಯಾವುದೇ ಮಾದಕವನ್ನು ಯಾವೊಬ್ಬ ವ್ಯಕ್ತಿಯು ತನ್ನ ವ್ಯವಹಾರ ಆವರಣದಲ್ಲಿ ಸೇವಿಸಲು ಅವಕಾಶ ಕೊಟ್ಟರೆ, ಅವನು, ಅಪರಾಧ ಸಿದ್ಧಪಟ್ಟ ಮೇಲೆ, ಮೂರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(2) ಅಂಥ ಆವರಣದಲ್ಲಿ ಯಾವುದೇ ಮಾದಕವನ್ನು ಸೇವಿಸುವ ಮೇಲೆ ಹೇಳಿದಂತೆ ನೌಕರಿಯಲ್ಲಿರದ ಯಾವನೇ ವ್ಯಕ್ತಿಯು, ಅಪರಾಧ ಸಿದ್ಧಪಟ್ಟ ಮೇಲೆ, ಎರಡು ನೂರು ರೂಪಾಯಿಯವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

[1][**38.ಎ ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡುವ ಉದ್ದೇಶಕ್ಕೆ ಆವರಣ ಇತ್ಯಾದಿಗಳಲ್ಲಿ ಉಪಯೋಗಿಸಲು ಅವಕಾಶ ಕೊಡುವುದಕ್ಕೆ ದಂಡ.–** ಯಾವುದೇ ಸ್ಥಳದ, ಕೊಠಡಿಯ, ಆವರಣದ, ಜಾಗದ, ನೌಕೆಯ, ವಾಹನದ ಅಥವಾ ಸ್ಥಳದ ಒಡೆಯನಾಗಿರುವ, ಅಥವಾ ಅಧಿಭೋಗದಾರನಾಗಿರುವ ಅಥವಾ ಅದರ ಉಪಯೋಗ ಅಥವಾ ರಕ್ಷಣೆ ಅಥವಾ ವ್ಯವಸ್ಥೆ ಅಥವಾ ನಿಯಂತ್ರಣ ಹೊಂದಿರುವ ಯಾವೊಬ್ಬನು ತಿಳಿದೂ ಅದನ್ನು 32, 33, 34, 36, ಮತ್ತು 37ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧ ಮಾಡಲು ಉಪಯೋಗಿಸಿಕೊಳ್ಳಲು ಅವಕಾಶ ಕೊಟ್ಟರೆ, ಅವನು, ಅಪರಾಧ ಸಿದ್ಧವಾಗಿ ಆಯಾ ಪ್ರಕರಣಗಳ ಮೇರೆಗೆ ಅಪರಾಧ ಮಾಡಿರುವನೆಂಬಂತೆಯೇ ದಂಡಿತನಾಗತಕ್ಕದ್ದು.][1]

1. 1970ರ ಅಧಿನಿಯಮ1ರ ಮೂಲಕ 23–12–1969 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**39. ಒಬ್ಬನ ಪರವಾಗಿ ಮತ್ತೊಬ್ಬನು ತಯಾರಿಸುವುದು, ಮಾರಾಟ ಮಾಡುವುದು ಅಥವಾ ಸ್ವಾಧೀನ ಹೊಂದಿರುವುದು.–** (1) ಒಬ್ಬನು ಮತ್ತೊಬ್ಬನ ಪರವಾಗಿ ಯಾವುದೇ ಮಾದಕವನ್ನು ತಯಾರಿಸಿದ್ದರೆ, ಅಥವಾ ಮಾರಾಟ ಮಾಡಿದ್ದರೆ ಅಥವಾ ಸ್ವಾಧೀನ ಹೊಂದಿದ್ದರೆ, ಮತ್ತು ಅಂಥ ತಯಾರಿಕೆಯು ಅಥವಾ ಮಾರಾಟದ ಅಥವಾ ಸ್ವಾಧೀನದಲ್ಲಿರಿಸುವಿಕೆಗಳು ತನ್ನ ಪರವಾಗಿ ನಡೆಯಿತು ಎಂದು ಅಂಥ ಬೇರೊಬ್ಬ ವ್ಯಕ್ತಿಗೆ ತಿಳಿದಿದ್ದರೆ ಅಥವಾ ನಂಬಲು ಕಾರಣವಿದ್ದರೆ, ಆ ವಸ್ತುವು, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ಬೇರೊಬ್ಬ ವ್ಯಕ್ತಿಯಿಂದ ತಯಾರಿಸಲಾಯಿತು, ಮಾರಾಟ ಮಾಡಲಾಯಿತು ಅಥವಾ ಅವನ ಸ್ವಾಧೀನದಲ್ಲಿಟ್ಟುಕೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿರುವುದು ಯಾವುದೂ, ಮತ್ತೊಬ್ಬನ ಪರವಾಗಿ ಯಾವುದೇ ಮಾದಕವನ್ನು ತಯಾರಿಸುವ, ಮಾರಾಟ ಮಾಡುವ ಅಥವಾ ಸ್ವಾಧೀನದಲ್ಲಿಟ್ಟುಕೊಳ್ಳುವ ವ್ಯಕ್ತಿಯನ್ನು, ಅಂಥ ವಸ್ತುವಿನ ಕಾನೂನು ವಿರುದ್ಧವಾದ ತಯಾರಿಕೆ, ಮಾರಾಟ ಅಥವಾ ಸ್ವಾಧೀನದ ಬಗ್ಗೆ ಈ ಅಧಿನಿಯಮದ ಅಡಿಯಲ್ಲಿ ಯಾವುದೇ ದಂಡನೆಯ ಹೊಣೆಯಿಂದ ಮುಕ್ತಗೊಳಿಸತಕ್ಕದ್ದಲ್ಲ.

**40. ಕೆಲವು ಸಂದರ್ಭಗಳಲ್ಲಿ ಅಪರಾಧ ನಡೆದಿದೆಯೆಂಬ ಬಗ್ಗೆ ಪೂರ್ವ ಭಾವನೆ:–** 32 ಮತ್ತು 34ನೇ ಪ್ರಕರಣಗಳ ಅಡಿಯಲ್ಲಿನ ಅಭಿಯೋಜನೆಗಳಲ್ಲಿ, ತದ್ವಿರುದ್ಧ ರುಜುವಾತಾದ ಹೊರತು, ಆಪಾದಿತನು–

(ಎ) ಯಾವುದೇ ಮಾದಕ; ಅಥವಾ

(ಬಿ) ಹೆಂಡವಲ್ಲದ ಯಾವುದೇ ಇತರ ತಯಾರಿಕೆಯಲ್ಲಿಯ ಯಾವುದೇ ಭಟ್ಟಿ ಯಂತ್ರ, ಪಾತ್ರೆ, ಉಪಕರಣ ಅಥವಾ ಯಾವುದೇ ಬಗೆಯ ಸಲಕರಣೆ ಬಗ್ಗೆ ; ಅಥವಾ

(ಸಿ) ಮಾದಕದ ತಯಾರಿಕೆಯ ಕ್ರಮಗಳಿಗೆ ಒಳಪಟ್ಟಿರುವ ಅಥವಾ ಅವುಗಳಿಂದ ಮಾದಕವನ್ನು ತಯಾರಿಸಿರುವ ಯಾವುದೇ ಪದಾರ್ಥಗಳು

ಇವುಗಳ ಸ್ವಾಧೀನ ಹೊಂದಿರುವ ಬಗ್ಗೆ ಅವನು ಸಮಾಧಾನಕರ ಕಾರಣಕೊಡಲು ಅಸಮರ್ಥನಾಗಿರುವುದರಿಂದ ಆ ಪ್ರಕರಣದ ಅಡಿಯಲ್ಲಿ ಅಪರಾಧ ಮಾಡಿದ್ದಾನೆಂದು ಪೂರ್ವ ಭಾವನೆ ಮಾಡತಕ್ಕದ್ದು.

**41. ನೌಕರರ ಕೃತ್ಯಗಳಿಗಾಗಿ ಲೈಸೆನ್ಸುದಾರನ ಕ್ರಿಮಿನಲ್ ಹೊಣೆಗಾರಿಕೆ.–** ಈ ಅಧಿನಿಯಮದ ಮೇರೆಗೆ ಕೊಡಲಾದ, ಲೈಸೆನ್ಸು ಅಥವಾ ಅನುಮತಿ ಪತ್ರವನ್ನು ಪಡೆದವನ ನೌಕರಿಯಲ್ಲಿರುವವನಿಂದ ಲೈಸೆನ್ಸು ಅಥವಾ ಅನುಮತಿ ಪತ್ರ ಪಡೆದವನ ಪರವಾಗಿ ಕೆಲಸ ಮಾಡುವನಿಂದ 32ನೇ ಪ್ರಕರಣ, 33ನೇ ಪ್ರಕರಣ, 34ನೇ ಪ್ರಕರಣ, 36ನೇ ಪ್ರಕರಣ ಅಥವಾ 37ನೇ ಪ್ರಕರಣಗಳ ಅಡಿಯಲ್ಲಿ ಯಾವುದಾದರೂ ಅಪರಾಧವು ನಡೆದಿರುವಲ್ಲಿ ಹಾಗೆ ನಡೆದಿರುವಷ್ಟು, ಅಂಥ ಅಪರಾಧವು ನಡೆಯುವುದನ್ನು ತಡೆಯಲು ಎಲ್ಲ ಯೋಗ್ಯ ಮತ್ತು ಯುಕ್ತ ಮುಂಜಾಗ್ರತೆಯನ್ನು ವಹಿಸಲಾಯಿತೆಂಬುದನ್ನು ರುಜುವಾತು ಮಾಡಿದ ಹೊರತು, ಅವನೇ ಅಂಥ ಅಪರಾಧ ಮಾಡಿದನೆಂಬಂತೆ, ದಂಡನೀಯನಾಗತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗೆ ವಾಸ್ತವಿಕ ಅಪರಾಧಿಯಲ್ಲದ ಇತರ ಯಾವ ವ್ಯಕ್ತಿಯೂ ಜುಲ್ಮಾನೆ ಕೊಡಲು ತಪ್ಪಿದಾಗಲ್ಲದೆ, ಕಾರಾವಾಸದ ಶಿಕ್ಷೆಯಿಂದ ದಂಡನೀಯವಾಗತಕ್ಕದ್ದಲ್ಲ.

**42. ಹಿಂದೆ ಸಿದ್ಧಾಪರಾಧಿಯಾಗಿದ್ದರೆ ಹೆಚ್ಚಿನ ದಂಡನೆ.–** ಯಾವೊಬ್ಬ ವ್ಯಕ್ತಿಯು 38ನೇ ಪ್ರಕರಣದ ಮೇರೆಗೆ [1][XXX][1] ಅಥವಾ ಈ ಅಧಿನಿಯಮದಿಂದ ನಿರಸಿತವಾದ ಯಾವುದೇ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಹಿಂದೆ ಸಿದ್ಧಾಪರಾಧಿಯಾಗಿದ್ದು [2][ಸದರಿ ಪ್ರಕರಣದ][2] ಮೇರೆಗೆ ದಂಡನೀಯವಾದ ಅಪರಾಧವನ್ನು ತರುವಾಯದಲ್ಲಿ ಮಾಡಿ ಸಿದ್ಧಾಪರಾಧಿಯಾದರೆ, ಅವನು ಈ ಅಧಿನಿಯಮದ ಮೇರೆಗೆ ಮೊದಲನೆಯ ಸಲ ಸಿದ್ಧಾಪರಾಧಿಯಾದಾಗ ವಿಧಿಸಬಹುದಾಗಿದ್ದ ದಂಡನೆಯ ಎರಡರಷ್ಟು ದಂಡನೆಗೆ ಗುರಿಯಾಗತಕ್ಕದ್ದು;

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, [3][1973ರ ದಂಡ ಪ್ರಕ್ರಿಯಾ ಸಂಹಿತೆಯ XXIನೇ ಅಧ್ಯಾಯದ][3] ಮೇರೆಗೆ ಸಂಕ್ಷಿಪ್ತ ರೀತಿಯಲ್ಲಿ ಅನ್ಯಥಾ ವಿಚಾರಿಸಬಹುದಾಗಿದ್ದ ಯಾವುದೇ ಅಪರಾಧದ ಅಂಥ ವಿಚಾರಣೆಯನ್ನು ಪ್ರತಿಬಂಧಿಸತಕ್ಕದ್ದಲ್ಲ.

1. 1970ರ ಅಧಿನಿಯಮ 1ರ ಮೂಲಕ 23-12-1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

2. 1970ರ ಅಧಿನಿಯಮ 1ರ ಮೂಲಕ 23-12-1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿಲಾಗಿದೆ.

3. 1982ರ ಅಧಿನಿಯಮ 32ರ ಮೂಲಕ 04-09-1982 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**42ಎ. ಕೆಲವು ಅಪರಾಧಗಳನ್ನು ಮಾಡಿರುವ ಬಗ್ಗೆ ಜಾಮೀನು.–** (1) ಯಾವೊಬ್ಬ ವ್ಯಕ್ತಿಯು 32ನೇ ಪ್ರಕರಣ, 33ನೇ ಪ್ರಕರಣ, 34ನೇ ಪ್ರಕರಣ, 36ನೇ ಪ್ರಕರಣ ಅಥವಾ 37ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧದ ಬಗ್ಗೆ ಸಿದ್ಧಾಪರಾಧಿಯಾಗಿದ್ದರೆ, ಮತ್ತು ಅವನನ್ನು ಸಿದ್ಧಾಪರಾಧಿಯೆಂದು ತೀರ್ಮಾನಿಸುವ ನ್ಯಾಯಾಲಯವು ಅಂಥ ಅಪರಾಧ ಮಾಡದಿರುವ ಬಗ್ಗೆ ಆ ವ್ಯಕ್ತಿಯ ಒಂದು ಮುಚ್ಚಳಿಕೆಯನ್ನು ಬರೆದುಕೊಡುವಂತೆ ಅಗತ್ಯಪಡಿಸುವುದು ಅವಶ್ಯವೆಂದು ಅಭಿಪ್ರಾಯಪಟ್ಟಲ್ಲಿ, ಆ ನ್ಯಾಯಾಲಯವು ಆ ವ್ಯಕ್ತಿಗೆ ದಂಡಾದೇಶವನ್ನು ವಿಧಿಸುವಾಗ, ತಾನು ನಿಗದಿ ಮಾಡುವುದು ಯೋಗ್ಯವೆಂದು ತಿಳಿಯುವಂಥ, ಮೂರು ವರ್ಷಗಳಿಗೆ ಹೆಚ್ಚಾಗದ ಅವಧಿಯಲ್ಲಿ, ಅವನು ಅಂಥ ಅಪರಾಧಗಳನ್ನು ಮಾಡುವುದಿಲ್ಲವೆಂದು ಅವನ ಆದಾಯಕ್ಕೆ ಅನುಗುಣವಾಗುವ ಮೊಬಲಗಿಗೆ ಜಾಮೀನು ಸಹಿತವಾಗಿ ಅಥವಾ ರಹಿತವಾಗಿ, ನಿಯಮಿಸಿದ ನಮೂನೆಯಲ್ಲಿ ಒಂದು ಮುಚ್ಚಳಿಕೆಯನ್ನು ಬರೆದುಕೊಡಲು ಆದೇಶಿಸಬಹುದು.

1. 1971ರ ಅಧಿನಿಯಮ 1ರ ಮೂಲಕ 7-08-1970 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) [1][ದಂಡ ಪ್ರಕ್ರಿಯಾ ಸಂಹಿತೆಯ, 1973ರ][1] ಉಪಬಂಧಗಳು, ಅವು ಅನ್ವಯಿಸುವ ಮಟ್ಟಿಗೆ ಸದರಿ ಸಂಹಿತೆಯ 106ನೇ ಪ್ರಕರಣದ ಮೇರೆಗೆ ಬರೆದುಕೊಂಡು ಆದೇಶಿಸಿದ ಶಾಂತಿ ಪಾಲನೆಯ ಮುಚ್ಚಳಿಕೆಯೆಂಬಂತೆ ಈ ಮುಚ್ಚಳಿಕೆಗೆ ಸಂಬಂಧಿಸಿದ ಎಲ್ಲ ವಿಷಯಗಳಿಗೆ, ಅನ್ವಯಿಸತಕ್ಕದ್ದು.

1. 1982ರ ಅಧಿನಿಯಮ 32ರ ಮೂಲಕ 04-09-1982 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಅಪೀಲಿನಲ್ಲಿ ಅಥವಾ ಅನ್ಯಥಾ ಅಪರಾಧ ಸಿದ್ಧಿಯು ತಳ್ಳಿಹಾಕಲ್ಪಟ್ಟರೆ, ಹಾಗೆ ಬರೆದುಕೊಟ್ಟ ಮುಚ್ಚಳಿಕೆಯು ಶೂನ್ಯವಾಗತಕ್ಕದ್ದು.

(4) ಈ ಅಪೀಲು ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು ಕೂಡ ಅಪೀಲು ಅಥವಾ ಪುನರೀಕ್ಷಣೆಯ ಶಕ್ತಿಗಳನ್ನು ಚಲಾಯಿಸುವಾಗ ಈ ಪ್ರಕರಣದ ಮೇರೆಗಿನ ಆದೇಶವನ್ನು ಮಾಡಬಹುದು.

**43. ಕೆಲವು ವಸ್ತುಗಳು ಮುಟ್ಟುಗೋಲಿಗೆ ಗುರಿಯಾಗಿರುವುದು.–** ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧ ಮಾಡಿರುವಾಗ, ಈ ಕೆಳಕಂಡ ವಸ್ತುಗಳು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು, ಎಂದರೆ.–

(1) ಯಾವುದರ ಸಂಬಂಧದಲ್ಲಿ ಅಥವಾ ಮೂಲಕ ಅಂಥ ಅಪರಾಧ ಮಾಡಲಾಯಿತೋ ಅಂಥ ಯಾವುದೇ ಮಾದಕ, ಪದಾರ್ಥ, ಬಟ್ಟಿಯಂತ್ರ, ಪಾತ್ರೆ, ಉಪಕರಣ ಅಥವಾ ಸಲಕರಣೆ;

(2) (1)ನೆಯ ಖಂಡದ ಮೇರೆಗೆ ಜಪ್ತಿಗೆ ಗುರಿಯಾಗುವ ಯಾವುದೇ ಮಾದಕದೊಂದಿಗೆ ಅಥವಾ ಅದರ ಜೊತೆಗೆ ವಿಧಿಬದ್ಧವಾಗಿ ಆಮದು ಮಾಡಿದ, ಸಾಗಿಸಿದ, ತಯಾರಿಸಿದ, ಸ್ವಾಧೀನದಲ್ಲಿಟ್ಟುಕೊಂಡ ಅಥವಾ ಮಾರಾಟ ಮಾಡಿದ, ಯಾವುದೇ ಮಾದಕ; ಮತ್ತು

(3) (1)ನೇ ಖಂಡದ ಅಥವಾ (2)ನೇ ಖಂಡದ ಮೇರೆಗೆ ಮುಟ್ಟುಗೋಲಿಗೆ ಗುರಿಯಾಗುವ ಯಾವುದೇ ಪದಾರ್ಥವು, ಯಾವುದೇ ಪಾತ್ರೆ, ಪಿಂಡಿ ಅಥವಾ ಹೊದಿಕೆಯು ದೊರೆತರೆ, ಅವುಗಳನ್ನು ಮತ್ತು ಅಂಥ ಪಾತ್ರೆ, ಪಿಂಡಿ ಅಥವಾ ಹೊದಿಕೆಯಲ್ಲಿ ಇರುವ ಇತರ ವಸ್ತುಗಳು, ಯಾವುದಾದರೂ ಇದ್ದರೆ, ಅವುಗಳು ಮತ್ತು ಅವುಗಳನ್ನು ಸಾಗಿಸಲು ಉಪಯೋಗಿಸಿದ [1][ರಾಜ್ಯ ರಸ್ತೆ ಸಾರಿಗೆ ಉದ್ಯಮ ಅಥವಾ ನಿಗಮಾವು ಒಡೆತನ ಹೊಂದಿರುವ ವಾಹನಗಳನ್ನು ಹೊರತುಪಡಿಸಿ][1] ಯಾವುದೇ ಪ್ರಾಣಿ, ವಾಹನ, ನೌಕೆ, ದೋಣಿ ಅಥವಾ ಇತರ ವಾಹನ:

[2][ಪರಂತು, xxx][2]

1. 2007ರ ಅಧಿನಿಯಮ 27ರ ಮೂಲಕ 29.08.2007 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1987ರ ಅಧಿನಿಯಮ 36ರ ಮೂಲಕ 10.08.1987 ರಿಂದ ಜಾರಿಗೆ ರುವಂತೆ ಬಿಟ್ಟುಬಿಡಲಾಗಿದೆ.

[1][**43ಎ. ಕೆಲವು ಪ್ರಕರಣಗಳಲ್ಲಿ ಅಬ್ಕಾರಿ ಅಧಿಕಾರಿಗಳ ಮೂಲಕ ಮುಟ್ಟುಗೋಲು ಹಾಕಿಕೊಳ್ಳುವುದು.–** ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, 43ನೇ ಪ್ರಕರಣದ ಅಡಿಯಲ್ಲಿ ಮುಟ್ಟುಗೋಲಿಗೆ ಹೊಣೆಯಾದ ಯಾವುದನ್ನಾದರೂ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ

ಸ್ವಾಧೀನ ಪಡಿಸಿಕೊಂಡಿದ್ದಲ್ಲಿ ಅಥವಾ ತಡೆಹಿಡಿದಿದ್ದಲ್ಲಿ, ಅಂಥ ಸ್ವತ್ತನ್ನು ಸ್ವಾಧೀನ ಪಡಿಸಿಕೊಂಡಿರುವ ಅಥವಾ ತಡೆಹಿಡಿಟ್ಟಿರುವ ಅಧಿಕಾರಿಯು, ಯಾವುದೇ ಯುಕ್ತ ವಿಳಂಬವಿಲ್ಲದೆ, ಅಧಿಸೂಚನೆಯ ಮೂಲಕ ಈ ಬಗ್ಗೆ ಸರ್ಕಾರವು ಅಧಿಕೃತಗೊಳಿಸಿದ ಅಬ್ಕಾರಿ ಸೂಪರಿಂಟೆಂಡೆಂಟ್ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯ (ಇಲ್ಲಿ ಇನ್ನು ಮುಂದೆ ಅಧಿಕೃತ ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ) ಮುಂದೆ ಅದನ್ನು ಹಾಜರುಪಡಿಸತಕ್ಕದ್ದು

1.43ಎ ಪ್ರಕರಣದಿಂದ 43 ಜಿ ಪ್ರಕರಣಗಳವರೆಗೆ 1987ರ ಅಧಿನಿಯಮ 36ರ ಮೂಲಕ 10-08-1987 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) (1) ನೇ ಉಪ ಪ್ರಕರಣದ ಅಡಿಯಲ್ಲಿ ಹಾಗೆ ಸ್ವಾಧೀನ ಪಡಿಸಿಕೊಂಡ ಸ್ವತ್ತನ್ನು ಹಾಜರು ಪಡಿಸಿದಾಗ, ಅಧಿಕೃತ ಅಧಿಕಾರಿಯು, ಈ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ಎಸಗಿದೆ ಎಂದು ಮನಗಂಡಲ್ಲಿ, ಅಂಥ ಅಪರಾಧವನ್ನು ಎಸಗಿರುವುದಕ್ಕೆ ಪ್ರಾಸಿಕ್ಯೂಷನ್ ಅನ್ನು ಹೂಡಲಾಗಿದ್ದರೂ ಅಥವಾ ಇಲ್ಲದಿದ್ದರೂ ಅಂಥ ಸ್ವತ್ತಿನ ಮುಟ್ಟುಗೋಲಿಗೆ ಆದೇಶಿಸಬಹುದು:

[1][ಪರಂತು, (1)ನೇ ಉಪಪ್ರಕರಣದ ಅಡಿಯಲ್ಲಿ ಸ್ವಾಧೀನ ಪಡಿಸಿಕೊಂಡ ಸ್ವತ್ತಿನ ಸಂಬಂಧದಲ್ಲಿ ಮತ್ತು ಈ ಪ್ರಕರಣ ಮತ್ತು 43ಬಿ ಯಿಂದ 43ಜಿ ವರೆಗಿನ ಪ್ರಕರಣಗಳ ಮೇರೆಗೆ ಹಾಜರುಪಡಿಸುವುದಕ್ಕೆ ಒಳಪಟ್ಟು, ವ್ಯವಹಾರಗಳ ಅಂತಿಮ ವಿಲೆಯನ್ನು ಬಾಕಿಯಿಟ್ಟು, ಅಧಿಕೃತ ಅಧಿಕಾರಿಯು, ಅಧಿಕೃತ ಅಧಿಕಾರಿಯು ಅಂದಾಜು ಮಾಡಿದ ಮೌಲ್ಯಕ್ಕೆ ಸಮನಾಗಿ ಅನುಸೂಚಿತ ಬ್ಯಾಂಕಿನಿಂದ ನೀಡಲಾದ ಬ್ಯಾಂಕ್ ಗ್ಯಾರಂಟಿ (ಅಂಥ ವ್ಯವಹರಣೆಯ ಅಂತಿಮ ವಿಲೆಯವರೆಗೆ ಕಾಲಕಾಲಕ್ಕೆ ಆತನು, ನವೀಕರಣಗೊಳಿಸತಕ್ಕದ್ದು) ಮತ್ತು ಅಂಥ ಸ್ವತ್ತನ ಬಾಂಡ್ ಅನ್ನು ಅದರ ಮಾಲೀಕರ ಪರವಾಗಿ ಕಾರ್ಯಗತಗೊಳಿಸುವಾಗ ಅಥವಾ ಸಂದರ್ಭಾನುಸಾರವಾಗಿ ಹಾಗೆ ಬಿಡುಗಡೆಗೊಳಿಸಲಾದ ಅಬ್ಕಾರಿಯ ವಸ್ತುಗಳನ್ನು, ಅಗತ್ಯಪಡಿಸಿದಾಗೆಲ್ಲಾ ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸುವುದಕ್ಕೆ

(i) ಅಬಕಾರಿಯ ವಸ್ತುಗಳನ್ನು ಹೊರತುಪಡಿಸಿ ಸ್ವಾಧೀನ ಪಡಿಸಿಕೊಂಡ ಸ್ವತ್ತನ್ನು ಅಂಥ ಸ್ವತ್ತಿನ ಮಾಲೀಕರಿಗೆ ಬಿಡುಗಡೆಗೊಳಿಸಬಹುದು;

(ii) ಈ ಅಧಿನಿಯಮ ಅಥವಾ ಅದರಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಲೈಸೆನ್ಸನ್ನು ಹೊಂದಿದ್ದಲ್ಲಿ, ಸ್ವಾಧೀನ ಪಡಿಸಿಕೊಂಡ ಅಬಕಾರಿಯ ವಸ್ತುಗಳನ್ನು ಅವುಗಳ ಮಾಲೀಕನಿಗೆ ಬಿಡುಗಡೆಗೊಳಿಸಬಹುದು;][1]

1. 2003ರ ಅಧಿನಿಯಮ 38ರ ಮೂಲಕ 03.09.2003ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) (2)ನೇ ಉಪಪ್ರಕಣದ ಅಡಿಯಲ್ಲಿ ಮುಟ್ಟುಗೋಲು ಆದೇಶವನ್ನು ಮಾಡಿದಾಗ, ಅಧಿಕೃತ ಅಧಿಕಾರಿಯು, ಸಂರಕ್ಷಿಸಲು ಸಾಧ್ಯವಿಲ್ಲವೆಂದು ಅಥವಾ ಮಾನವನ ಉಪಯೋಗಕ್ಕೆ ಯೋಗ್ಯವಲ್ಲವೆಂದು, ಆತನು ಅಭಿಪ್ರಾಯಪಟ್ಟಲ್ಲಿ ಮುಟ್ಟುಗೋಲಿಗೆ ಸಂಬಂಧಿಸಿದ ಆದೇಶವಿರುವ ಅಂಥ ಸ್ವತ್ತನ್ನು ಆದೇಶ ಮಾಡಬಹುದು.

(4) (2)ನೇ ಉಪಪ್ರಕಣದ ಅಡಿಯಲ್ಲಿ ಮುಟ್ಟುಗೋಲು ಆದೇಶವನ್ನು ಹೊರಡಿಸಿದ ತರುವಾಯ, ಅಧಿಕೃತ ಅಧಿಕಾರಿಯು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡುವುದು ಯುಕ್ತವೆಂದು ಅಭಿಪ್ರಾಯಪಟ್ಟಲ್ಲಿ, ಆತನು, ಮುಟ್ಟುಗೋಲಾದ ಸ್ವತ್ತು ಅಥವಾ ಅದರ ಯಾವುದೇ ಭಾಗವನ್ನು ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಬಹುದೆಂದು ಆದೇಶಿಸಬಹುದು.

(5) ಮೇಲೆ ಹೇಳಿದಂತೆ ಯಾವುದೇ ಮುಟ್ಟುಗೋಲಾದ ಸ್ವತ್ತನ್ನು ಮಾರಾಟ ಮಾಡಿದಲ್ಲಿ, ಅದರ ಉತ್ಪನ್ನಗಳನ್ನು ಯಾವುದೇ ಅಂಥ ಹರಾಜಿನ ವೆಚ್ಚಗಳನ್ನು ಅಥವಾ ಅದಕ್ಕೆ ಸಂಬಂಧಿಸಿದ ಪ್ರಾಸಂಗಿಕ ವೆಚ್ಚಗಳನ್ನು ಕಳೆದ ನಂತರ, 43ಡಿ ಅಥವಾ 43ಇ ಪ್ರಕರಣದ ಅಡಿಯಲ್ಲಿ ಆದೇಶವನ್ನು ತಳ್ಳಿಹಾಕಿ ಅಥವಾ ರದ್ದುಪಡಿಸಿ ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಮುಟ್ಟುಗೋಲು ಆದೇಶದಲ್ಲಿ, ಅಂಥ ಆದೇಶದಲ್ಲಿ ನಿರ್ದಿಷ್ಟ ಪಡಿಸಬಹುದಾದಂತೆ ಅದರ ಮಾಲೀಕರಿಗೆ ಅಥವಾ ಯಾವ ವ್ಯಕ್ತಿಯಿಂದ ಅದನ್ನು ಮುಟ್ಟುಗೋಲು ಹಾಕಿಕೊಂಡಿದೆಯೇ ಆ ವ್ಯಕ್ತಿಗೆ ಪಾವತಿಸತಕ್ಕದ್ದು.

**43ಬಿ. 43ಎ ಪ್ರಕರಣದ ಅಡಿಯಲ್ಲಿ ಮುಟ್ಟುಗೋಲಿಗೆ ಮೊದಲು ಕಾರಣ ಕೇಳುವ ನೋಟಿಸನ್ನು ಹೊರಡಿಸುವುದು.–** (1) ಸ್ವತ್ತನ್ನು ಮೊಟ್ಟುಗೊಲನ್ನು ಮಾಡಿಕೊಂಡ ವ್ಯಕ್ತಿಗೆ ಈ ಕೆಳಗಿನಂತೆ ಅವುಗಳನ್ನು ನೀಡದ ಹೊರತಾಗಿ, 43ಎ ಪ್ರಕರಣದ ಅಡಿಯಲ್ಲಿ ಯಾವುದೇ ಸ್ವತ್ತಿನ ಮುಟ್ಟುಗೋಲು ಆದೇಶವನ್ನು ಮಾಡತಕ್ಕದ್ದಲ್ಲ, ಎಂದರೆ:–

(ಎ) ಅಂಥ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳಲು ಪ್ರಸ್ತಾವಿಸಲಾದ ಆಧಾರಗಳನ್ನು ಆತನಿಗೆ ಲಿಖಿತ ನೋಟೀಸನ್ನು ನೀಡುವ ಮೂಲಕ ತಿಳಿಸುವುದು;

(ಬಿ) ಮುಟ್ಟಗೋಲಿನ ಆಧಾರಗಳ ಮೇಲಿನ ನೋಟಿಸಿನಲ್ಲಿ ನಿರ್ದಿಷ್ಟ ಪಡಿಸಬಹುದಾದ ಅಂಥ ಯುಕ್ತ ಅವಧಿಯೊಳಗೆ ಲಿಖಿತದಲ್ಲಿ ಮನವಿಯನ್ನು ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ನೀಡುವುದು;

(ಸಿ) ವಿಷಯದಲ್ಲಿ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡುವುದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಮಾಲೀಕನು ತಾನಾಗಿಯೇ, ಆತನ ಏಜೆಂಟ್, ಯಾರಾದರೂ ಇದ್ದಲ್ಲಿ ಮತ್ತು ಪ್ರಾಣಿ, ಗಾಡಿ, ಪಾತ್ರೆ (vessel) ಅಥವಾ ಇತರ ಸಾಗಣೆಯನ್ನು ಹೊಂದಿರುವ ವ್ಯಕ್ತಿಗೆ ತಿಳಿಯದೇ ಅಥವಾ ಆತನ ಸಹಕಾರವಿಲ್ಲದೇ, ಮದ್ಯ ಅಥವಾ ಮಾದಕಗಳು ಅಥವಾ ಸಾಮಗ್ರಿ, ಬಡ್ಡಿಯಂತ್ರ, ಪಾತ್ರೆ, ಸಲಕರಣೆಗಳು ಅಥವಾ ಉಪಕರಣಗಳು ಅಥವಾ ತೊಟ್ಟಿ, ಪ್ಯಾಕೇಜ್ ಅಥವಾ ಹೊದಿಕೆಗಳನ್ನು ಒಯ್ಯುತ್ತಿರುವಲ್ಲಿ ಬಳಸಲಾಗುತ್ತಿದೆ ಎಂದು ಅಧಿಕೃತ ಅಧಿಕಾರಿಯು ಮನದಟ್ಟು ಮಾಡಿಕೊಡುವಂತೆ, ಪ್ರಾಣಿ, ಗಾಡಿ, ಪಾತ್ರೆ ಅಥವಾ ಇತರ ಸಾಗಣೆಯ ಮಾಲೀಕನು ರುಜುವಾತು ಪಡಿಸಿದಲ್ಲಿ, 43ಎ ಪ್ರಕರಣದ ಅಡಿಯಲ್ಲಿ ಯಾವುದೇ ಪ್ರಾಣಿ, ಗಾಡಿ, ಪಾತ್ರೆ ಅಥವಾ ಇತರ ಸಾಗಣೆಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಆದೇಶವನ್ನು ಮಾಡತಕ್ಕದ್ದಲ್ಲ.

**43ಸಿ. ಅಪರಾಧಿಯು ಯಾರೆಂದು ಗೊತ್ತಿಲ್ಲದಿರುವಾಗ ಅಥವಾ ಆತನನ್ನು ಕಂಡುಹಿಡಿಯಲು ಸಾಧ್ಯವಿಲ್ಲದಿರುವಾಗ ಮುಟ್ಟುಗೋಲಿನ ಆದೇಶ.–** ಈ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧವನ್ನು ಎಸಗಿದಾಗ, ಆದರೆ ಅಪರಾಧಿಯು ಯಾರೆಂದು ಗೊತ್ತಿಲ್ಲದಿರುವಾಗ ಅಥವಾ ಆತನನ್ನು ಕಂಡುಹಿಡಿಯಲು ಸಾಧ್ಯವಿಲ್ಲದಿರುವಾಗ, ಈ ಅಧಿನಿಯಮದ ಅಡಿಯಲ್ಲಿ ಮುಟ್ಟುಗೋಲಿಗೆ ಹೊಣೆಯಾದ ಯಾವುದಾದರೂ ಇದ್ದಾಗ, ಮತ್ತು ಯಾವುದೇ ವ್ಯಕ್ತಿಯ ಸ್ವಾಧೀನದಲ್ಲಿರುವುದನ್ನು ತೃಪ್ತಿಕರವಾಗಿ ಗಣನೆಗೆ ತೆಗೆದುಕೊಳ್ಳಲು ಆಗದಿರುವಾಗ, ಅಧಿಕೃತ ಅಧಿಕಾರಿಯು ಅಂಥ ಮುಟ್ಟುಗೋಲು ಆದೇಶವನ್ನು ಮಾಡಬಹುದು:

ಪರಂತು, ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಉದ್ದೇಶಿಸಲಾಗಿರುವ ಸರಕುಗಳನ್ನು ಸ್ವಾಧೀನ ಪಡಿಸಿಕೊಂಡ ದಿನಾಂಕದಿಂದ ಒಂದು ತಿಂಗಳು ಮುಕ್ತಾಯವಾಗುವವರೆಗೆ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಹಕ್ಕನ್ನು ಕ್ಲೇಮು ಮಾಡುತ್ತಿರುವ, ಯಾರಾದರೂ ವ್ಯಕ್ತಿಗಳು ಇದ್ದಲ್ಲಿ, ಮತ್ತು ಅವರ ಕ್ಲೇಮುಗಳಿಗೆ ಬೆಂಬಲವಾಗಿ ಅವರು ಒದಗಿಸುವ ಸಾಕ್ಷ್ಯವು ಯಾವುದಾದರೂ ಇದ್ದಲ್ಲಿ, ಅಂಥ ವ್ಯಕ್ತಿಗಳ ಅಹವಾಲನ್ನು ಆಲಿಸದೇ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

**43ಡಿ. ಪುನರೀಕ್ಷಣೆ.–** ರಾಜ್ಯ ಸರ್ಕಾರವು ಈ ಬಗ್ಗೆ ವಿಶೇಷವಾಗಿ ಅಧಿಕಾರವನ್ನು ನೀಡಿದ ಅಬಕಾರಿ ಆಯುಕ್ತರಿಗೆ ಕಡಿಮೆಯಲ್ಲದ ದರ್ಜೆಯ ಯಾವೊಬ್ಬ ಅಬಕಾರಿ ಅಧಿಕಾರಿಯು, 43ಎ ಮತ್ತು 43ಸಿ ಪ್ರಕರಣದ ಅಡಿಯಲ್ಲಿ ಅಧಿಕೃತ ಅಧಿಕಾರಿಯ ಆದೇಶದ ದಿನಾಂಕದಿಂದ ಮೂವತ್ತು ದಿನಗಳು ಮುಕ್ತಾಯವಾಗುವುದಕ್ಕೆ ಮೊದಲು, ಆ ಆದೇಶದ ದಾಖಲೆಗಳನ್ನು ತಾನಾಗಿಯೇ ಕರೆಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅಂಥ ವಿಚಾರಣೆಯನ್ನು ಮಾಡಬಹುದು ಅಥವಾ ಅಂಥ ವಿಚಾರಣೆಯನ್ನು ಮಾಡುವಂತೆ ಮಾಡಬಹುದು ಮತ್ತು ಅಂಥ ಆದೇಶವನ್ನು ಯಾವ ವ್ಯಕ್ತಿಯ ವಿರುದ್ಧವಾಗಿ ಮಾಡಲಾಗಿದೆಯೋ ಆ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ತರುವಾಯ ಆತನು ಸೂಕ್ತವೆಂದು ಭಾವಿಸಬಹುದಾದ ಅಂಥ ಆದೇಶಗಳನ್ನು ನೀಡಬಹುದು.

**43ಇ. ಅಪೀಲು.–**43ಎ, ಅಥವಾ 43ಸಿ ಅಥವಾ 43ಡಿ ಪ್ರಕರಣದ ಅಡಿಯಲ್ಲಿ ಮಾಡಲಾದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅಂಥ ಆದೇಶವು ಆತನಿಗೆ ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಅಂಥ ಆದೇಶಕ್ಕೆ ಸಂಬಂಧಿಸಿದ ಸ್ವತ್ತನ್ನು ಸ್ವಾಧೀನಪಡಿಸಿಕೊಂಡ ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸೆಷನ್ಸ್ ನ್ಯಾಯಾಧೀಶರಿಗೆ ಅಪೀಲು ಸಲ್ಲಿಸಬಹುದು ಮತ್ತು ಸೆಷನ್ಸ್ ನ್ಯಾಯಾಧೀಶರು, ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಆದೇಶಗಳನ್ನು ನೀಡಬಹುದು ಮತ್ತು ಅಂಥ ಆದೇಶವು ಅಂತಿಮವಾಗಿರತಕ್ಕದ್ದು.

**43ಎಫ್. ಮುಟುಗೋಲಿನ ಐತೀರ್ಪು ಇತರ ದಂಡಗಳಿಗೆ ಅಡ್ಡಿಪಡಿಸುವಂತಿಲ್ಲ.–**43ಎ ಪ್ರಕರಣದ (2)ನೇ ಉಪಪ್ರಕರಣ ಅಥವಾ 43ಸಿ ಪ್ರಕರಣ ಅಥವಾ 43ಡಿ ಪ್ರಕರಣ ಅಥವಾ 43ಇ ಪ್ರಕರಣದ ಅಡಿಯಲ್ಲಿನ ಯಾವುದೇ ಮುಟ್ಟುಗೋಲಿನ ಐತೀರ್ಪು, ಅದರ ಮೂಲಕ ಬಾಧಿತವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ಹೊಣೆಯಾಗಿರುವ ಯಾವುದೇ ದಂಡ ವಿಧಿಸುವುದನ್ನು ನಿರ್ಬಂಧಿಸತಕ್ಕದ್ದಲ್ಲ.

**43ಜಿ. ಕೆಲವು ಪ್ರಕರಣಗಳಲ್ಲಿ ಅಧಿಕಾರವ್ಯಾಪ್ತಿಗೆ ಪ್ರತಿಷೇಧ.–** ಈ ಅಧಿನಿಯಮದ ಅಡಿಯಲ್ಲಿ, ಯಾವುದೇ ಮದ್ಯ, ಮಾದಕ, ವಸ್ತು, ಬಟ್ಟಿಯಂತ್ರ, ಪಾತ್ರೆ, ಸಲಕರಣೆಗಳು ಅಥವಾ ಉಪಕರಣಗಳು ಅಥವಾ ಯಾವುದೇ ತೊಟ್ಟಿ, ಪ್ಯಾಕೇಟ್ ಅಥವಾ ಹೊದಿಕೆಗಳಲ್ಲಿ ಅಂಥ ಮದ್ಯ, ಮಾದಕ, ವಸ್ತು, ಬಟ್ಟಿಯಂತ್ರ, ಪಾತ್ರೆ, ಸಲಕರಣೆಗಳು ಅಥವಾ ಉಪಕರಣಗಳು ಕಂಡು ಬಂದಲ್ಲಿ, ಅಥವಾ ಯಾವುದೇ ಅಪರಾಧ ಕೃತ್ಯಕ್ಕೆ ಬಳಸಲಾದ ಯಾವುದೇ ಪ್ರಾಣಿ, ಗಾಡಿ, ಪಾತ್ರೆ ಅಥವಾ ಇತರ ಸಾಗಣೆಯನ್ನು ಸ್ವಾಧೀನ ಪಡಿಸಿಕೊಂಡಾಗಲೆಲ್ಲಾ ಅಥವಾ ತಡೆಹಿಡಿದಾಗಲೆಲ್ಲಾ, ಮತ್ತು ಈ ಅಧಿನಿಯಮ ಅಥವಾ ದಂಡ ಪ್ರಕ್ರಿಯ ಸಂಹಿತೆ, 1973ರಲ್ಲಿ (1974ರ ಕೇಂದ್ರ ಅಧಿನಿಯಮ 2) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಅಂಥ ಸ್ವತ್ತಿನ ಅಭಿರಕ್ಷೆ, ಸ್ವಾಧೀನ, ಬಟವಾಡೆ, ವಿಲೆ ಅಥವಾ ಹಂಚಿಕೆಗೆ ಸಂಬಂಧಿಸಿದ ಆದೇಶಗಳನ್ನು ಮಾಡಲು 43ಎ ಪ್ರಕರಣದ ಅಡಿಯಲ್ಲಿ ನೇಮಕವಾದ ಅಧಿಕೃತ ಅಧಿಕಾರಿ ಅಥವಾ 43ಡಿ ಪ್ರಕರಣದ ಅಡಿಯಲ್ಲಿ ವಿಶೇಷ ಅಧಿಕಾರ ನೀಡಲಾದ ಅಧಿಕಾರಿ ಅಥವಾ 43ಇ ಪ್ರಕರಣದ ಅಡಿಯಲ್ಲಿ ಅಪೀಲನ್ನು

ಆಲಿಸುವ ಸೆಷನ್ಸ್ ನ್ಯಾಯಾಧೀಶರು, ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು, ಆದರೆ ಇತರ ಯಾವೊಬ್ಬ ಅಧಿಕಾರಿ ಅಥವಾ ನ್ಯಾಯಾಲಯ, ನ್ಯಾಯಾಧಿಕಾರಣ ಅಥವಾ ಪ್ರಾಧಿಕಾರವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ;][1]

1.1987ರ ಅಧಿನಿಯಮ 36ರ ಮೂಲಕ 10.08.1987 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**44. xxx**][1]

1. 1987ಪರಿಹಾರ ಅಧಿನಿಯಮ 36ರ ಮೂಲಕ 10.08.1987ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][**45. ಅಪರಾಧಗಳ ರಾಜಿ.–** (1) ಅಬ್ಕಾರಿ ಕಮೀಷನರು, ಡೆಪ್ಯೂಟಿ ಕಮೀಷನರ್, ಅಥವಾ ಈ ಬಗ್ಗೆ ವಿಶೇಷವಾಗಿ ಅಧಿಕಾರ ನೀಡಲ್ಪಟ್ಟ ಯಾವೊಬ್ಬ ಅಬ್ಕಾರಿ ಅಧಿಕಾರಿಯು, ಅಪರಾಧವನ್ನು ಎಸಗಿದ್ದಾನೆಂದು ಯುಕ್ತವಾಗಿ ಸಂಶಯಬರುವ ಯಾವೊಬ್ಬ ವ್ಯಕ್ತಿಯಿಂದ ಅಪರಾಧವನ್ನು ಎಸಗಿದುದರಿಂದ ಆಗಬಹುದಾದ ಪರಿಹಾರದಂತೆ,

(i) 32ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಎರಡುನೂರು ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಅಂಥ ಮೊತ್ತವನ್ನು;

(ii) (ಸಿ), (ಜಿ), ಮತ್ತು (ಎಚ್) ಖಂಡಗಳನ್ನು ಹೊರತುಪಡಿಸಿ 36ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಐದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದಂತೆ ಆದರೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹಣದ ಮೊತ್ತವನ್ನು,

– ಸ್ವೀಕರಿಸತಕ್ಕದ್ದು][1]

1. 2005ರ ಅಧಿನಿಯಮ 14ರ ಮೂಲಕ 11.04.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ವ್ಯಕ್ತಿಯು, ಸಂದರ್ಭಾನುಸಾರ, ಅಂಥ ಮೊತ್ತವನ್ನು ಅಥವಾ ಅಂಥ ಮೌಲ್ಯವನ್ನು ಅಥವಾ ಎರಡನ್ನೂ ಸಂದಾಯ ಮಾಡಿದಲ್ಲಿ, ಅಂಥ ವ್ಯಕ್ತಿಯು ಅಭಿರಕ್ಷೆಯಲ್ಲಿದ್ದರೆ, ಅವನನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಅಧಿಗ್ರಹಣ ಮಾಡಿದ ಎಲ್ಲ ಸ್ವತ್ತನ್ನು ಬಿಡುಗಡೆ ಮಾಡಬಹುದು ಮತ್ತು ಅಂಥ ವ್ಯಕ್ತಿಯ ವಿರುದ್ಧ ಯಾವ ಕ್ರಿಮಿನಲ್ ನ್ಯಾಯಾಲಯದದಲ್ಲಿಯೂ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ. ಪರಿಹಾರದ ಸ್ವೀಕಾರವನ್ನು ದೋಷ ವಿಮೋಚನೆಯೆಂದು ಭಾವಿಸತಕ್ಕದ್ದು ಮತ್ತು ಯಾವ ಸಂದರ್ಭದಲ್ಲಿಯೂ ಅದೇ ಕೃತ್ಯದ ಬಗ್ಗೆ ಅಂಥ ವ್ಯಕ್ತಿಯ ಅಥವಾ ಸ್ವತ್ತಿನ ವಿರುದ್ಧ ಮುಂದಿನ ಯಾವ ವ್ಯವಹರಣೆಗಳನ್ನೂ ಜರುಗಿಸತಕ್ಕದ್ದಲ್ಲ.

**[45 ಎ xxx]**[1]

1.2005 ರ ಅಧಿನಿಯಮ 14ರ ಮೂಲಕ 11.4.2005 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**[45 ಬಿ xxx]**[1]

1.2005 ರ ಅಧಿನಿಯಮ 14ರ ಮೂಲಕ 11.4.2005ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**46. ಉಪದ್ರವಕಾರಿ, ಶೋಧನೆ, ಅಧಿಗ್ರಹಣ, ತಡೆಹಿಡಿದಿರುಸುವಿಕೆ ಅಥವಾ ದಸ್ತಗಿರಿ ಮಾಡುವ ಅಬ್ಕಾರಿ ಅಧಿಕಾರಿಗೆ ದಂಡ.–** ಉಪದ್ರವಕಾರಿಯಾಗಿ ಮತ್ತು ಶಂಕಿಸಲು ಯುಕ್ತ ಕಾರಣವಿಲ್ಲದೆ, ಯಾವನೇ ಅಬ್ಕಾರಿ ಅಧಿಕಾರಿಯು ಅಥವಾ ಇತರ ವ್ಯಕ್ತಿಯು,

(ಎ) ಈ ಅಧಿನಿಯಮದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವ ನೆಪದಿಂದ ಯಾವುದೇ ಆವೃತ ಸ್ಥಳವನ್ನು ಪ್ರವೇಶಿಸಿದರೆ ಅಥವಾ ಶೋಧಿಸಿದರೆ ಅಥವಾ ಪ್ರವೇಶಿಸುವಂತೆ ಅಥವಾ ಶೋಧಿಸುವಂತೆ ಮಾಡಿದರೆ; ಅಥವಾ

(ಬಿ) ಈ ಅಧಿನಿಯಮದ ಮೇರೆಗೆ ಮುಟ್ಟುಗೋಲಿಗೆ ಗುರಿಯಾಗುವ ಯಾವುದೇ ವಸ್ತುವನ್ನು ವಶಪಡಿಸಿಕೊಳ್ಳುವ ಅಥವಾ ಶೋಧಿಸುವ ನೆಪದಿಂದ ಯಾವೊಬ್ಬ ವ್ಯಕ್ತಿಯ ಚರಸ್ವತ್ತನ್ನು ಅಧಿಗ್ರಹಣ ಮಾಡಿದರೆ; ಅಥವಾ

(ಸಿ) ಯಾವೊಬ್ಬ ವ್ಯಕ್ತಿಯನ್ನು ಶೋಧಿಸಿದರೆ, ತಡೆಹಿಡಿದಿರಿಸಿದರೆ ಅಥವಾ ದಸ್ತಗಿರಿ ಮಾಡಿದರೆ; ಅಥವಾ

(ಡಿ) ಇನ್ನಾವುದೇ ರೀತಿಯಲ್ಲಿ ಈ ಅಧಿನಿಯಮದ ಮೇರೆಗಿನ ತನ್ನ ಕಾನೂನುಬದ್ಧ ಅಧಿಕಾರಗಳನ್ನು ಮೀರಿ ವರ್ತಿಸಿದರೆ,

ಅಪರಾಧ ನಿರ್ಣಿತನಾದ ಮೇಲೆ ಆರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**47. ಕರ್ತವ್ಯ ಮಾಡಲು ನಿರಾಕರಿಸುವ ಅಬ್ಕಾರಿ ಅಧಿಕಾರಿಗೆ ದಂಡ.–** ಅಬ್ಕಾರಿ ಕಮಿಶನರನು ಸ್ಪಷ್ಟವಾಗಿ ಲಿಖಿತದಲ್ಲಿ ಅನುಮತಿಸಿದ್ದ ಹೊರತು, ಅಥವಾ ಅವನು ತನ್ನ ಮೇಲಾಧಿಕಾರಿಗೆ ತನ್ನ ಉದ್ದೇಶದ ಬಗ್ಗೆ ಎರಡು ತಿಂಗಳ ಲೇಖೀ ಲಿಖಿತ

ನೋಟೀಸನ್ನು ಕೊಟ್ಟಿದ್ದ ಹೊರತು, ಕಾನೂನುಬದ್ಧ ಕಾರಣವಿಲ್ಲದೆ ತನ್ನ ಪದದ ಕರ್ತವ್ಯ ಮಾಡುವುದನ್ನು ನಿಲ್ಲಿಸುವ ಅಥವಾ ನಿರ್ವಹಿಸಲು ನಿರಾಕರಿಸುವ ಅಥವಾ ಅದರಿಂದ ಹಿಂತೆಗೆಯುವ ಅಥವಾ ಹೇಡಿತನದ ದೋಷಿಯಾಗುವ ಅಬ್ಕಾರಿ ಅಧಿಕಾರಿಯು, ಅಪರಾಧ ನಿರ್ಣಿತನಾದ ಮೇಲೆ ಮೂರು ತಿಂಗಳ ಅವಧಿಯವರೆಗಿನ ಕಾರಾವಾಸದಿಂದ, ಅಥವಾ ಐದು ನೂರು ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ, ದಂಡಿತನಾಗತಕ್ಕದ್ದು.

**48. ಉಪದ್ರವಕಾರಿ ವಿಳಂಬಕ್ಕೆ ದಂಡ.–** ದಸ್ತಗಿರಿ ಮಾಡಲಾದ ಯಾವನೇ ವ್ಯಕ್ತಿಯನ್ನು 59ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಅತಿಸಮೀಪದ ಅಬ್ಕಾರಿ ಅಧಿಕಾರಿಯ ಬಳಿಗೆ ಅಥವಾ ಅತಿ ಸಮೀಪದ ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯ ಬಳಿಗೆ ಕಳಿಸಿ ಕೊಡುವಲ್ಲಿ ಉಪದ್ರವಕಾರಿಯಾಗಿ ಮತ್ತು ಅನಾವಶ್ಯಕವಾಗಿ ವಿಳಂಬ ಮಾಡುವ ಮತ್ತು ಈ ಅಧಿನಿಯಮದ ಮೇರೆಗೆ ಶಕ್ತಿಗಳನ್ನು ಚಲಾಯಿಸುವ ಯಾವನೇ ಅಧಿಕಾರಿಯು ಅಥವಾ ವ್ಯಕ್ತಿಯು, ಅಪರಾಧ ಸಿದ್ಧಪಟ್ಟ ಮೇಲೆ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**49. ತಪ್ಪಿಸಿಕೊಂಡು ಹೋಗುವಂತೆ ದುಷ್ಪ್ರೇರಣೆ ಇತ್ಯಾದಿಗಳನ್ನು ಮಾಡುವುದಕ್ಕೆ ದಂಡ.–** ಈ ಅಧಿನಿಯಮದ ಮೇರೆಗೆ ದಸ್ತಗಿರಿಯಾದ ಯಾವನೇ ವ್ಯಕ್ತಿಯನ್ನು ಕಾನೂನು ವಿರುದ್ಧವಾಗಿ ಬಿಡುಗಡೆ ಮಾಡುವ ಅಥವಾ ಅವನು ತಪ್ಪಿಸಿಕೊಂಡು ಹೋಗುವಂತೆ ದುಷ್ಪ್ರೇರಣೆ ಮಾಡುವ ಅಥವಾ ಈ ಅಧಿನಿಯಮದ ವಿರುದ್ಧವಾಗಿ ಅಪರಾಧವೆಸಗಲು ದುಷ್ಪ್ರೇರಣೆ ಮಾಡುವ ಅಥವಾ ಈ ಅಧಿನಿಯಮದ ಉಪಬಂಧಗಳಿಂದ ತಪ್ಪಿಸಿಕೊಳ್ಳಲು ಅಥವಾ ಅವುಗಳನ್ನು ಉಲ್ಲಂಘಿಸಲು ಅಥವಾ ಅಬ್ಕಾರಿ ರಾಜಸ್ವವು ನಷ್ಟವಾಗುವಂತೆ ಯಾವುದೇ ಕೃತ್ಯವನ್ನು ಮಾಡಲು ಯಾವನೇ ವ್ಯಕ್ತಿಗೆ ಅನುಕೂಲ ಉಂಟು ಮಾಡುವ ಉದ್ದೇಶಕ್ಕಾಗಿ ತನ್ನ ಕರ್ತವ್ಯದ ಬಗ್ಗೆ ಯಾವುದೇ ರೀತಿಯಲ್ಲಿ ಅಸಂಗತವಾಗಿ ವರ್ತಿಸುವ ಯಾವನೇ ಅಧಿಕಾರಿಯು ಅಥವಾ ವ್ಯಕ್ತಿಯು ಮತ್ತು ಯಾವುದೇ ಸ್ಥಳದಲ್ಲಿ ಈ ಅಧಿನಿಯಮದ ವಿರುದ್ಧ ಅಪರಾಧ ಮಾಡಲು ದುಷ್ಪ್ರೇರಣೆ ಮಾಡುವ 50ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಇತರ ಇಲಾಖೆಯ ಯಾವನೇ ಅಧಿಕಾರಿಯು, ಅಪರಾಧ ನಿರ್ಣಿತನಾದ ಮೇಲೆ, ಅಂಥ ಪ್ರತಿಯೊಂದು ಅಪರಾಧಕ್ಕಾಗಿ, [1][ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ][1] ಅಥವಾ ಎರಡರಿಂದಲೂ ದಂಡಿತವಾಗತಕ್ಕದ್ದು.

1.2005ರ ಅಧಿನಿಯಮ 14ರ ಮೂಲಕ ದಿನಾಂಕ: 11.04.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

## ಅಧ್ಯಾಯ– VIII

## ಅಪರಾಧಗಳ ಪತ್ತೆ, ತನಿಖೆ ಮತ್ತು ಆರೋಪ ವಿಚಾರಣೆ

**50. ಭೂ ಹಿಡುವಳಿದಾರರು, ಅಧಿಕಾರಿಗಳು ಮತ್ತು ಇತರರು ಮಾಹಿತಿ ಕೊಡುವುದು.–** (1) ಈ ಅಧಿನಿಯಮದ ಉಲ್ಲಂಘನೆಯಲ್ಲಿ, ಯಾವುದೇ ಮಾದಕವು ತಯಾರಿಸಿದಾಗ ಅಥವಾ ಸಂಗ್ರಹಿಸಲ್ಪಟ್ಟಾಗ, ಅಥವಾ ಮಾದಕ ನಾರು ಗಿಡವನ್ನು ಯಾವುದೇ ಭೂಮಿಯಲ್ಲಿ ಅಥವಾ ಕಟ್ಟಡದಲ್ಲಿ ಬೆಳೆಸಿದಾಗ,–

(ಎ) ಅಂಥ ಭೂಮಿಯ ಅಥವಾ ಕಟ್ಟಡದ ಎಲ್ಲ ಒಡೆಯರು ಅಥವಾ ಅಧಿಭೋಗದಾರರು ಅಥವಾ ಏಜೆಂಟರು ಮತ್ತು

(ಬಿ) (i) ಗ್ರಾಮ ಪೊಲೀಸಿನವರು ಸೇರಿ, ಗ್ರಾಮಾಧಿಕಾರಿಗಳು ಅಥವಾ ಸೇವಕರು

(ii) ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಸದಸ್ಯರು ಮತ್ತು ಅಧಿಕಾರಿಗಳು; ಮತ್ತು

(iii) (ಅಬ್ಕಾರಿ ಅಧಿಕಾರಿಗಳನ್ನುಳಿದು) ರಾಜ್ಯ ಸರಕಾರದ ಪರವಾಗಿ ಅಥವಾ ಅಂಥ ಭೂಮಿಯ ಅಥವಾ ಕಟ್ಟಡವು ಯಾವ ಪ್ರದೇಶದಲ್ಲಿದೆಯೋ ಅಲ್ಲಿಯ ಸ್ಥಳೀಯ ಪ್ರಾಧಿಕಾರದ ಪರವಾಗಿ ಭೂಕಂದಾಯವನ್ನು ಅಥವಾ ಭೂಮಿಯ ಗೇಣಿಯನ್ನು ವಸೂಲು ಮಾಡಲು ನಿಯೋಜಿಸಲ್ಪಟ್ಟ ಎಲ್ಲ ಅಧಿಕಾರಿಗಳು,–

ಯುಕ್ತ ಕಾರಣವಿಲ್ಲದಿರುವಾಗ, ತಮಗೆ ಆ ಸಂಗತಿಯ ಬಗ್ಗೆ ತಿಳಿದೊಡನೆಯೇ ಅದನ್ನು ಮ್ಯಾಜಿಸ್ಟ್ರೇಟರಿಗೆ ಅಥವಾ ಅಬ್ಕಾರಿ ಅಥವಾ ಪೊಲೀಸ್ ಅಥವಾ ಕಂದಾಯ ಇಲಾಖೆಯ ಅಧಿಕಾರಿಗೆ ತಿಳಿಸಲು ಬದ್ಧವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಅಥವಾ ಅನ್ಯಥಾ ತನ್ನ ಗಮನಕ್ಕೆ ಬರಬಹುದಾದ ಈ ಅಧಿನಿಯಮದ ಯಾವುದೇ ಉಪಬಂಧಗಳ ಎಲ್ಲ ಉಲ್ಲಂಘನೆಗಳ ಬಗ್ಗೆ ತನ್ನ ನಿಕಟ ಮೇಲಧಿಕಾರಿಗೆ ಅಥವಾ ಅಬ್ಕಾರಿ ಇನ್ಸ್‌ಪೆಕ್ಟರನಿಗೆ ಕೂಡಲೇ ಮಾಹಿತಿ ಕೊಡಲು ಪ್ರತಿಯೊಬ್ಬ ಅಬ್ಕಾರಿ ಅಧಿಕಾರಿಯು ಬದ್ಧನಾಗಿರತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಎಲ್ಲ ಅಧಿಕಾರಿಗಳು, ಅಧ್ಯಕ್ಷರು, ಸದಸ್ಯರು, ಅಥವಾ ನೌಕರರು.–

(ಎ) ತಮಗೆ ತಿಳಿದುಬಂದ ಅಥವಾ ನಡೆಯಲಿರುವುದೆಂದು ಅಥವಾ ನಡೆಯುವ ಸಂಭವವಿರುವುದೆಂದು ನಂಬಲು ಕಾರಣವಿರುವ ಉಲ್ಲಂಘನೆಗಳನ್ನು ತಡೆಯಲು ತಮ್ಮ ಅಧಿಕಾರಯುತ ಎಲ್ಲ ಯುಕ್ತ ಕ್ರಮಗಳನ್ನು ಕೈಕೊಳ್ಳಲು; ಮತ್ತು

(ಬಿ) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ, ಅಬ್ಕಾರಿ ಕಮಿಶನರನಿಗೆ ಸಹಾಯ ನೀಡಲು ಬದ್ಧನಾಗಿರತಕ್ಕದ್ದು.

**51. ತಯಾರಿಕೆ ಮತ್ತು ಮಾರಾಟದ ಸ್ಥಳಗಳನ್ನು ಪ್ರವೇಶಿಸಲು ಮತ್ತು ಪರಿಶೀಲಿಸಲು ಅಧಿಕಾರ.–** ಅಬ್ಕಾರಿ ಕಮೀಶನರು ಅಥವಾ ಡೆಪ್ಯುಟಿ ಕಮಿಶನರು ಅಥವಾ ನಿಯಮಿಸಬಹುದಾದಂಥ ದರ್ಜೆಗೆ ಕಡಿಮೆಯಿರದ ಯಾವನೇ ಅಬ್ಕಾರಿ ಅಧಿಕಾರಿಯು, ಅಥವಾ ಆ ಬಗ್ಗೆ ಯುಕ್ತ ಅಧಿಕಾರ ನೀಡಲಾದ ಯಾವೊಬ್ಬ ಪೊಲೀಸ್ ಅಧಿಕಾರಿಯು,–

(ಎ) ಲೈಸೆನ್ಸು ಹೊಂದಿದ ತಯಾರಿಕೆದಾರನು ಯಾವುದೇ ಮಾದಕವನ್ನು ತಯಾರಿಸುವ ಅಥವಾ ಸಂಗ್ರಹಿಸಿಡುವ ಯಾವುದೇ ಸ್ಥಳವನ್ನು, ಹಗಲಾಗಲೀ ಅಥವಾ ರಾತ್ರಿಯಾಗಲೀ ಯಾವುದೆ ಕಾಲದಲ್ಲಿ, ಪ್ರವೇಶಿಸಬಹುದು ಮತ್ತು ಪರಿಶೀಲಿಸಬಹುದು; ಮತ್ತು

(ಬಿ) ಯಾವುದೇ ಮಾದಕವನ್ನು, ಈ ಅಧಿನಿಯಮದ ಮೇರೆಗೆ ಲೈಸೆನ್ಸು ಹೊಂದಿರುವ ಯಾವನೇ ವ್ಯಕ್ತಿಯು ಮಾರಾಟಕ್ಕಾಗಿ ಇಟ್ಟಿರುವ ಯಾವುದೇ ಸ್ಥಳವನ್ನು, ಮಾರಾಟಕ್ಕೆ ಅನುಮತಿಸಲಾದ ಸಮಯದ ಯಾವುದೇ ಕಾಲದಲ್ಲಿ, ಮತ್ತು ಅದು ತೆರೆದಿರುವ ಇತರ ಯಾವುದೆ ಕಾಲದಲ್ಲಿ, ಪ್ರವೇಶಿಸಬಹುದು ಮತ್ತು ಪರಿಶೀಲಿಸಬಹುದು; ಮತ್ತು

(ಸಿ) ಲೆಕ್ಕ ಪತ್ರಗಳನ್ನು ಮತ್ತು ರಿಜಿಸ್ಟರುಗಳನ್ನು ಪರೀಕ್ಷಿಸಬಹುದು, ಮತ್ತು ಅಂಥ ಸ್ಥಳದಲ್ಲಿರುವ ಯಾವುದೆ ಸಾಮಗ್ರಿಗಳನ್ನು, ಬಟ್ಟಿ ಯಂತ್ರಗಳನ್ನು, ಪಾತ್ರೆಗಳನ್ನು, ಉಪಕರಣಗಳನ್ನು, ಸಲಕರಣೆಗಳನ್ನು, ಅಥವಾ ಮಾದಕವನ್ನು ಪರೀಕ್ಷಿಸಬಹುದು, ಪರಕಿಸಬಹುದು, ಅಳತೆ ಮಾಡಬಹುದು ಅಥವಾ ತೂಕ ಮಾಡಬಹುದು.

[1][**51ಎ. ಮೂರನೇ ಪಕ್ಷಕಾರನಿಂದ ತಪಾಸಣೆ ಅಥವಾ ಲೆಕ್ಕಪರಿಶೋಧನೆ.–** (1) ನಿಯಮಿಸ ಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಪ್ರತಿಯೊಬ್ಬ ಲೈಸೆನ್ಸ್‌ದಾರನು, ಅಬ್ಕಾರಿ ಕಮೀಶನರು ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮೊದಲು, ಒಂದು ಹಣಕಾಸು ವರ್ಷದ ಲೆಕ್ಕಗಳನ್ನು ಅಥವಾ ದಾಖಲೆಗಳನ್ನು ಒಬ್ಬ ಕಾಸ್ಟ್ ಅಕೌಂಟೆಟ್ ರಿಂದ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು ಮತ್ತು ಅಬ್ಕಾರಿ ಕಮೀಶನರು ಕಾಲಕಾಲಕ್ಕೆ ನಿಯಮಿಸಬಹುದಾದಂಥ ಅಥವಾ ನಿರ್ದಿಷ್ಟಪಡಿಸಬಹುದಾದಂಥ ವಿವರಗಳನ್ನು ವಿಷದಪಡಿಸಿ ಸದರಿ ಕಾಸ್ಟ್ ಅಕೌಂಟೆಟ್‌ರು ಕ್ರಮಬದ್ದವಾಗಿ ಸಹಿ ಮಾಡಿರುವ ಮತ್ತು ಸತ್ಯಾಪನೆ ಮಾಡಿರುವ, ಅಂಥ ಲೆಕ್ಕ ಪರಿಶೋಧನೆಯ ವರದಿಯನ್ನು ನಿಯಮಿಸಲಾದ ನಮೂನೆಯಲ್ಲಿ ಆ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

(2) (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಲೆಕ್ಕಪರಿಶೋಧನಾ ವರದಿಯು ಇತರ ವಿಷಯಗಳ ಜೊತೆಗೆ ಈ ಮುಂದಿನ ಮಾಹಿತಿಗಳನ್ನು ಒಳಗೊಂಡಿರತಕ್ಕದ್ದು,–

(i) ಲೈಸೆನ್ಸುದಾರನು, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಉಪಬಂಧಿಸಲಾದಂತೆ ಅಥವಾ ಕಾಲಕಾಲಕ್ಕೆ ಸರ್ಕಾರವು ಅಥವಾ ಅಬ್ಕಾರಿ ಆಯುಕ್ತರು ಹೊರಡಿಸಿದ ಆದೇಶಗಳ ಪ್ರಕಾರ ಸೂಕ್ತ ಲೆಕ್ಕಪತ್ರಗಳನ್ನು ಮತ್ತು ದಾಖಲೆಗಳ ಪುಸ್ತಕಗಳನ್ನು ನಿರ್ವಹಿಸುತ್ತಿರುವನೆ ಎಂಬುದನ್ನು;

(ii) ಲೈಸೆನ್ಸುದಾರನು, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಉಪಬಂಧಿಸಲಾದಂತೆ ಅಥವಾ ಕಾಲಕಾಲಕ್ಕೆ ಸರ್ಕಾರವು ಅಥವಾ ಅಬ್ಕಾರಿ ಆಯುಕ್ತರು ಹೊರಡಿಸಿದ ಆದೇಶಗಳ ಪ್ರಕಾರ ಅಬ್ಕಾರಿ ಶುಲ್ಕಕ್ಕೆ ಗುರಿಯಾಗತಕ್ಕ ಸರಕುಗಳನ್ನು ಅಥವಾ ಮದ್ಯಸಾರವನ್ನು ಉತ್ಪಾದಿಸುತ್ತಿರುವನೆ ಎಂಬುದನ್ನು;

(iii) ಕಚ್ಚಾವಸ್ತುಗಳ ಹೂಡುವಳಿ ಹುಟ್ಟುವಳಿಗಳು ಮತ್ತು ಅಂತಿಮವಾಗಿ ಉತ್ಪಾದಿಸಲಾದ ವಸ್ತುಗಳು, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಉಪಬಂಧಿಸಲಾದ ಅಥವಾ ಕಾಲಕಾಲಕ್ಕೆ ಸರ್ಕಾರವು ಅಥವಾ ಅಬ್ಕಾರಿ ಆಯುಕ್ತರು ಹೊರಡಿಸಿದ ಆದೇಶಗಳಲ್ಲಿ ನಿಗದಿತ ಪ್ರಮಾಣಕಕ್ಕೆ ಅನುಸಾರವಾಗಿವೆಯೇ ಮತ್ತು ಬದಲಾವಣೆ ಯಾವುದಾದರೂ ಇದ್ದಲ್ಲಿ ಅವುಗಳನ್ನು ತೋರಿಸಲಾಗಿದೆಯೇ ಎಂಬುದನ್ನು;

(iv) ಮದ್ಯಸಾರಗಳು ಮತ್ತು ಮದ್ಯದ ಉತ್ಪಾದನೆ ಅಥವಾ ಸಂಸ್ಕರಣದ ಸಂದರ್ಭದಲ್ಲಿ ಆಗುತ್ತಿರುವ ವೇಸ್ಟೇಜುಗಳು ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಅಥವಾ ಕಾಲಕಾಲಕ್ಕೆ ಸರ್ಕಾರವು ಅಥವಾ ಅಬ್ಕಾರಿ ಆಯುಕ್ತರು ಹೊರಡಿಸಿದ ಆದೇಶಗಳಲ್ಲಿ ನಗದಿತ ಪ್ರಮಾಣಕಕ್ಕೆ ಅನುಸಾರವಾಗಿವೆಯೇ ಎಂಬುದನ್ನು; ಮತ್ತು

(v) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಅಥವಾ ಕಾಲಕಾಲಕ್ಕೆ ಸರ್ಕಾರವು ಅಥವಾ ಅಬ್ಕಾರಿ ಆಯುಕ್ತರು ಹೊರಡಿಸಿದ ಆದೇಶಗಳ ಪ್ರಕಾರ ಉಪಬಂಧಿಸಬಹುದಾದ ಯಾವುದೇ ಇತರೆ ವಿಷಯಗಳು ಮತ್ತು ವಿವರಗಳು.

(3) (1)ನೇ ಉಪಪ್ರಕರಣದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಅಥವಾ ಅನ್ಯಥಾ ಸದರಿ ಲೈಸೆನ್ಸುದಾರನ ದಾಖಲೆಗಳು ಅಥವಾ ಲೆಕ್ಕ ಪುಸ್ತಕಗಳನ್ನು ಲೆಕ್ಕಪರಿಶೋಧನೆ ಮಾಡಿಸಲಾಗಿದ್ದರೂ ಅಥವಾ ಲೆಕ್ಕಪರಿಶೋಧನೆಗೆ ಗುರಿಯಾಗವಂತಿದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

(4) (1)ನೇ ಉಪಪ್ರಕರಣದ ಅಡಿಯಲ್ಲಿ, ಲೆಕ್ಕಪರಿಶೋಧನೆಯ ಆಧಾರದ ಮೇಲೆ ಸಂಗ್ರಹಿಸಿದ ಮತ್ತು ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿನ ಯಾವುದೇ ವ್ಯವಹರಣೆಗಳಲ್ಲಿ ಬಳಸಲು ಉದ್ದೇಶಿಸಲಾದ ಯಾವುದೇ ವಿಷಯದ ಸಂಬಂಧದಲ್ಲಿ ಲೈಸೆನ್ಸುದಾರನಿಗೆ, ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡತಕ್ಕದ್ದು.

**ವಿವರಣೆ.-** (1) ಈ ಪ್ರಕರಣದ ಉದ್ದೇಶಕ್ಕಾಗಿ "ಕಾಸ್ಟ್ ಅಕೌಂಟೆಂಟ್" ಎಂಬುದು, ಕಾಸ್ಟ್ ಮತ್ತು ವರ್ಕ್ಸ್ ಲೆಕ್ಕಾಧಿಕಾರಿಗಳ ಅಧಿನಿಯಮ, 1959 (1959ರ ಕೇಂದ್ರ ಅಧಿನಿಯಮ 23)ರ 2ನೇ ಪ್ರಕರಣದ (1)ನೇ ಉಪ-ಪ್ರಕರಣದ (ಬಿ) ಖಂಡದಲ್ಲಿ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

(2) "ಲೈಸೆನ್ಸುದಾರ" ಎಂದರೆ, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಕೊಡಲಾದ ಲೈಸೆನ್ಸು ಹೊಂದಿರುವ ಒಬ್ಬ ವ್ಯಕ್ತಿ][1]

1.2007ರ ಅಧಿನಿಯಮ 27ರ ಮೂಲಕ ದಿನಾಂಕ: 29-08-2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**52. ವಾರಂಟಿಲ್ಲದೆ ದಸ್ತಗಿರಿ ಮಾಡುವುದು, ಮುಟ್ಟುಗೋಲಿಗೆ ಗುರಿಯಾಗಬಹುದಾದ ವಸ್ತುಗಳನ್ನು ವಶಪಡಿಸಿಕೊಳ್ಳುವುದು ಮತ್ತು ಶೋಧ ಮಾಡುವುದು.-** [1][(1) ಅಬ್ಕಾರಿ ಇಲಾಖೆಯಲ್ಲಿ ನಿಯೋಜಿತವಾದ ರಾಜ್ಯ ಸರಕಾರದ ಯಾವನೇ ಅಧಿಕಾರಿಯು ಅಥವಾ ರಾಜ್ಯ ಸರಕಾರದಿಂದ ಅಧಿಕಾರ ನೀಡಲಾದ ಪೊಲೀಸ್ ಅಥವಾ ಕಂದಾಯ ಇಲಾಖೆಯ ಯಾವನೇ ಅಧಿಕಾರಿಯು][1] ನಿಯಮಿಸಬಹುದಾದಂಥ ನಿರ್ಬಂಧಗಳಿಗೊಳಪಟ್ಟು, ಮತ್ತು, -[2][XXX][2]

(ಎ) 32ನೇ ಪ್ರಕರಣ, 33ನೇ ಪ್ರಕರಣ, 34ನೇ ಪ್ರಕರಣ, 36ನೇ ಪ್ರಕರಣ ಅಥವಾ 37ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧದ [1][ಬಗ್ಗೆ][1] ಯಾವನೇ ವ್ಯಕ್ತಿಯನ್ನು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು;

(ಬಿ) ಈ ಅಧಿನಿಯಮದ ಮೇರೆಗೆ, ಅಥವಾ ಅಬ್ಕಾರಿ ರಾಜಸ್ವಕ್ಕೆ ಸಂಬಂಧಿಸಿದ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ವಿಧಿಯ ಮೇರೆಗೆ ಮುಟ್ಟುಗೋಲಿಗೆ ಗುರಿಯಾಗಬಹುದೆಂದು ತಾನು ನಂಬಲು ಕಾರಣವಿರುವ ಅಬ್ಕಾರಿ ಶುಲ್ಕ ವಿಧಿಸಬಹುದಾದ ಅಥವಾ ಇತರ ವಸ್ತುವನ್ನು ಅಧಿಗ್ರಹಣ ಮಾಡಬಹುದು ಮತ್ತು ಇರಿಸಿಕೊಳ್ಳಬಹುದು; ಮತ್ತು

(ಸಿ) ಅಂಥ ಯಾವುದೇ ವಸ್ತುವು ಯಾರಲ್ಲಿ ಇದೆಯೆಂದು ತನಗೆ ಸಂಶಯ ಬರಲು ಯುಕ್ತ ಕಾರಣವಿರುವುದೋ ಆ ವ್ಯಕ್ತಿಯನ್ನು, ಮತ್ತು ಅಂಥ ಯಾವುದೇ ನೌಕೆ, ದೋಣಿ, ವಾಹನ, ಪ್ರಾಣಿ, ಪಶು, ಪಿಂಡಿ, ಪಾತ್ರೆ ಅಥವಾ ಮುಚ್ಚಳವನ್ನು ನಿರೋಧಿಸಬಹುದು ಮತ್ತು ಶೋಧಿಸಬಹುದು.

1.1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ಯಾವೊಬ್ಬ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ 32ನೇ ಪ್ರಕರಣ, 33ನೇ ಪ್ರಕರಣ, 34ನೇ ಪ್ರಕರಣ, 36ನೇ ಪ್ರಕರಣ ಅಥವಾ 37ನೇ ಪ್ರಕರಣದ ಅಡಿಯಲ್ಲಿ ಹೊರತು ಇತರ ಯಾವುದೇ ಅಪರಾಧದ ಆಪಾದಿತನಾಗಿರುವಾಗ ಅಥವಾ ಅಪರಾಧ ಮಾಡಿರುವನೆಂದು ಸಕಾರಣವಾಗಿ ಶಂಕಿಸಲಾದ, ಮತ್ತು ಮೇಲೆ ಹೇಳಿದಂಥ ಅಧಿಕಾರಿಯು ಕೇಳಿದಾಗ ತನ್ನ ಹೆಸರು ಮತ್ತು ನಿವಾಸದ ವಿಳಾಸವನ್ನು ಹೇಳಲು ನಿರಾಕರಿಸಿದರೆ, ಅಥವಾ ಅಂಥ ಅಧಿಕಾರಿಯು ಸುಳ್ಳೆಂದು ನಂಬಲು ಕಾರಣವಿರುವ ಯಾವುದೇ ಹೆಸರನ್ನು ಮತ್ತು ನಿವಾಸದ ವಿಳಾಸವನ್ನು ಕೊಟ್ಟರೆ, ಅವನ ಹೆಸರು ಮತ್ತು ನಿವಾಸದ ವಿಳಾಸವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಅಂಥ ಅಧಿಕಾರಿಯು ಅವನನ್ನು ದಸ್ತಗಿರಿ ಮಾಡಬಹುದು.

**53. ವಾರಂಟು ಹೊರಡಿಸಲು ಮ್ಯಾಜಿಸ್ಟ್ರೇಟನ ಅಧಿಕಾರ.-** ಮಾಹಿತಿ ದೊರೆತ ಮೇಲೆ ಮತ್ತು ತಾನು ಅವಶ್ಯವೆಂದು ಆಲೋಚಿಸುವ ವಿಚಾರಣೆಯನ್ನು (ಯಾವುದೇ ಇದ್ದರೆ) ಮಾಡಿದ ತರುವಾಯ, 32ನೇ ಪ್ರಕರಣ, 33ನೇ ಪ್ರಕರಣ, 34ನೇ ಪ್ರಕರಣ, 36ನೇ ಪ್ರಕರಣ ಅಥವಾ 37ನೇ ಪ್ರಕರಣದ ಅಡಿಯಲ್ಲಿನ ಅಪರಾಧವು ನಡೆದಿದೆ, ನಡೆಯುತ್ತಿದೆ ಅಥವಾ ನಡೆಯುವ ಸಂಭವವಿದೆಯೆಂದು ತಾನು ನಂಬಲು ಕಾರಣವಿರುವ ಯಾವೊಬ್ಬ ಮ್ಯಾಜಿಸ್ಟ್ರೇಟನು.-

(ಎ) ಅಂಥ ಅಪರಾಧವನ್ನು ಮಾಡಲು ಉಪಯೋಗಿಸಿದ ಅಥವಾ ತತ್ಸಂಬಂಧ ಯಾವುದರ ಸಂಬಂಧದಲ್ಲಿ ಅಪರಾಧ ನಡೆದಿದೆಯೋ, ನಡೆಯುತ್ತಿದೆಯೋ ಅಥವಾ ನಡೆಯುವ ಸಂಭವವಿದೆಯೋ

ಆ ಯಾವುದೇ ಮಾದಕ ಬಟ್ಟಿಯಂತ್ರ, ಪಾತ್ರೆ, ಉಪಕರಣ, ಸಲಕರಣೆ ಅಥವಾ ಪದಾರ್ಥಗಳನ್ನು ಇಡಲಾಗಿದೆ ಅಥವಾ ಬಚ್ಚಿಡಲಾಗಿದೆಯೆಂದು ತಾನು ನಂಬಲು ಕಾರಣವಿರುವ ಯಾವುದೇ ಸ್ಥಳವನ್ನು ಶೋಧಿಸಲು; ಮತ್ತು

(ಬಿ) ಅಂಥ ಯಾವುದೇ ಅಪರಾಧವನ್ನು ಮಾಡಿದ್ದಾನೆ, ಮಾಡುತ್ತಿದ್ದಾನೆ ಅಥವಾ ಮಾಡುವ ಸಂಭವವಿದೆ ಎಂದು ತಾನು ನಂಬಲು ಕಾರಣವಿರುವ ಯಾವನೇ ವ್ಯಕ್ತಿಯನ್ನು ದಸ್ತಗಿರಿ ಮಾಡಲು ವಾರಂಟು ಹೊರಡಿಸಬಹುದು.

**54. ವಾರಂಟಿಲ್ಲದೆ ಶೋಧ ಮಾಡುವ ಅಧಿಕಾರ.–** 32ನೇ ಪ್ರಕರಣ, 33ನೇ ಪ್ರಕರಣ, 34ನೇ ಪ್ರಕರಣ, 36ನೇ ಪ್ರಕರಣ ಅಥವಾ 37ನೇ ಪ್ರಕರಣದ ಅಡಿಯಲ್ಲಿನ ಅಪರಾಧವು ನಡೆದಿದೆ, ನಡೆಯುತ್ತಿದೆ ಅಥವಾ ನಡೆಯುವ ಸಂಭವವಿದೆಯೆಂದು ಮತ್ತು ಅಪರಾಧಿಗೆ ತಪ್ಪಿಸಿಕೊಳ್ಳಲು ಅಥವಾ ಅಪರಾಧದ ಸಾಕ್ಷ್ಯವನ್ನು ಮರೆಮಾಡಲು ಅವಕಾಶ ಕೊಡದಂತೆ ಶೋಧನೆಗಾಗಿ ವಾರಂಟು ಪಡೆಯುವುದು ಸಾಧ್ಯವಿಲ್ಲವೆಂದು ನಂಬಲು ತನಗೆ ಕಾರಣವಿರುವಾಗ, ಅಬ್ಕಾರಿ ಕಮಿಷನರು ಅಥವಾ ಡೆಪ್ಯುಟಿ ಕಮಿಶನರರ ಅಥವಾ ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯ ದರ್ಜೆಗೆ ಕಡಿಮೆಯಿರದ ಯಾವನೇ ಪೊಲೀಸ್ ಅಧಿಕಾರಿಯು ಅಥವಾ ನಿಯಮಿಸಬಹುದಾದಂಥ ದರ್ಜೆಗೆ ಕಡಿಮೆಯಿರದ ಯಾವನೇ ಅಬ್ಕಾರಿ ಅಧಿಕಾರಿಯು, ತನ್ನ ನಂಬುಗೆಯ ಕಾರಣವನ್ನು ಅಭಿಲೇಖಿಸಿ–

(ಎ) ಹಗಲಿನಲ್ಲಾಗಲೀ ಅಥವಾ ರಾತ್ರಿಯಲ್ಲಾಗಲೀ ಯಾವುದೇ ಸಮಯದಲ್ಲಿ ಯಾವುದೇ ಸ್ಥಳವನ್ನು ಪ್ರವೇಶಿಸಬಹುದು ಮತ್ತು ಶೋಧಿಸಬಹುದು ಮತ್ತು ಅಲ್ಲಿರುವ ಈ ಅಧಿನಿಯಮದ ಮುಟ್ಟುಗೋಲಿಗೆ ಗುರಿಯಾಗಬಹುದೆಂದು ತನಗೆ ನಂಬಲು ಕಾರಣವಿರುವ ಯಾವುದೇ ಪದಾರ್ಥವನ್ನು ಅಧಿಗ್ರಹಣ ಮಾಡಬಹುದು.

(ಬಿ) ಮೇಲೆ ಹೇಳಿದಂತಹ ಅಪರಾಧದ ದೋಷಿಯಾಗಿರುವನೆಂದು ತನಗೆ ನಂಬಲು ಕಾರಣವಿರುವ ವ್ಯಕ್ತಿಯು ಅಂಥ ಸ್ಥಳದಲ್ಲಿದ್ದರೆ, ಅವನನ್ನು ತಡೆಹಿಡಿದಿರಿಸಬಹುದು ಮತ್ತು ಶೋಧಿಸಬಹುದು ಮತ್ತು ತಾನು ಸೂಕ್ತವೆಂದು ಆಲೋಚಿಸಿದರೆ, ದಸ್ತಗಿರಿ ಮಾಡಬಹುದು.

**55. ತನಿಖೆಯ ವಿಷಯಗಳಲ್ಲಿ ಅಬ್ಕಾರಿ ಅಧಿಕಾರಿಗಳ ಅಧಿಕಾರ.–** (1) ಯಾವೊಬ್ಬ [1][ಅಬ್ಕಾರಿ ಇನ್‌ಸ್ಪೆಕ್ಟರು ಅಥವಾ ಅಬ್ಕಾರಿ ಸಬ್‌ಇನ್‌ಸ್ಪೆಕ್ಟರು][1] ಅಥವಾ ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ನಿಯಮಿಸಬಹುದಾದಂಥ ದರ್ಜೆಗೆ ಕಡಿಮೆಯಿರದ ಮತ್ತು ಅಂಥ ಉಲ್ಲೇಖಿಸಿದ ಪ್ರದೇಶದಲ್ಲಿರುವ ಯಾವನೇ ಅಬ್ಕಾರಿ ಅಧಿಕಾರಿಯು, 32ನೇ ಪ್ರಕರಣ, 33ನೇ ಪ್ರಕರಣ, 34ನೇ ಪ್ರಕರಣ,[2][35ನೇ ಪ್ರಕರಣ, 36ನೇ ಪ್ರಕರಣ 37ನೇ ಪ್ರಕರಣ, 38ನೇ ಪ್ರಕರಣ ಅಥವಾ 38ಎ ಪ್ರಕರಣದ][2] ಮೇರೆಗಿನ ಅಪರಾಧಗಳ ಸಂಬಂಧದಲ್ಲಿ [3][ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973ರ][3] ಉಪಬಂಧಗಳಿಂದ ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಗಳಿಗೆ ಪ್ರದತ್ತವಾದ ಅಧಿಕಾರಗಳನ್ನೇ ಚಲಾಯಿಸಬಹುದು.

ಪರಂತು, ಅಂಥ ಅಧಿಕಾರವು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟಿರತಕ್ಕದ್ದು.

1.1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2.1987ರ ಅಧಿನಿಯಮ 36ರ ಮೂಲಕ ದಿನಾಂಕ:10.08.1987 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3.1982ರ ಅಧಿನಿಯಮ 32ರ ಮೂಲಕ ದಿನಾಂಕ:04.09.1982 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸದರಿ ಸಂಹಿತೆಯ 156ನೇ ಪ್ರಕರಣದ ಉದ್ದೇಶಕ್ಕಾಗಿ, ಯಾವ ಪ್ರದೇಶದ ಬಗ್ಗೆ (1)ನೆಯ ಉಪಪ್ರಕರಣದ ಮೇರೆಗೆ [1][ಅಬ್ಕಾರಿ ಇನ್‌ಸ್ಪೆಕ್ಟರ್ ಅಥವಾ ಅಬ್ಕಾರಿ ಸಬ್‌ಇನ್ಸ್‌ಪೆಕ್ಟರ್ ಅಥವಾ ಅಬ್ಕಾರಿ ಅಧಿಕಾರಿ][1] ಯನ್ನು ಶಕ್ತಗೊಳಿಸಲಾಗಿದೆಯೋ ಆ ಪ್ರದೇಶವು, ಪೊಲೀಸ್ ಠಾಣೆಯೆಂದು ಭಾವಿಸತಕ್ಕದ್ದು ಮತ್ತು ಅಂಥ ಅಧಿಕಾರಿಯು ಅಂಥ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯೆಂದು ಭಾವಿಸತಕ್ಕದ್ದು.

1. 1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**56. ತನಿಖಾಧಿಕಾರಿಯ ವರದಿ.–** [1][ಅಬ್ಕಾರಿ ಇನ್‌ಸ್ಪೆಕ್ಟರನಿಂದ ಸಬ್ ಇನ್‌ಸ್ಪೆಕ್ಟರ್ ನಿಂದ][1] ಅಥವಾ 55ನೇ ಪ್ರಕರಣದ (1)ನೆಯ ಉಪಪ್ರಕರಣದ ಅಡಿಯಲ್ಲಿ ಅಧಿಕಾರ ನೀಡಲಾದ ಅಬ್ಕಾರಿ ಅಧಿಕಾರಿ ತನಿಖೆ ನಡೆಸಿದ ಮೇಲೆ ಆಪಾದಿತನ ಬಗ್ಗೆ ಪ್ರಾಸಿಕ್ಯೂಷನ್ ನಡೆಸುವುದನ್ನು ಸಮರ್ಥಿಸಲು ಸಾಕಷ್ಟು ಸಾಕ್ಷ್ಯವಿದೆಯೆಂದು ಕಂಡುಬಂದರೆ, ತನಿಖಾಧಿಕಾರಿಯು, ಆ ಮೊಕದ್ದಮೆಯನ್ನು ಕುರಿತು ವಿಚಾರಿಸಲು ಅಥವಾ ಅದರ ಆರೋಪ ವಿಚಾರಣೆ ನಡೆಸಲು ಅಧಿಕಾರವ್ಯಾಪ್ತಿಯುಳ್ಳ ಮತ್ತು ಪೊಲೀಸ್ ವರದಿಗಳ ಮೇಲೆ ಅಪರಾಧಗಳನ್ನು ಗಮನಿಸಿ ಕ್ರಮ ತೆಗೆದುಕೊಳ್ಳಲು ಅಧಿಕಾರ ನೀಡಲಾದ ಮ್ಯಾಜಿಸ್ಟ್ರೇಟನಿಗೆ ವರದಿ ಒಪ್ಪಿಸಬಹುದು. (ಅಂಥ ವರದಿಯು, [2][ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ 1973ರ][2] 190ನೆಯ ಪ್ರಕರಣದ ಉದ್ದೇಶಗಳಿಗಾಗಿ, ಪೊಲೀಸ್ ವರದಿಯೆಂದು ಭಾವಿಸಲ್ಪಡತಕ್ಕದ್ದು.)

1.1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1982ರ ಅಧಿನಿಯಮ 32ರ ಮೂಲಕ ದಿನಾಂಕ:04.09.1982 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**57. ಅಬ್ಕಾರಿ ಅಧಿಕಾರಿಯ ವರದಿ.–** [1][ಅಬ್ಕಾರಿ ಸಬ್‌ಇನ್ಸ್‌ಪೆಕ್ಟರನ][1] ದರ್ಜೆಗಿಂತ ಕಡಿಮೆಯಿರುವ ಅಬ್ಕಾರಿ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ಯಾವುದೇ ದಸ್ತಗಿರಿಯನ್ನು, ಅಧಿಗ್ರಹಣವನ್ನು ಅಥವಾ ಶೋಧನೆಯನ್ನು ಮಾಡಿದಾಗ, ಅವನು, ಆ ತರುವಾಯ ಇಪ್ಪತ್ತನಾಲ್ಕು ಗಂಟೆಗಳೊಳಗಾಗಿ,–

(ಎ) ಅಂಥ ದಸ್ತಗಿರಿ ಅಧಿಗ್ರಹಣ ಅಥವಾ ಶೋಧನೆಯ ಎಲ್ಲ ವಿವರಗಳ ಒಂದು ಪೂರ್ಣ ವರದಿಯನ್ನು ತನ್ನ ನಿಕಟ ಮೇಲಾಧಿಕಾರಿಗೆ ಒಪ್ಪಿಸತಕ್ಕದ್ದು[2][;][2]

1.1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1987ರ ಅಧಿನಿಯಮ 36ರ ಮೂಲಕ ದಿನಾಂಕ:10.08.1987 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) 59ನೆಯ ಪ್ರಕರಣದ ಮೇರೆಗೆ ಜಾಮೀನನ್ನು ಒಪ್ಪಿಕೊಂಡ ಹೊರತು ದಸ್ತಗಿರಿ ಮಾಡಿದ[2][XXX][2] ವ್ಯಕ್ತಿಯನ್ನು ಅಥವಾ ಅಧಿಗ್ರಹಣ ಮಾಡಿದ ವಸ್ತುವನ್ನು, ಅನುಕೂಲವಾದಷ್ಟು ಬೇಗನೆ, ಆರೋಪ ವಿಚಾರಣೆಗಾಗಿ ಅಥವಾ ನ್ಯಾಯ ನಿರ್ಣಯಕ್ಕಾಗಿ, ಮ್ಯಾಜಿಸ್ಟ್ರೇಟನ ಕಡೆಗೆ ಕರೆದೊಯ್ಯತಕ್ಕದ್ದು ಅಥವಾ ಕಳಿಸತಕ್ಕದ್ದು;[1][ಮತ್ತು][1]

1.1987ರ ಅಧಿನಿಯಮ 36ರ ಮೂಲಕ ದಿನಾಂಕ:10.08.1987 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1987ರ ಅಧಿನಿಯಮ 36ರ ಮೂಲಕ ದಿನಾಂಕ:10.08.1987 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(ಸಿ) ಅಂಥ ವಶಪಡಿಸಿಕೊಳ್ಳುವಿಕೆಯ ವರದಿಯನ್ನು ರಚಿಸಿ ಮತ್ತು ಅಧಿಕೃತ ಅಧಿಕಾರಿಗೆ ವಶಪಡಿಸಿಕೊಂಡ ವಸ್ತುವನ್ನು ಪಡೆದು ಅಥವಾ ಎಲ್ಲ ಅನುಕೂಲವಾದಷ್ಟು ಬೇಗನೆ ರವಾನಿಸತಕ್ಕದ್ದು ಅಥವಾ ಕಳುಹಿಸತಕ್ಕದ್ದು.][1]

1. 1987ರ ಅಧಿನಿಯಮ 36ರ ಮೂಲಕ ದಿನಾಂಕ:10.08.1987 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**58. ದಸ್ತಗಿರಿ, ಶೋಧನೆ ಇತ್ಯಾದಿಗಳನ್ನು ಮಾಡುವ ಬಗೆ.–** ಈ ಅಧಿನಿಯಮದ ಮೇರೆಗೆ ದಸ್ತಗಿರಿ ಮಾಡಲ್ಪಟ್ಟ ಯಾವನೇ ವ್ಯಕ್ತಿಗೆ, ಸಾಧ್ಯವಾದಷ್ಟು ಬೇಗನೆ, ಅಂಥ ದಸ್ತಗಿರಿಯ ಕಾರಣಗಳನ್ನು ತಿಳಿಸತಕ್ಕದ್ದು ಮತ್ತು ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ದಸ್ತಗಿರಿಗಳು, ಅಭಿರಕ್ಷೆಯಲ್ಲಿ ಇಟ್ಟಿರುವುದು, ಶೋಧನೆಗಳು, ಸಮನುಗಳು, ದಸ್ತಗಿರಿ ವಾರಂಟುಗಳು, ಶೋಧನೆ ವಾರಂಟುಗಳು ದಸ್ತಗಿರಿ ಮಾಡಿದ ವ್ಯಕ್ತಿಗಳನ್ನು ಹಾಜರುಪಡಿಸುವುದು ಮತ್ತು ಅಧಿಗ್ರಹಣ ಮಾಡಿದ ವಸ್ತುಗಳ ವಿಲೇವಾರಿ ಇವುಗಳಿಗೆ ಸಂಬಂಧಿಸಿದ [1][ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ 1973][1]ರ ಉಪಬಂಧಗಳು ಸಾಧ್ಯವಿರುವ ಮಟ್ಟಿಗೆ, ಈ ವಿಷಯಗಳಲ್ಲಿ ಈ ಅಧಿನಿಯಮದ ಮೇರೆಗೆ ತೆಗೆದುಕೊಂಡ ಎಲ್ಲ ಕ್ರಮಗಳಿಗೆ ಅನ್ವಯಿಸತಕ್ಕದ್ದು:

[2][ಪರಂತು, ಶೋಧನೆಗೆ ಇದ್ದ ಸಾಕ್ಷಿಗಳು ಶೋಧನೆ ನಡೆಸಿದ ಸ್ಥಳದ ನಿವಾಸಿಗಳಲ್ಲವೆಂಬ ಸಂಗತಿಯ ಕಾರಣ ಮಾತ್ರದಿಂದ ಯಾವ ಶೋಧನೆಯನ್ನೂ ಅಕ್ರಮವೆಂದು ಭಾವಿಸತಕ್ಕದ್ದಲ್ಲ.][2]

1.1982ರ ಅಧಿನಿಯಮ 32ರ ಮೂಲಕ ದಿನಾಂಕ:04.09.1982 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**59. ವಾರಂಟಿಲ್ಲದೆ ದಸ್ತಗಿರಿ ಮಾಡಿದ ಸಂದರ್ಭದಲ್ಲಿ ಹಾಜರಾಗುವ ಬಗ್ಗೆ ಭದ್ರತೆ.–** (1) ಈ ಅಧಿನಿಯಮದ ಮೇರೆಗೆ ವಾರಂಟಿಲ್ಲದೆ ದಸ್ತಗಿರಿ ಮಾಡಿದ ವ್ಯಕ್ತಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಯಾವನೇ ಅಬ್ಕಾರಿ ಅಧಿಕಾರಿಗೆ ಅಧಿಕಾರವನ್ನು ನೀಡಬಹುದು.

(2) ದಸ್ತಗಿರಿ ಮಾಡಿದ ವ್ಯಕ್ತಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅಧಿಕೃತವಾಗಿರದ ವ್ಯಕ್ತಿಯು ಅಥವಾ ಅಧಿಕಾರಿಯು ಯಾವನೇ ವ್ಯಕ್ತಿಯನ್ನು ವಾರಂಟಿಲ್ಲದೆ ಈ ಅಧಿನಿಯಮದ ಮೇರೆಗೆ ದಸ್ತಗಿರಿ ಮಾಡಿರುವಾಗ, ಅವನನ್ನು,–

(ಎ) ದಸ್ತಗಿರಿ ಮಾಡಿದ ವ್ಯಕ್ತಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅಧಿಕೃತವಿರುವ ಅತಿ ಸಮೀಪದ ಅಬ್ಕಾರಿ ಅಧಿಕಾರಿಯು; ಅಥವಾ

(ಬಿ) ಅತಿ ಸಮೀಪದ ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯು,

–ಇವರಲ್ಲಿ ಯಾರು ಅತಿ ಸಮೀಪದಲ್ಲಿರುವರೋ ಅವರ ಮುಂದೆ ಅಥವಾ ಕಡೆಗೆ ಹಾಜರುಪಡಿಸತಕ್ಕದ್ದು ಅಥವಾ ಕಳಿಸತಕ್ಕದ್ದು.

(3) ವಾರಂಟಿಲ್ಲದೆ ಈ ಅಧಿನಿಯಮದ ಮೇರೆಗೆ ದಸ್ತಗಿರಿ ಮಾಡಲ್ಪಟ್ಟಿರುವ ಯಾವನೇ ವ್ಯಕ್ತಿಯು, ಜಾಮೀನು ಕೊಡಲು ಸಿದ್ಧನಿದ್ದರೆ, ಅಥವಾ ದಸ್ತಗಿರಿ ಮಾಡಿದ ವ್ಯಕ್ತಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅಧಿಕಾರವಿರುವ ಅಧಿಕಾರಿಯು ಮುಂದೆ (2)ನೇ ಉಪಪ್ರಕರಣದ ಮೇರೆಗೆ ಹಾಜರುಪಡಿಸಿದಾಗ, ಅವನನ್ನು, ಜಾಮೀನಿನ ಮೇಲೆ ಅಥವಾ

ಅವನ ಸ್ವಂತದ ಮುಚ್ಚಳಿಕೆಯ ಮೇಲೆ ಅವನನ್ನು ಬಿಡುಗಡೆ ಮಾಡುವ ಅಧಿಕಾರಿಯ ವಿವೇಚನಾನುಸಾರ, ಬಿಡುಗಡೆ ಮಾಡತಕ್ಕದ್ದು.

(4) [1][ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973ರ 441 ರಿಂದ 446ರ ವರೆಗಿನ ಪ್ರಕರಣಗಳು ಮತ್ತು 449ನೇ ಪ್ರಕರಣದ,][1] ಉಪಬಂಧಗಳು ಸಾಧ್ಯವಿರಬಹುದಾದ ಮಟ್ಟಿಗೆ, ಈ ಪ್ರಕರಣದ ಮೇರೆಗೆ ಜಾಮೀನು ಸ್ವೀಕರಿಸುವ ಅಥವಾ ಮುಚ್ಚಳಿಕೆಯನ್ನು ತೆಗೆದುಕೊಳ್ಳುವ ಪ್ರತಿಯೊಂದು ಸಂದರ್ಭಕ್ಕೂ ಅನ್ವಯಿಸತಕ್ಕದ್ದು.

1.1982ರ ಅಧಿನಿಯಮ 32ರ ಮೂಲಕ ದಿನಾಂಕ:04.09.1982 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**59ಎ. ಅಬ್ಕಾರಿ ಇನ್‌ಸ್ಪೆಕ್ಟರ್‌ಗಳ ಪ್ರಮಾಣ ಪತ್ರವು ಸಾಕ್ಷ್ಯವಾಗಿರುವುದು.–** ಮಾದಕಗಳ ಮತ್ತು ಪದಾರ್ಥಗಳ ಪರೀಕ್ಷೆ ಮತ್ತು ಸವಿವರ ಪರಿಶೀಲನೆಯಲ್ಲಿ ನಿಯಮಿಸಿದ ತರಬೇತಿಯನ್ನು ಪಡೆದ ಮತ್ತು ಈ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ಅಧಿಕೃತನಾದ ಅಬ್ಕಾರಿ ಇನ್‌ಸ್ಪೆಕ್ಟರನ ಮುಂದೆ ಅವನ ಪರೀಕ್ಷೆಗೆ ಅಥವಾ ಪರಿಶೀಲನೆಗೆ ಅಥವಾ ವರದಿಗಾಗಿ ಹಾಜರುಪಡಿಸಿದ ಯಾವುದೇ ವಿಷಯದ ಅಥವಾ ಪದಾರ್ಥದ ಬಗ್ಗೆ ಅವನ ಸಹಿಯಿರುವ ಪ್ರಮಾಣ ಪತ್ರವೆಂದು ಭಾವಿಸಲಾಗುವ ದಸ್ತಾವೇಜನ್ನು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವ್ಯವಹರಣೆಗಳಲ್ಲಿ ಆ ಪ್ರಮಾಣ ಪತ್ರದಲ್ಲಿರುವ ಸಂಗತಿಗಳ ಬಗ್ಗೆ ಸಾಕ್ಷ್ಯವೆಂದು ಉಪಯೋಗಿಸಿಕೊಳ್ಳಬಹುದು; ಆದರೆ, ನ್ಯಾಯಾಲಯವು, ತಾನು ಸೂಕ್ತವೆಂದು ಆಲೋಚಿಸಿದರೆ ಮತ್ತು ಪ್ರಾಸಿಕ್ಯೂಷನ್ನಿನ ಅಥವಾ ಆಪಾದಿತ ವ್ಯಕ್ತಿಯು ಮನವಿಯ ಮೇಲೆ, ಯಾವನೇ ಅಬ್ಕಾರಿ ಇನ್‌ಸ್ಪೆಕ್ಟರನನ್ನು ಅವನ ಪ್ರಮಾಣನ ಪತ್ರದ ವಿಷಯದ ಸಂಬಂಧದಲ್ಲಿ ಸಮನು ಮಾಡಬಹುದು ಮತ್ತು ಪರೀಕ್ಷಿಸಬಹುದು.][1]

1.1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**60. ಪ್ರಾಸಿಕ್ಯೂಷನ್ನಿನ ಪ್ರಕ್ರಿಯೆ.–** ಯಾವ ಮ್ಯಾಜಿಸ್ಟ್ರೇಟನೂ–

(ಎ) 35 ಅಥವಾ 38ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ, ಡೆಪ್ಯುಟಿ ಕಮೀಶನರರ ಅಥವಾ ಈ ಸಂದರ್ಭದಲ್ಲಿ ಡೆಪ್ಯುಟಿ ಕಮಿಶನರರಿಂದ ಅಧಿಕೃತನಾದ ಅಬ್ಕಾರಿ ಅಧಿಕಾರಿಯ, ಫಿರ್ಯಾದಿನ ಅಥವಾ ವರದಿಯ ಮೇಲಲ್ಲದೆ, ಅಥವಾ

(ಬಿ) ಈ ಅಧಿನಿಯಮದ 46 ಅಥವಾ 48ನೇ ಪ್ರಕರಣವನ್ನುಳಿದು ಬೇರಾವುದೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ, ತನ್ನ ತಿಳುವಳಿಕೆ ಅಥವಾ ಸಂಶಯದ ಅಥವಾ ಅಬ್ಕಾರಿ ಅಥವಾ ಪೊಲೀಸ್ ಅಧಿಕಾರಿಯ ಫಿರ್ಯಾದು ಅಥವಾ ವರದಿಯ ಮೇಲಲ್ಲದೆ,

–ಅಪರಾಧವನ್ನು ಗಮನಿಸಿ ಕ್ರಮ ತೆಗೆದುಕೊಳ್ಳತಕ್ಕದ್ದಲ್ಲ.

[1][**60ಎ. ಮ್ಯಾಜಿಸ್ಟ್ರೇಟನು ಅನುಸರಿಸಬೇಕಾದ ಪ್ರಕ್ರಿಯೆ.–** (1) ಈ ಅಧಿನಿಯಮದ ಮೇರೆಗಿನ ಅಪರಾಧಗಳ ಎಲ್ಲ ಆರೋಪ ವಿಚಾರಣೆಗಳಲ್ಲಿ, ಮ್ಯಾಜಿಸ್ಟ್ರೇಟನು, ಅಪೀಲಿನಲ್ಲಿರುವ ಸಂಕ್ಷಿಪ್ತ ವಿಚಾರಣೆಯ ಮೊಕದ್ದಮೆಗಳ ಬಗ್ಗೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1898ರಲ್ಲಿ ನಿಯಮಿಸಿದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

ಪರಂತು, ಯಾವುದೇ ಮೊಕದ್ದಮೆಯಲ್ಲಿ, ಮ್ಯಾಜಿಸ್ಟ್ರೇಟನು ಬರಹದಲ್ಲಿ ದಾಖಲಿಸುವ ಕಾರಣಗಳ ಮೇಲೆ ಅಂಥ ಪ್ರಕ್ರಿಯೆಯನ್ನು ಅನುಸರಿಸುವುದು ವಿಹಿತವಲ್ಲವೆಂದು ತೀರ್ಮಾನಿಸಿದರೆ, ಅವನು ಆ ಮೊಕದ್ದಮೆಯು ಸಮನ್ಸು ಮೊಕದ್ದಮೆಯೋ ಅಥವಾ ವಾರಂಟು ಮೊಕದ್ದಮೆಯೋ ಎಂಬುದಕ್ಕನುಸಾರವಾಗಿ, ಸದರಿ ಸಂಹಿತೆಯ XX ಅಥವಾ XXIನೇ ಅಧ್ಯಾಯದಲ್ಲಿ ನಿಯಮಿಸಿದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.][1]

1.1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ–IX

## ಅಪೀಲುಗಳು ಮತ್ತು ಪುನರೀಕ್ಷಣೆ

**61. ಅಪೀಲುಗಳು.–** (1) ಅಬ್ಕಾರಿ ಕಮಿಶನರು ಅಥವಾ ಡೆಪ್ಯುಟಿ ಕಮಿಶರನನ್ನುಳಿದು ಈ ಅಧಿನಿಯಮದ ಮೇರೆಗೆ ಬೇರೆ ಯಾವನೇ ಅಧಿಕಾರಿಯು ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಂಥ ಆದೇಶವು ತಲುಪಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ, ಡೆಪ್ಯುಟಿ ಕಮಿಶನರನಿಗೆ ಅಪೀಲು ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ಡೆಪ್ಯುಟಿ ಕಮಿಶನರನು ಹೊರಡಿಸಿದ ಯಾವುದೇ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ಆದೇಶವು ತಲುಪಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ, ಅಬ್ಕಾರಿ ಕಮಿಶನರಿಗೆ ಅಪೀಲು ಮಾಡಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಅಬ್ಕಾರಿ ಕಮಿಶನರನು ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ಆದೇಶವು ತಲುಪಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ, [1][ಕರ್ನಾಟಕ ಕಂದಾಯ ಅಪೀಲು ನ್ಯಾಯಾಧಿಕರಣಕ್ಕೆ][1] ಅಪೀಲು ಮಾಡಬಹುದು.

1.1973ರ ಕರ್ನಾಟಕ ಕಾನೂನು ಅಳವಡಿಕೆ ಆದೇಶದ ಮೂಲಕ ದಿನಾಂಕ:01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

(4) ಮೇಲೆ ಹೇಳಿದ ಉಪಬಂಧಗಳಿಗೊಳಪಟ್ಟು ಈ ಪ್ರಕರಣದ ಮೇರೆಗಿನ ಅಪೀಲುಗಳು ಈ ಸಂಬಂಧದಲ್ಲಿ ರಾಜ್ಯ ಸರಕಾರವು ರಚಿಸಬಹುದಾದ ನಿಯಮಗಳಿಗೆ ಒಳಪಟ್ಟಿರತಕ್ಕದ್ದು.

**62. ಪುನರೀಕ್ಷಣೆ.–** ಲೈಸೆನ್ಸು ಅಥವಾ ಅನುಮತಿ ಪತ್ರದ ಕೊಡುವಿಕೆ ಅಥವಾ ನಿರಾಕರಿಸುವಿಕೆಯೂ ಸೇರಿ, ಯಾವೊಬ್ಬ ಅಧಿಕಾರಿಯ ಮುಂದೆ ನಡೆದ ಯಾವುದೇ ವ್ಯವಹರಣೆಗಳ ದಾಖಲೆಗಳನ್ನು, ಆ ವ್ಯವಹರಣೆಗಳಲ್ಲಿ ಹೊರಡಿಸಿದ ಆದೇಶಗಳ ಸರಿಯಾಗಿರುವಿಕೆ, ಕಾನೂನು ಬದ್ಧತೆ ಅಥವಾ ಔಚಿತ್ಯದ ಬಗ್ಗೆ ಮತ್ತು ಅಂಥ ವ್ಯವಹರಣೆಗಳು ಕ್ರಮಬದ್ಧವಾಗಿವೆಯೆಂಬ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ, ರಾಜ್ಯ ಸರಕಾರವು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅಂಥ ಆದೇಶವನ್ನು ಶೂನ್ಯಗೊಳಿಸಬಹುದು. ವಿಪರ್ಯಯಗೊಳಿಸಬಹುದು, ಮಾರ್ಪಡಿಸಬಹುದು ಅಥವಾ ಸ್ಥಿರೀಕರಿಸಬಹುದು ಅಥವಾ ತಾನು ಸೂಕ್ತವೆಂದು ಭಾವಿಸುವ ಬೇರಾವುದೇ ಆದೇಶವನ್ನು ಮಾಡಬಹುದು;

ಪರಂತು, ಅಂಥ ಆದೇಶದಿಂದ ಬಾಧಿತನಾದ ವ್ಯಕ್ತಿಗೆ ಹೇಳಿಕೊಳ್ಳಲು ಯುಕ್ತ ಅವಕಾಶ ಕೊಟ್ಟಿಲ್ಲದ ಯಾವ ಆದೇಶವನ್ನೂ, ಶೂನ್ಯಗೊಳಿಸತಕ್ಕದ್ದಲ್ಲ, ವಿಪರ್ಯಯಗೊಳಿಸತಕ್ಕದ್ದಲ್ಲ ಅಥವಾ ಮಾರ್ಪಡಿಸತಕ್ಕದ್ದಲ್ಲ.

## ಅಧ್ಯಾಯ–X

## ಸಂಕೀರ್ಣ

**63. ಸರಕಾರಕ್ಕೆ ಬರಬೇಕಾದ ಬಾಕಿಗಳ ವಸೂಲಿ.–** (1) ಕೆಳಕಂಡ ಮೊಬಲಗುಗಳನ್ನು ಎಂದರೆ:–

(ಎ) ಎಲ್ಲ ಅಬ್ಕಾರಿ ರಾಜಸ್ವವನ್ನು,

(ಬಿ) ತಪ್ಪಿದ್ದಕ್ಕಾಗಿ 17ನೇ ಪ್ರಕರಣದ ಮೇರೆಗಿನ ಗುತ್ತಿಗೆಯನ್ನು ಡೆಪ್ಯುಟಿ ಕಮಿಶನರನನ್ನು ತನ್ನ ಆಡಳಿತಕ್ಕೆ ತೆಗೆದುಕೊಂಡಾಗ, ಅಥವಾ ಅವನಿಂದ ಮರು ಮಾರಾಟವಾದಾಗ, ಉಂಟಾದ ಯಾವುದೇ ನಷ್ಟವನ್ನು, ಮತ್ತು

(ಸಿ) ಅಬ್ಕಾರಿ ರಾಜಸ್ವಕ್ಕೆ ಸಂಬಂಧಿಸಿದ ಯಾವುದೇ ಕರಾರಿನ ಕಾರಣದಿಂದ ಯಾವನೇ ವ್ಯಕ್ತಿಯಿಂದ ಸರಕಾರಕ್ಕೆ ಬರಬೇಕಾದ ಮೊಬಲಗುಗಳನ್ನು ಮುಖ್ಯವಾಗಿ ಅವುಗಳನ್ನು ಕೊಡಬೇಕಾದ ಆ ವ್ಯಕ್ತಿಯಿಂದ, ಅಥವಾ ಅವನ ಜಾಮೀನುದಾರನಿಂದ, ಯಾರಾದರೂ ಇದ್ದರೆ ಅವು ಭೂ ಕಂದಾಯದ ಬಾಕಿಯೆಂಬಂತೆ ವಸೂಲು ಮಾಡಿಕೊಳ್ಳಬಹುದು.

(2) ಗುತ್ತಿಗೆಯನ್ನು ಡೆಪ್ಯುಟಿ ಕಮಿಷನರನು (1)ನೇ ಉಪಪ್ರಕರಣದ ಮೂಲಕ ಅಧಿಕೃತಪಡಿಸಿದ ರೀತಿಯಲ್ಲಿ, ಗುತ್ತಿಗೆದಾರನ ಅಥವಾ ಹಸ್ತಾಂತರಿತನ ತಪ್ಪಿನಿಂದಾಗಿ ಬರಬೇಕಾದ ಯಾವುದೇ ಮೊಬಲಗನ್ನು, ವಸೂಲು ಮಾಡಿಕೊಳ್ಳಬಹುದು.

[1]**[63ಎ.ಅಬ್ಕಾರಿ ಕಂದಾಯದ ಹಿಂಬಾಕಿಯಾಗಿ ಕೆಲವು ತೆರಿಗೆ ಬಾಕಿಗಳ ವಸೂಲಾತಿ.–** ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957ರಲ್ಲಿ(1957ರ ಕರ್ನಾಟಕ ಅಧಿನಿಯಮ 25) ಮತ್ತು ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಬೀರು, ಮದ್ಯಸಾರ ಅಥವಾ ಆಲ್ಕೋಹಾಲ್ ಒಳಗೊಂಡು ಮದ್ಯದ ಉತ್ಪಾದನೆ ಅಥವಾ ಮಾರಾಟದಲ್ಲಿ ತೊಡಗಿರುವ ವ್ಯಕ್ತಿಯಿಂದ ಕರ್ನಾಟಕ ಮಾರಾಟಗಳ ತೆರಿಗೆ ಮತ್ತು ಅಬ್ಕಾರಿ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2000ರ ಪ್ರಾರಂಭದಂದು ಅಥವಾ ತರುವಾಯ ಆ ಅಧಿನಿಯಮದ ಅಡಿಯಲ್ಲಿ ಯಾವುದೇ ಮೊತ್ತವು ಪಾವತಿಸಬಹುದಾದದು ಹಿಂದಿನಿಂದ ಬಾಕಿಯಾಗುವುದು ಅಥವಾ ಬಾಕಿಯಾಗಲಿರುವುದು ಹಾಗೂ ಅಂಥ ಬಾಕಿಯನ್ನು ವಾಣಿಜ್ಯ ತೆರಿಗೆ ಪ್ರಾಧಿಕಾರದ ಮುಂದೆ ಆತನಿಂದ ಅಂತಿಮ ಬಾಕಿ ಮೊತ್ತವೆಂದು ಕರದಾತನು ಯಾವುದೇ ವಿವಾದವಿಲ್ಲದೆ ಅಂಗೀಕರಿಸುವುದು, ಅಂಥ ಮೊತ್ತವನ್ನು ವಾಣಿಜ್ಯ ತೆರಿಗೆ ಪ್ರಾಧಿಕಾರಗಳಿಂದ ಕಂದಾಯ ವಸೂಲಿ ಪ್ರಮಾಣ ಪತ್ರವನ್ನು ಸ್ವೀಕರಿಸಿದ ತರುವಾಯ ಈ ಅಧಿನಿಯಮದ ಅಡಿಯಲ್ಲಿ ಅಬ್ಕಾರಿ ಕಂದಾಯದ ಹಿಂಬಾಕಿ ಎಂಬುದಾಗಿ ವಸೂಲು ಮಾಡತಕ್ಕದ್ದು.][1]

1. 1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**64. ತಪ್ಪಿದವರ ಸ್ವತ್ತಿನ ಮೇಲೆ ಸರಕಾರಕ್ಕೆ ಧಾರಣಾಧಿಕಾರ.–** ಈ ಅಧಿನಿಯಮದ ಮೇರೆಗೆ ಲೈಸನ್ಸು ಪಡೆದ ಅಥವಾ ಗುತ್ತಿಗೆ ಹಿಡಿದ ಯಾವನೇ ವ್ಯಕ್ತಿಯು ತಪ್ಪಿದಲ್ಲಿ, ಅವನ ಎಲ್ಲ ಡಿಸ್ಟಿಲರಿ, ಸಾರಾಯಿ ಕಾರ್ಖಾನೆ, ಉಗ್ರಾಣ ಅಥವಾ ಅಂಗಡಿ ಅಥವಾ ಆವರಣ, ಜೋಡಣೆಗಳು ಅಥವಾ ಸಲಕರಣೆಗಳು ಮತ್ತು ಅದನ್ನು ತಯಾರಿಸಲು ಅಂಥ ಡಿಸ್ಟಿಲರಿಯಲ್ಲಿ ಸಾರಾಯಿ ಕಾರ್ಖಾನೆಯಲ್ಲಿ ಉಗ್ರಾಣದಲ್ಲಿ ಅಥವಾ ಅಂಗಡಿಯಲ್ಲಿ ಅಥವಾ ಆವರಣದಲ್ಲಿ ಅಥವಾ ಅವುಗಳ ಮೇಲೆ ಇಟ್ಟಿರುವ

ಮಾದಕಗಳ ಅಥವಾ ಪದಾರ್ಥಗಳ ಎಲ್ಲ ದಾಸ್ತಾನುಗಳು ಅಬ್ಕಾರಿ ರಾಜಸ್ವದ ಕ್ಲೇಮಿನ ತೀರ್ವಳಿಗಾಗಿ, ಅಥವಾ ಅಂಥ ತಪ್ಪಿನಿಂದಾಗಿ ರಾಜ್ಯ ಸರಕಾರಕ್ಕೆ ತಗಲಿದ ಯಾವುದೇ ನಷ್ಟಗಳ ಸಂಬಂಧದಲ್ಲಿ ಜಪ್ತಿಗೆ ಒಳಪಡಲು ಮತ್ತು ಮಾರಾಟದ ಉತ್ಪತ್ತಿಗಳ ಮೇಲೆ ಪ್ರಥಮ ಭಾರವಾಗಿರುವ ಅಂಥ ಕ್ಲೇಮಿನ ತೀರ್ವಳಿಗಾಗಿ ಮಾರಾಟ ಮಾಡಲ್ಪಡಲು ಹೊಣೆಯಾಗಿರತಕ್ಕದ್ದು.

**65. 17ನೇ ಪ್ರಕರಣದ ಮೇರೆಗೆ ಗುತ್ತಿಗೆದಾರನು ಬಾಕಿಗಳನ್ನು ವಸೂಲು ಮಾಡಿಕೊಳ್ಳುವುದು.–** 17ನೆಯ ಪ್ರಕರಣದ ಉಪಬಂಧಗಳ ಮೇರೆಗೆ ಗುತ್ತಿಗೆಗೆ ಕೊಡಲಾದ ಯಾವನೇ ವ್ಯಕ್ತಿಯು, ಗುತ್ತಿಗೆಯ ನಿಬಂಧನೆಗಳ ಪ್ರಕಾರ ಒಳಗುತ್ತಿಗೆಗೆ ಕೊಡುವುದು ನಿಷೇಧಿಸಲ್ಪಟ್ಟಿರದಿದ್ದಲ್ಲಿ, ಒಳಗುತ್ತಿಗೆಯ ಬಗ್ಗೆ ಬರಬೇಕಾದ ಯಾವುದೇ ಹಣವನ್ನು, ಮಾಲೀಕ ಮತ್ತು ಗೇಣಿದಾರರಿಗೆ ಸಂಬಂಧಿಸಿದ ಆಯಾ ಕಾಲದಲ್ಲಿ ಜಾರಿಯಲ್ಲಿರುವ ವಿಧಿಯ ಮೇರೆಗೆ ವಸೂಲೀಯವಾದ ಗೇಣಿಯ ಬಾಕಿಯೆಂಬಂತೆ, ತನ್ನ ಅಧೀನ ದಾರಕನಿಂದ ವಸೂಲು ಮಾಡಿಕೊಳ್ಳಲು ಅವನ ವಿರುದ್ಧ ಕ್ರಮ ಜರುಗಿಸಬಹುದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ ಅಂಥ ಗುತ್ತಿಗೆದಾರನು ಅಂಥ ಯಾವುದೇ ಹಣವನ್ನು ಸಿವಿಲ್ ದಾವೆಯ ಮೂಲಕ ವಸೂಲು ಮಾಡಿಕೊಳ್ಳುವ ಅಧಿಕಾರವನ್ನು ಬಾಧಿಸತಕ್ಕದ್ದಲ್ಲ.

**66. ರಫ್ತು ಮಾಡಿದ ಮದ್ಯದ ಸಂದರ್ಭಗಳಲ್ಲಿ ಮರುಪಾವತಿ.–** ರಾಜ್ಯದಲ್ಲಿ ಯಾವುದೇ ಮದ್ಯವನ್ನು ತಯಾರಿಸುವ ಅಥವಾ ಉತ್ಪಾದಿಸುವ ಸಂಬಂಧದಲ್ಲಿ ಅಬ್ಕಾರಿ ಶುಲ್ಕವು ವಿಧಿಸಲಾಗಿದ್ದು, ಅಂಥ ಮದ್ಯವನ್ನು ಅನಂತರ ಭಾರತದಲ್ಲಿ ಬೇರೆ ಯಾವುದೇ ರಾಜ್ಯಕ್ಕೆ ರಫ್ತು ಮಾಡಿದರೆ ಮತ್ತು ಆ ರಾಜ್ಯದಲ್ಲಿ ಅಬ್ಕಾರಿ ಶುಲ್ಕಕ್ಕೆ ಅಥವಾ ಪ್ರತಿಶುಲ್ಕಕ್ಕೆ ಗುರಿಪಡಿಸಲ್ಪಟ್ಟರೆ, ಅಂಥ ಶುಲ್ಕದ ಸಂದಾಯದ ಬಗ್ಗೆ ರುಜುವಾತು ಹಾಜರುಪಡಿಸಿದಲ್ಲಿ, ಅಬ್ಕಾರಿ ಕಮೀಶನರನು, ರಾಜ್ಯ ಸರಕಾರವು ನಿಯಮಿಸಬಹುದಾದ ಮಟ್ಟಿಗೆ ಆ ಮೊದಲೇ ಸಂದಾಯ ಮಾಡಿದ ಶುಲ್ಕವನ್ನು ಮರುಪಾವತಿ ಮಾಡಬಹುದು:

ಪರಂತು, ರಾಜ್ಯ ಸರಕಾರವು ಹಾಗೆ ನಿರ್ದೇಶಿಸುವಲ್ಲಿ, ಅಬ್ಕಾರಿ ಕಮಿಶನರನು, ಆ ನಿರ್ದೇಶನದಲ್ಲಿ ಉಲ್ಲೇಖಿಸಬಹುದಾದಂಥ ಅವಧಿ ಅಥವಾ ಅವಧಿಗಳಲ್ಲಿ, ಅಬ್ಕಾರಿ ಶುಲ್ಕವು ಸಂದೇಯವಿರುವ ಯಾವುದೇ ಮದ್ಯವನ್ನು, ಅದರ ಮೇಲೆ ಬರಬೇಕಾದ ಅಬ್ಕಾರಿ ಶುಲ್ಕ ಸಂದಾಯದ ಬಗ್ಗೆ ತಕ್ಕ ಭದ್ರತೆಯನ್ನು ಒದಗಿಸಿದಲ್ಲಿ ರಫ್ತು ಮಾಡಲು ಅನುಮತಿ ಕೊಡಬಹುದು, ಮತ್ತು ಬೇರೆ ಯಾವುದೇ ರಾಜ್ಯದಲ್ಲಿ ಅಂಥ ಮದ್ಯದ ಮೇಲೆ ಪ್ರತಿ ಶುಲ್ಕವನ್ನು ಸಂದಾಯ ಮಾಡಿದ ಬಗ್ಗೆ ರುಜುವಾತನ್ನು ಹಾಜರುಪಡಿಸಿದಲ್ಲಿ, ಈ ಪ್ರಕರಣದಲ್ಲಿ ನಿಯಮಿಸಿದ ಮಟ್ಟಿಗೆ ಸೋಡಿ ಕೊಡಬಹುದು ಮತ್ತು ಅಬ್ಕಾರಿ ಶುಲ್ಕದ ಉಳಿದ ಬಾಕಿಯನ್ನು ವಸೂಲು ಮಾಡಿಕೊಳ್ಳಬಹುದು.

**67. ವಿನಾಯಿತಿ ಇತ್ಯಾದಿ ಕೊಡಲು ರಾಜ್ಯ ಸರಕಾರದ ಅಧಿಕಾರ.–** ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಮತ್ತು ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು–

(ಎ)[3][(i) ಕೇಂದ್ರದ (ಅರೆಸೈನಿಕ ಘಟಕಗಳನ್ನು ಒಳಗೊಂಡಂತೆ) ಸಶಸ್ತ್ರ ಪಡೆಗಳ ಸದಸ್ಯರುಗಳ ಮತ್ತು ರಾಜತಾಂತ್ರಿಕ ಪ್ರತಿನಿಧಿಗಳ ಉಪಯೋಗಕ್ಕಾಗಿ ಅಥವಾ ಸೇವನೆಗಾಗಿ][3] ಅಥವಾ

(ii) ವಿಶ್ವಾಸನೀಯವಾಗಿ ವೈದ್ಯಕೀಯ, ವೈಜ್ಞಾನಿಕ, ಕೈಗಾರಿಕೆ ಅಥವಾ ಅದೇ ಬಗೆಯ ಉದ್ದೇಶಕ್ಕಾಗಿ ಉಪಯೋಗಿಸಲು, [1][ಅಥವಾ][1]

(iii) ಯಾವುದೇ ಕೈಗಾರಿಕೆ ಸಂಸ್ಥೆಗೆ ಅಥವಾ ಕೈಗಾರಿಕೆ ಸಂಸ್ಥೆಗಳ ವರ್ಗಕ್ಕೆ ಅಥವಾ ವರ್ಗಗಳಿಗೆ–

[2][ಮಾರಾಟ ಮಾಡಿದ ಯಾವುದೇ ಮದ್ಯದ ಮೇಲೆ ಪ್ರಕರಣ 22ರ ಮೇರೆಗೆ ವಿಧಿಸಿದ ಅಬ್ಕಾರಿ ಶುಲ್ಕವನ್ನು ಮುಂದೆ ಅಥವಾ ಪೂರ್ವಭಾವಿಯಾಗಿ][2] ವಿನಾಯಿತಿ ಮಾಡಬಹುದು.

1.1970ರ ಅಧಿನಿಯಮ 01ರ ಮೂಲಕ ದಿನಾಂಕ:23.12.1969 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.1982ರ ಅಧಿನಿಯಮ 32ರ ಮೂಲಕ ದಿನಾಂಕ:04.09.1992 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3.2010ರ ಅಧಿನಿಯಮ 19ರ ಮೂಲಕ ದಿನಾಂಕ:16.04.2010 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಬಿ) Vನೇ ಅಧ್ಯಾಯವನ್ನುಳಿದು, ಈ ಅಧಿನಿಯಮದ ಇತರ ಉಪಬಂಧಗಳಿಂದ, ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ಅಥವಾ ಯಾವುದೇ ನಿರ್ದಿಷ್ಟ ಅವಧಿ ಅಥವಾ ಸಂದರ್ಭಕ್ಕಾಗಿ ಯಾವುದೇ ಮಾದಕಕ್ಕೆ ವಿನಾಯಿತಿ ಕೊಡಬಹುದು.][1]

1.1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**68. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮದ ಬಗ್ಗೆ ರಕ್ಷಣೆ.–** ರಾಜ್ಯ ಸರಕಾರದ ವಿರುದ್ಧ ಅಥವಾ ಯಾವನೇ ಅಬ್ಕಾರಿ ಅಧಿಕಾರಿಯ ವಿರುದ್ಧ ಅಥವಾ ಈ ಅಧಿನಿಯಮದ ಮೇರೆಗೆ ಶಕ್ತಿಗಳನ್ನು ಚಲಾಯಿಸಲು ಅಥವಾ ಪ್ರಕಾರ್ಯಗಳನ್ನು ನಿರ್ವಹಿಸಲು ಶಕ್ತಗೊಳಿಸಲಾದ ಇತರ ಯಾವನೇ ಅಧಿಕಾರಿಯ ವಿರುದ್ಧ ಈ ಅಧಿನಿಯಮದ ಮೇರೆಗೆ

ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲುದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾವ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

[1][**68.ಎ ಕರ್ತವ್ಯದ ಹೆಸರಿನಲ್ಲಿ ಮಾಡಿದ ಕೃತ್ಯಗಳ ಬಗ್ಗೆ ರಾಜ್ಯ ಸರಕಾರದ ಮಂಜೂರಾತಿಯಿಲ್ಲದೆ ದಾವೆಗಳನ್ನು ಅಥವಾ ಪ್ರಾಸಿಕ್ಯೂಷನುಗಳನ್ನು ಸ್ವೀಕರಿಸಕೂಡದು.–** (1) ಈ ಅಧಿನಿಯಮದ ಮೇರೆಗಿನ ಯಾವುದೇ ಕರ್ತವ್ಯದ ಹೆಸರಿನಲ್ಲಿ ಅಥವಾ ಅದಕ್ಕೆ ಮೀರಿ ಮಾಡಿದ ಯಾವುದೇ ಕೃತ್ಯದಿಂದ ಯಾವನೇ ಅಬ್ಕಾರಿ ಅಧಿಕಾರಿಯು ಅಪರಾಧ ಮಾಡಿರುವನೆಂದು ಆಪಾದಿಸಿರುವ ಅಥವಾ ದೋಷವೆಸಗಿದ್ದಾನೆಂದು ಆಪಾದಿಸಿರುವ ಅಥವಾ ಆ ಅಪರಾಧ ಅಥವಾ ದೋಷವನ್ನು ಮಾಡಿದ್ದರೆ ಅಥವಾ ಎಸಗಿದ್ದರೆ ಅದು ಮೇಲೆ ಹೇಳಿದ ಸ್ವಭಾವದ್ದಾಗಿದೆಯೆಂದು ನ್ಯಾಯಾಲಯಕ್ಕೆ ಕಂಡು ಬರುವ ಯಾವುದೇ ಸಂದರ್ಭದಲ್ಲಿ, ಪ್ರಾಸಿಕ್ಯೂಷನನ್ನಾಗಲಿ ಅಥವಾ ದಾವೆಯನ್ನಾಗಲಿ ರಾಜ್ಯ ಸರಕಾರದ ಪೂರ್ವ ಮಂಜೂರಾತಿಯಿಲ್ಲದೆ ಸ್ವೀಕರಿಸತಕ್ಕದ್ದಲ್ಲ.

(2) ಮೇಲೆ ಹೇಳಿದಂಥ ದೋಷದ ಕಾರಣದಿಂದ ಹೂಡಲುದ್ದೇಶಿಸಿದ ದಾವೆಯ ಸಂದರ್ಭದಲ್ಲಿ ದಾವೆ ಹೂಡಲು ಉದ್ದೇಶಿಸಿದ ವ್ಯಕ್ತಿಯು, ಫಿರ್ಯಾದು ಮಾಡಿದಾಗ ದೋಷದ ಸಾಕಷ್ಟು ವರ್ಣನೆಯೊಂದಿಗೆ ಉದ್ದೇಶಿಸಿದ ದಾವೆಯ ಕನಿಷ್ಠ ಒಂದು ತಿಂಗಳ ನೋಟೀಸನ್ನೂ ಆಪಾದಿತ ದೋಷಕರ್ತನಿಗೆ ಕೊಡಲು ಬದ್ಧನಾಗಿರತಕ್ಕದ್ದು, ಹಾಗೆ ಮಾಡದಿದ್ದಲ್ಲಿ ಅಂಥ ದಾವೆಯು ವಜಾ ಆಗತಕ್ಕದ್ದು.

(3) ಮೇಲೆ ಹೇಳಿದಂತೆ ಪ್ರತಿವಾದಿಗೆ ನೋಟೀಸು ಕೊಡಲಾಗಿದೆಯೆಂಬುದನ್ನು ಮತ್ತು ಅದನ್ನು ಕೊಟ್ಟ ದಿನಾಂಕವನ್ನು ವಾದ ಪತ್ರದಲ್ಲಿ ಕಾಣಿಸತಕ್ಕದ್ದು ಮತ್ತು ಪ್ರತಿವಾದಿಯು ಏನಾದರೂ ನೀಡಿಕೆ ಅಥವಾ ಪರಿಹಾರವನ್ನು ಒದಗಿಸಿದ್ದರೆ ಅದು ಏನು ಎಂಬುದನ್ನೂ ಅದರಲ್ಲಿ ಹೇಳತಕ್ಕದ್ದು. ಅಂಥ ನೋಟೀಸಿನ ಒಂದು ಪ್ರತಿಯನ್ನು ಅದನ್ನು ಯಾವಾಗ ಮತ್ತು ಯಾವ ರೀತಿಯಲ್ಲಿ ಕೊಡಲಾಯಿತೆಂಬ ಬಗ್ಗೆ ವಾದಿಯ ಹಿಂಬರಹದೊಂದಿಗೆ ಅಥವಾ ಘೋಷಣೆಯೊಂದಿಗೆ ವಾದಪತ್ರಕ್ಕೆ ಲಗತ್ತಿಸಿರತಕ್ಕದ್ದು).][1]

1.1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**68ಬಿ.ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪರಿಷೇಧ.–** ಯಾವುದೇ ಸಿವಿಲ್ ನ್ಯಾಯಾಲಯವು ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೂಲಕ ಅಧಿಕಾರ ನೀಡಲ್ಪಟ್ಟ ಯಾವೊಬ್ಬ ಅಥವಾ ಇತರ ಪ್ರಾಧಿಕಾರಿಯ ಯಾವುದೇ ವಿಷಯದ ಸಂಬಂಧದಲ್ಲಿ ನಿರ್ಧರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೂಲಕ ಪ್ರದತ್ತವಾದ ಯಾವುದೇ ಅಧಿಕಾರದ ಅನುಸರಣೆಯಲ್ಲಿ ಅಂಥ ಅಬಕಾರಿ ಅಧಿಕಾರಿ ಅಥವಾ ಪ್ರಾಧಿಕಾರವು ತೆಗೆದುಕೊಂಡ ಅಥವಾ ತೆಗೆದುಕೊಳ್ಳಬೇಕಾದ ಯಾವುದೇ ಕ್ರಮದ ಸಂಬಂಧದಲ್ಲಿ ಯಾವುದೇ ನ್ಯಾಯಾಲಯವು ತಡೆಯಾಜ್ಞೆಯನ್ನು ಮಂಜೂರು ಮಾಡತಕ್ಕದ್ದಲ್ಲ.

**68ಸಿ. ಅಬಕಾರಿ ಬಾಕಿಗಳ ವಸೂಲಾತಿ ಸಂಬಂಧದಲ್ಲಿ ತಡೆಯಾಜ್ಞೆಯನ್ನು ಮಂಜೂರು ಮಾಡುವಂತಿಲ್ಲ.–**(1) ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ V) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ನ್ಯಾಯಾಲಯವು, ಈ ಮುಂದೆ ಕೈಗೊಳ್ಳುವ ಅಥವಾ ಕೈಗೊಳ್ಳಬೇಕಾದ ಯಾವುದೇ ವ್ಯವಹರಣೆಯನ್ನು ತಡೆಹಿಡಿಯುವ ಯಾವುದೇ ಖಾಯಂ ಅಥವಾ ತಾತ್ಕಾಲಿಕ ತಡೆಯಾಜ್ಞೆ ಅಥವಾ ಯಾವುದೇ ಮಧ್ಯಂತರ ಆದೇಶವನ್ನು ಮಾಡತಕ್ಕದ್ದಲ್ಲ,–

(i) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿನ ಯಾವುದೇ ವಿಶಿಷ್ಟ ಅಥವಾ ಇತರ ಹಕ್ಕಿನ ಮಂಜೂರಾತಿ ಅಥವಾ ಗುತ್ತಿಗೆಯ ಪರಿಗಣನೆಯಲ್ಲಿ ವಿಧಿಸಲಾದ ಯಾವುದೇ ಮೊತ್ತ ಅಥವಾ ಶುಲ್ಕ ಅಥವಾ ಎರಡರ ವಸೂಲಾತಿ, ಅಥವಾ ಯಾವುದೇ ಶುಲ್ಕ, ಸುಂಕ ಅಥವಾ ಪ್ರತಿ ಸುಂಕ ಮತ್ತು ವಿಧಿಸಲಾದ ಲೈಸೆನ್ಸು ಶುಲ್ಕ ಮತ್ತು ಲಿಟರ್ ಶುಲ್ಕ ಅಥವಾ ಯಾವುದೇ ಇತರ ಶುಲ್ಕವನ್ನೊಳಗೊಂಡಿರುವುದು.

(ii) 17ನೇ ಪ್ರಕರಣದ ಅಡಿಯಲ್ಲಿ ಯಾವುದೇ ಪ್ರತ್ಯೇಕ ಅಥವಾ ಇತರ ಹಕ್ಕನ್ನು ಮಂಜೂರು ಮಾಡುವುದು.

(2) (1)ನೇ ಉಪಪ್ರಕರಣದ (i) ಮತ್ತು (ii)ನೇ ಖಂಡಗಳಲ್ಲಿ ಉಲ್ಲೇಖಿಸಲಾದ ತೆಗೆದುಕೊಂಡಿರುವ ಅಥವಾ ತೆಗೆದುಕೊಳ್ಳಬೇಕಾಗಿರುವ ಯಾವುದೇ ವ್ಯವಹರಣೆಯನ್ನು ನಿಗ್ರಹಿಸುವ ತಾತ್ಕಾಲಿಕವಾದ ತಡೆಯಾಜ್ಞೆ ಅಥವಾ ಅನ್ಯಥಾ ಸ್ವರೂಪದ್ದಾಗಿರಲಿ ಅಂಥ ನ್ಯಾಯಾಲಯದ ಮೂಲಕ ಹೊರಡಿಸಲಾದ ಅಥವಾ ಮಾಡಲಾದ ಎಲ್ಲ ಮಧ್ಯಂತರ ಆದೇಶಗಳು ರದ್ದಾಗತಕ್ಕದ್ದು ಅಥವಾ ಸಂದರ್ಭನುಸಾರವಾಗಿ ತೆರವಾಗತಕ್ಕದ್ದು.

**68ಡಿ. ಯಾವುದೇ ರಿಟ್ ಅರ್ಜಿ, ದಾವೆ ಇತ್ಯಾದಿಯ ಬಾಕಿಯನ್ನು ಗಣನೆಗೆ ತೆಗೆದುಕೊಳ್ಳದೇ ಅಬ್ಕಾರಿ ಕಂದಾಯವನ್ನು ಸಂದಾಯ ಮಾಡುವುದು.–** ಉಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಲಾದ ರಿಟ್ ಪಿಟಿಷನ್ ಯಾವುದೇ ನ್ಯಾಯಾಲಯದಲ್ಲಿ

ಹೂಡಲಾದ ದಾವೆ ಅಥವಾ ಇತರ ವ್ಯವಹರಣೆಯಲ್ಲಿ ಅಥವಾ ಯಾವುದೇ ನ್ಯಾಯಾಲಯದ ಮುಂದೆ ದಾಖಲು ಮಾಡಲಾದ ಯಾವುದೇ ಅಪೀಲಿನಲ್ಲಿ ಏನೇ ಒಳಗೊಂಡಿದ್ದರೂ, ಕರ್ನಾಟಕ ಅಪೀಲು ನ್ಯಾಯಾಧಿಕರಣ ಅಥವಾ ಅಬ್ಕಾರಿ ಕಮಿಷನರ್, ಅಥವಾ ರಾಜ್ಯ ಸರ್ಕಾರದ ಮುಂದೆ ದಾಖಲು ಮಾಡಿದ ಪುನರೀಕ್ಷಣೆ, ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಈ ಬಗ್ಗೆ ಅಧಿಕಾರ ಪಡೆದ ಯಾವುದೇ ಅಧಿಕಾರಿ ಅಥವಾ ಪ್ರಾಧಿಕಾರಿಯು ಮಾಡಿದ ಅಥವಾ ಹೊರಡಿಸಿದ ಡಿಮಾಂಡ್ ಅಥವಾ ಆದೇಶದ ಪರಿಣಾಮವಾಗಿ ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಬಾಕಿಯಿರುವ ಯಾವುದೇ ಮೊತ್ತವನ್ನು ಅಂಥ ಡಿಮಾಂಡ್ ಅಥವಾ ಆದೇಶದೊಂದಿಗೆ ಅನುಸಾರವಾಗಿ ಸಂದಾಯಮಾಡತಕ್ಕದ್ದು][1]

1. 1995ರ ಅಧಿನಿಯಮ 02ರ ಮೂಲಕ ದಿನಾಂಕ:25.02.1995 ರಿಂದ ಜಾರಿಗೆ ಬರುವಂತೆ 68ಬಿ ಯಿಂದ 68ಡಿ ವರೆಗೆ ಪ್ರಕರಣಗಳನ್ನು ಸೇರಿಸಲಾಗಿದೆ.

**69. ದಾವೆಗಳ ಅವಧಿ ಪರಿಮಿತಿ.–** ಈ ಅಧಿನಿಯಮಕ್ಕನುಸಾರವಾಗಿ ಮಾಡಿದ ಅಥವಾ ಮಾಡಲಾಗಿದೆಯೆಂದು ಆಪಾದಿಸಲಾದ ಯಾವುದೇ ಕೃತ್ಯದ ಬಗ್ಗೆ ರಾಜ್ಯ ಸರಕಾರದ ವಿರುದ್ಧ ಅಥವಾ ರಾಜ್ಯ ಸರಕಾರವು ಮಾಡುವ ದಾವೆಯನ್ನುಳಿದು ಅಬ್ಕಾರಿ ಅಧಿಕಾರಿಯ ವಿರುದ್ಧ ಫಿರ್ಯಾದು ಮಾಡಿದ ಕೃತ್ಯದ ದಿನಾಂಕದಿಂದ ಆರು ತಿಂಗಳೊಳಗಾಗಿ ದಾವೆಯನ್ನು ಹೂಡಿದ್ದ ಹೊರತು, ಯಾವ ದಾವೆಯನ್ನು ಹೂಡತಕ್ಕದ್ದಲ್ಲ.

**70. ಕಂಪೆನಿ ಇತ್ಯಾದಿಗಳಿಂದ ಅಪರಾದ.–** (1) ಈ ಅಧಿನಿಯಮದ ಮೇರೆಗೆ ಅಪರಾಧ ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಕಂಪನಿಯು ಮತ್ತು ಅಪರಾಧ ನಡೆಯುವ ಕಾಲದಲ್ಲಿ ಅದರ ವ್ಯವಹಾರದ ಪ್ರಭಾರದಲ್ಲಿರುವ ಮತ್ತು ವ್ಯವಹಾರ ನಡೆಸಲು ಕಂಪೆನಿಗೆ ಜವಾಬ್ದಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಆ ಅಪರಾಧದ ದೋಷಿಯೆಂದು ಭಾವಿಸಲ್ಪಡತಕ್ಕದ್ದು ಮತ್ತು ಆ ಪ್ರಕಾರ ಅವನ ವಿರುದ್ಧ ಕ್ರಮ ಜರುಗಿಸಲ್ಪಡಲು ಮತ್ತು ದಂಡಿಸಲ್ಪಡಲು ಹೊಣೆಯಾಗಿರತಕ್ಕದ್ದು.

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ ಆ ಅಪರಾಧವನ್ನು ತನಗೆ ತಿಳಿಯದೆಯೆ ಮಾಡಲಾಗಿದೆಯೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನು ಎಲ್ಲ ಯೋಗ್ಯ ಜಾಗರೂಕತೆಯನ್ನು ವಹಿಸಿದನೆಂದೂ ಅಂಥ ವ್ಯಕ್ತಿಯು ರುಜುವಾತು ಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಪ್ರಕರಣದ ಮೇರೆಗಿನ ಅಪರಾಧವನ್ನು ಕಂಪೆನಿಯು ಮಾಡಿದ್ದಲ್ಲಿ, ಮತ್ತು ಕಂಪನಿಯ ನಿರ್ದೇಶಕ, ವ್ಯವಸ್ಥಾಪಕನು, ಕಾರ್ಯದರ್ಶಿ ಅಥವಾ ಕಂಪನಿಯ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಸಂಚಿನೊಂದಿಗೆ ಅಂಥ ಅಪರಾಧವನ್ನು ಮಾಡಲಾಗಿದೆಯೆಂದು ಅಥವಾ ಅವರ ನಿರ್ಲಕ್ಷತೆಯ ಕಾರಣದಿಂದ ಆಗಿದೆಯೆಂದು ರುಜುವಾತಾದಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ ಕಾರ್ಯದರ್ಶಿಯು ಅಥವಾ ಇತರ ಅಧಿಕಾರಿಯು ಕೂಡ ಅಂಥ ಅಪರಾಧದ ದೋಷಿಯೆಂದು ಭಾವಿಸಲ್ಪಡತಕ್ಕುದು ಮತ್ತು ಅವರ ವಿರುದ್ಧ ಕ್ರಮ ಜರುಗಿಸಲ್ಪಡಲು ಮತ್ತು ಆ ಪ್ರಕಾರ ದಂಡಿಸಲ್ಪಡಲು ಹೊಣೆಯಾಗಿರತಕ್ಕುದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ–

(ಎ) **"ಕಂಪೆನಿ"** ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನೂ ಅಥವಾ ವ್ಯಕ್ತಿಗಳ ಇತರ ಸಂಸ್ಥೆಯನ್ನೂ ಒಳಗೊಳ್ಳುತ್ತದೆ, ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ **"ನಿರ್ದೇಶಕ"** ಎಂದರೆ, ಫರ್ಮಿನಲ್ಲಿಯ ಪಾಲುಗಾರನು.

**71. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರಕಾರವು, ಅಧಿಸೂಚನೆಯ ಮೂಲಕ, ಮತ್ತು ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯದ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮುಂದುವರೆಯುತ್ತಿರುವ ಉಪಬಂಧದ ಸಾಮಾನ್ಯತೆಗೆ ಬಾಧಕವಾಗದಂತೆ, ರಾಜ್ಯ ಸರಕಾರವು ಈ ಮುಂದಿನಂತೆ ನಿಯಮಗಳನ್ನು ರಚಿಸಬಹುದು,–

(ಎ) ಅಬ್ಕಾರಿ ಅಧಿಕಾರಿಗಳ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ನಿಯಮಿಸುವ;

(ಬಿ) [1][XXX][1]

1.1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಬಿಟ್ಟು ಬಿಡತಕ್ಕದ್ದು.

(ಸಿ) ಅಪೀಲುಗಳನ್ನು ಸಲ್ಲಿಸುವ ಕಾಲ ಮತ್ತು ರೀತಿಯನ್ನು ಮತ್ತು ಅಪೀಲುಗಳ ಬಗ್ಗೆ ವ್ಯವಹರಿಸುವ ಪ್ರಕ್ರಿಯೆಯನ್ನು ನಿಯಮಿಸುವ;

(ಡಿ) ಯಾವುದೇ ಮಾದಕದ ಆಮದು, ರಫ್ತು, ಸಾಗಾಣಿಕೆ, ತಯಾರಿಕೆ, ಬೆಳೆಸುವಿಕೆ, ಸಂಗ್ರಹಣೆ, ಸ್ವಾಧೀನ, ಸರಬರಾಜು ಅಥವಾ ದಾಸ್ತಾನು ಮಾಡುವುದನ್ನು ವಿನಿಯಮಿಸುವ, ಮತ್ತು ಅಂಥ ನಿಯಮಗಳ ಮೂಲಕ, ಇತರ ವಿಷಯಗಳೊಂದಿಗೆ–

(i) ಹೆಂಡ ಉತ್ಪತ್ತಿಯಾಗುವ ಮರದಿಂದ ಹೆಂಡ ಇಳಿಸುವುದನ್ನು, ಅಂಥ ಮರಗಳಿಂದ ಹೆಂಡ ತೆಗೆಯುವುದನ್ನು, ಅವುಗಳಿಗೆ ಗುರುತು ಹಾಕುವುದನ್ನು ಮತ್ತು ಅಂಥ ಗುರುತುಗಳನ್ನು ರಕ್ಷಿಸುವುದನ್ನು ವಿನಿಯಮಿಸಬಹುದು;

(ii) ಮದ್ಯಸಾರದ ಗುಣಹರಣ ಮಾಡುವ ವಿಧಾನವನ್ನು ಮತ್ತು ಖಚಿತಪಡಿಸಿದ ಮದ್ಯಸಾರದ ಗುಣಹರಣವನ್ನು ಘೋಷಿಸಬಹುದು; ಮತ್ತು

(iii) ಸ್ವತಃ ತನ್ನ ಅಧಿಕಾರಿಗಳ ಮೂಲಕ ಅಥವಾ ಅವರ ನೇತೃತ್ವದಲ್ಲಿಯೇ ಮದ್ಯಸಾರದ ಗುಣ ಹರಣ ಮಾಡಿಸುವುದು;

(ಇ) ಯಾವ ಅವಧಿಗಾಗಿ, ಯಾವ ಪ್ರದೇಶಗಳಲ್ಲಿ ಮತ್ತು ಯಾವ ವ್ಯಕ್ತಿಗಳಿಗೆ ಅಥವಾ ವ್ಯಕ್ತಿಗಳ ವರ್ಗಗಳಿಗೆ ಯಾವುದೇ ಮಾದಕದ ಸಗಟು ಅಥವಾ ಚಿಲ್ಲರೆ ಮಾರಾಟದ ಲೈಸೆನ್ಸು ಕೊಡಬಹುದೆಂಬುದನ್ನು ವಿನಿಯಮಿಸುವ ಮತ್ತು ಯಾವುದೇ ಸ್ಥಳೀಯ ಪ್ರದೇಶದಲ್ಲಿ ಅಂಥ ಎಷ್ಟು ಲೈಸೆನ್ಸುಗಳನ್ನು ಕೊಡಬಹುದೆಂಬುದನ್ನು ವಿನಿಯಮಿಸುವ;

(ಎಫ್) ಯಾವುದೇ ಪ್ರದೇಶದಲ್ಲಿ ಅಂಥ ಮಾರಾಟದ ಸಲುವಾಗಿ ಲೈಸೆನ್ಸು ಕೊಡುವುದಕ್ಕೆ ಮುಂಚೆ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಮತ್ತು ಖಚಿತಪಡಿಸಿಕೊಳ್ಳಬೇಕಾದ ವಿಷಯಗಳನ್ನು ವಿನಿಯಮಿಸುವ;

(ಜಿ) ಯಾವುದೇ ಶುಲ್ಕ ಅಥವಾ ಫೀಜು ಸಂದಾಯ ಮಾಡುವ ಕಾಲ, ಸ್ಥಳ ಮತ್ತು ರೀತಿಯನ್ನು ಮತ್ತು ಯಾವುದೇ ಶುಲ್ಕದ ಅಥವಾ ಫೀಜಿನ ಯೋಗ್ಯ ಸಂದಾಯದ ಬಗ್ಗೆ ಜಾಮೀನು ಪಡೆದುಕೊಳ್ಳುವುದನ್ನು ವಿನಿಯಮಿಸುವ;

(ಎಚ್) ಯಾ ಪ್ರಾಧಿಕಾರಿಯಿಂದ, ಯಾವ ನಮೂನೆಯಲ್ಲಿ, ಮತ್ತು ಯಾವ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಮತ್ತು ಅವುಗಳಿಗೆ ಒಳಪಟ್ಟು ಯಾವುದೇ ಲೈಸೆನ್ಸು ಅಥವಾ ಅನುಮತಿ ಪತ್ರವನ್ನು ಕೊಡಬಹುದೆಂಬುದನ್ನು, ವಿನಿಯಮಿಸುವ, ಮತ್ತು ಅಂಥ ನಿಯಮಗಳ ಮೂಲಕ, ಇತರ ವಿಷಯಗಳೊಂದಿಗೆ–

(i) ಯಾವುದೇ ಲೈಸೆನ್ಸು ಅಥವಾ ಅನುಮತಿ ಪತ್ರವು ಜಾರಿಯಲ್ಲಿರುವ ಅವಧಿಯನ್ನು ನಿಗದಿ ಮಾಡಬಹುದು;

(ii) ಯಾವುದೇ ಗುತ್ತಿಗೆ, ಲೈಸೆನ್ಸು ಅಥವಾ ಅನುಮತಿ ಪತ್ರದ ಅಥವಾ ಅಬ್ಕಾರಿ ಶುಲ್ಕ ವಿಧಿಸಬಹುದಾದ ಯವುದೇ ವಸ್ತುವಿನ ದಾಸ್ತಾನಿನ ಬಗ್ಗೆ ಸಂದೇಯವಿರುವ ಫೀಜಿನ ದರವನ್ನು ಅಥವಾ ಅವುಗಳನ್ನು ನಿಗದಿ ಮಾಡುವ ರೀತಿಯನ್ನು, ನಿಯಮಿಸಬಹುದು;

(iii) ಯಾವುದೇ ಲೈಸೆನ್ಸಿನ ಅಥವಾ ಅನುಮತಿ ಪತ್ರದ ಷರತ್ತುಗಳನ್ನು ಪಾಲಿಸುವ ಬಗ್ಗೆ ಅವುಗಳನ್ನು ಪಡೆದವರು ಠೇವಣಿ ಮಾಡಬೇಕಾಗುವ ಭದ್ರತೆ ಮೊಬಲಗುಗಳನ್ನು ನಿಯಮಿಸಬಹುದು;

(iv) ಲೈಸೆನ್ಸು ಪಡೆದವರು ಇಟ್ಟುಕೊಂಡಿರಬೇಕಾದ ಲೆಕ್ಕಗಳನ್ನು ಮತ್ತು ಕಳಿಸಬೇಕಾದ ವಿವರಣ ಪಟ್ಟಿಗಳನ್ನು ನಿಯಮಿಸಬಹುದು;

(v) ಲೈಸೆನ್ಸುಗಳ ವರ್ಗಾವಣೆಯನ್ನು ನಿಷೇಧಿಸಬಹುದು ಅಥವಾ ವಿನಿಯಮಿಸಬಹುದು; ಮತ್ತು

(vi) ಯಾವ ವಯಸ್ಸಿಗಿಂತ ಕಡಿಮೆಯಿರುವ ಮಕ್ಕಳನ್ನು ನಿಯೋಜಿಸಿಕೊಳ್ಳುವುದು ಮತ್ತು ಮಕ್ಕಳಿಗೆ ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳನ್ನು ಮಾರಾಟ ಮಾಡುವುದು ಅಥವಾ ಕೊಡುವುದು ವಿಧಿವಿರುದ್ಧವೆಂಬುದನ್ನು ನಿಯಮಿಸಬಹುದು;

(ಐ) ಉಪಯೋಗಕ್ಕೆ ಅನರ್ಹವೆಂದು ಭಾವಿಸಲಾದ ಯಾವುದೇ ಮಾದಕವನ್ನು ನಾಶ ಮಾಡುವ ಅಥವಾ ಇತರ ರೀತಿಯಲ್ಲಿ ವಿಲೆ ಮಾಡುವ ಬಗ್ಗೆ ಉಪಬಂಧಿಸುವ;

(ಜೆ) ಮುಟ್ಟುಗೋಲು ಹಾಕಿಕೊಂಡ ವಸ್ತುಗಳ ವಿಲೆಯನ್ನು ವಿನಿಯಮಿಸುವ;

(ಕೆ) ಸಾಕ್ಷಿದಾರರಿಗೆ ಮತ್ತು ಈ ಅಧಿನಿಯಮದ ಮೇರೆಗೆ ಅಪರಾಧಗಳ ಆರೋಪಿತರಿಗೆ ಮತ್ತು ಆ ತರುವಾಯ ಬಿಡುಗಡೆಯಾದವರಿಗೆ ಅಥವಾ ದೋಷ ಮುಕ್ತರಾದವರಿಗೆ ವೆಚ್ಚವನ್ನು ಕೊಡುವುದನ್ನು ವಿನಿಯಮಿಸುವ;

(ಎಲ್) ಸಾಕ್ಷಿದಾರರನ್ನು ಸಮನು ಮಾಡಲು ಅಬ್ಕಾರಿ ಅಧಿಕಾರಿಗಳಿಗೆ ಇರುವ ಶಕ್ತಿಯನ್ನು ವಿನಿಯಮಿಸುವ;

(ಎಮ್) ಹೆಂಡವನ್ನು ಇಳಿಸುವ [1][ಅಬ್ಕಾರಿ ಮರಗಳ][1] ಬಗ್ಗೆ ಸರ್ಕಾರಕ್ಕೆ ಸಂದೇಯವಿರುವ ಗೇಣಿಯನ್ನು ನಿಯಮಿಸುವ;

1. 1971ರ ಅಧಿನಿಯಮ 01ರ ಮೂಲಕ ದಿನಾಂಕ:07.08.1970 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎನ್) ಈ ಅಧಿನಿಯಮದ ಮೇರೆಗೆ ನಿಯಮಿಸಬಹುದಾದ ಇತರ ಯಾವುದೇ ವಿಷಯದ ಬಗ್ಗೆ ನಿಯಮಗಳನ್ನು ರಚಿಸಬಹುದು.

(3) ಈ ಅಧಿನಿಯಮದ ಮೇರೆಗಿನ ನಿಯಮವನ್ನು ಪೂರ್ವಭಾವಿಯಾಗಿ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ, ನಿಯಮವನ್ನು ರಚಿಸಲು ಇರುವ ಕಾರಣಗಳನ್ನು ಒಂದು ಹೇಳಿಕೆಯಲ್ಲಿ ಉಲ್ಲೇಖಿಸಿ ಅದನ್ನು ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಮುಂದೆ ಮಂಡಿಸತಕ್ಕದು. (4)ನೆಯ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಮಾರ್ಪಾಡಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವು ಈ ಅಧಿನಿಯಮದಲ್ಲಿಯೇ ಅಧಿನಿಯಮಿಸಲಾದಂತೆ ಪ್ರಭಾವಕಾರಿಯಾಗಿರತಕ್ಕದು.

(4) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನಗಳ ಮುಂದೆ, ಅದು ಅಧಿವೇಶನದಲ್ಲಿರುವಾಗ ಅದು ಒಂದು ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾಗಿದ್ದ, ಒಟ್ಟು ಮೂವತ್ತು ದಿನಗಳವರೆಗೆ ಇಡತಕ್ಕದು ಮತ್ತು, ಅದನ್ನು ಹಾಗೆ ಇರಿಸಿದ ಅಧಿವೇಶನವು ಅಥವಾ ಅದರ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ, ಅಂಥ ಯಾವುದೇ ಮಾರ್ಪಾಟು ಅಥವಾ ಶೂನ್ಯತೆಯು ಆ ನಿಯಮದ ಮೇರೆಗೆ ತತ್ಪೂರ್ವದಲ್ಲಿ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**72. ನಿರಸನ ಮತ್ತು ಉಳಿಸುವಿಕೆ.–** ಈ ಮುಂದಿನ ಅಧಿನಿಯಮಗಳು ಎಂದರೆ,

(ಎ) ಮೈಸೂರು ಅಬ್ಕಾರಿ ಅಧಿನಿಯಮ, 1901 (ಮೈಸೂರು ಅಧಿನಿಯಮ, 1901ರ V);

(ಬಿ) ಅಬ್ಕಾರಿ ಅಧಿನಿಯಮ, 1316 ಎಫ್ (ಹೈದರಾಬಾದು ಅಧಿನಿಯಮ, 1, 1316 ಎಫ್. ಯ I) ಮತ್ತು ಮಾದಕ ದ್ರವ್ಯಗಳ ಅಧಿನಿಯಮ, 1333 ಎಫ್ (ಹೈದರಾಬಾದು, ಅಧಿನಿಯಮ, 1333 ಎಫ್. ಯ IV);

(ಸಿ) ಮದ್ರಾಸು ಅಬ್ಕಾರಿ ಅಧಿನಿಯಮ, 1886 (ಮದ್ರಾಸು ಅಧಿನಿಯಮ, 1886ರ I); ಇವು ನಿರಸಿತವಾಗತಕ್ಕದು;

ಪರಂತು, [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899ರ ([1][ಕರ್ನಾಟಕ][1] ಅಧಿನಿಯಮ, 3, 1899) 6ನೆಯ ಪ್ರಕರಣವು ಅಂಥ ನಿರಸನದ ಬಗ್ಗೆ ಅನ್ವಯವಾಗತಕ್ಕುದು, ಮತ್ತು ಸದರಿ ಅಧಿನಿಯಮದ 8 ಮತ್ತು 24ನೆಯ ಪ್ರಕರಣಗಳ ಸದರಿ ಅಧಿನಿಯಮಗಳು ಉಕ್ತ ಅಧಿನಿಯಮದ ಅರ್ಥದಲ್ಲಿ ಅಧಿನಿಯಮಗಳಾಗಿದ್ದಂತೆ ಮತ್ತು ನಿರಸಿತವಾಗಿದ್ದು ಈ ಅಧಿನಿಯಮದ ಮೂಲಕ ಮತ್ತೆ ಅಧಿನಿಯಮಿತವಾದಂತೆ, ಅನ್ವಯವಾಗತಕ್ಕದ್ದು.

1.1973ರ ಕರ್ನಾಟಕ ಕಾನೂನು ಅಳವಡಿಕೆ ಆದೇಶದ ಮೂಲಕ ದಿನಾಂಕ:01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

## ಆರ್ಥಿಕ ಸಚಿವಾಲಯ

## ಅಧಿಸೂಚನೆ

### ಸಂಖ್ಯೆ: ಎಫ್‌ಡಿ 02 ಪಿಇಎಸ್. 2017, ಬೆಂಗಳೂರು, ದಿನಾಂಕ: 20.11.2017

ಕರ್ನಾಟಕ ಅಬಕಾರಿ ಅಧಿನಿಯಮ, 1965 (1966ರ ಕರ್ನಾಟಕ ಅಧಿನಿಯಮ 21)ರ 71ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ಅಬಕಾರಿ (ನೀರಾ) ನಿಯಮಗಳು, 2017ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮುಂದಿನ ನಿಯಮಗಳ ಕರಡನ್ನು, ಅಧಿಸೂಚನೆ ಸಂಖ್ಯೆ: ಎಫ್‌ಡಿ 02 ಪಿಇಎಸ್ 2017, ದಿನಾಂಕ 05.07.2017ರಲ್ಲಿ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ–IV–ಎ, ಸಂಖ್ಯೆ 644, ದಿನಾಂಕ: 05.07.2017ರಂದು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ.

ಮತ್ತು ಸದರಿ ರಾಜ್ಯಪತ್ರವನ್ನು 5ನೇ ಜೂನ್ 2017 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.

ಮತ್ತು, ಸದರಿ ಕರಡಿಗೆ ಸಂಬಂಧಿಸಿದಂತೆ ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ.

ಆದ್ದರಿಂದ ಈಗ, ಕರ್ನಾಟಕ ಅಬಕಾರಿ ಅಧಿನಿಯಮ, 1965 (1966ರ ಕರ್ನಾಟಕ ಅಧಿನಿಯಮ 21)ರ 71ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

**ನಿಯಮಗಳು**

1. **ಹೆಸರು ಮತ್ತು ಪ್ರಾರಂಭ.- (1)** ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ನೀರಾ) ನಿಯಮಗಳು, 2017 ಎಂದು ಕರೆಯತಕ್ಕದ್ದು.

(2) ಇವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.-(1)** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) **"ಅಧಿನಿಯಮ"** ಎಂದರೆ ಕರ್ನಾಟಕ ಅಬಕಾರಿ ಅಧಿನಿಯಮ, 1965 (1966ರ ಕರ್ನಾಟಕ ಅಧಿನಿಯಮ 21);

**(ಬಿ) "ಅರ್ಜಿದಾರ"** ಎಂದರೆ ತೆಂಗು ಉತ್ಪಾದಕರ ಕಂಪನಿ ಅಥವಾ ರೈತ ಉತ್ಪಾದಕರ ಸಂಘ;

(ಸಿ) **"ತೆಂಗು ಬೆಳೆಗಾರರು"** ಎಂದರೆ 5 ಆರೋಗ್ಯಕರವಾದ ತೆಂಗಿನ ಮರಗಳಿಗೆ ಕಡಿಮೆಯಿಲ್ಲದಂತೆ ಅವನು ತನ್ನ ಸ್ವಂತ ಜಮೀನಿನಲ್ಲಿ ತೆಂಗಿನ ಮರಗಳನ್ನು ಬೆಳೆಯುವ ವ್ಯಕ್ತಿ;

**(ಡಿ) "ತೆಂಗು ಅಭಿವೃದ್ಧಿ ಮಂಡಳಿ (ಸಿಡಿಬಿ)"** ಎಂದರೆ ತೆಂಗು ಅಭಿವೃದ್ಧಿ ಮಂಡಳಿ ಅಧಿನಿಯಮ, 1979ರ (1979ರ ಕೇಂದ್ರ ಅಧಿನಿಯಮ 5) ಅಡಿಯಲ್ಲಿ ಸ್ಥಾಪಿತವಾದ ಮಂಡಳಿ;

(ಇ) **"ತೆಂಗು ಉತ್ಪಾದಕರ ಕಂಪನಿ (ಸಿಪಿಸಿ)"** ಎಂದರೆ ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ನೋಂದಾಯಿಸಲಾದ ಅಥವಾ ನೊಂದಾಯಿಸಲಾಗಿದೆ ಎಂದು ಭಾವಿಸಲಾದ ಮತ್ತು ತರುವಾಯದಲ್ಲಿ ತೆಂಗು ಅಭಿವೃದ್ಧಿ ಮಂಡಳಿಯಲ್ಲಿ ನೊಂದಾಯಿತವಾದ ತೆಂಗು ಬೆಳೆಗಾರರ ಸಂಘದ ಒಂದು ಒಕ್ಕೂಟ;

**(ಎಫ್)"ಸಕ್ಷಮ ಪ್ರಾಧಿಕಾರ"** ಎಂದರೆ ಸಂಬಂಧಪಟ್ಟ ಜಿಲ್ಲೆಯ ಅಬಕಾರಿ ಉಪ-ಆಯುಕ್ತರು;

**(ಜಿ)" ರೈತ ಉತ್ಪಾದಕರ ಸಂಘ** (ಎಫ್‌ಪಿಓ)" ಎಂದರೆ ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ನೋಂದಾಯಿಸಲಾದ ಕನಿಷ್ಠ 1000 ತೆಂಗು ಬೆಳೆಗಾರರ ರೈತರನ್ನು ತನ್ನ ಸದಸ್ಯರನ್ನಾಗಿ ಹೊಂದಿರುವ ಒಂದು ಕಂಪನಿ;

**(ಹೆಚ್)"ನಮೂನೆ"** ಎಂದರೆ ಈ ನಿಯಮಗಳಿಗೆ ಸೇರಿಸಲಾದ ನಮೂನೆಗಳು;

(ಐ) **"ತೋಟಗಾರಿಕೆ ಇಲಾಖೆ"** ಎಂದರೆ ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆ;

**(ಜೆ)"ನೀರಾ ತಂತ್ರಜ್ಞ"** ಎಂದರೆ ತೋಟಗಾರಿಕೆ ಇಲಾಖೆ, ತೆಂಗು ಉತ್ಪಾದಕರ ಕಂಪನಿ ಅಥವಾ ತೆಂಗು ಅಭಿವೃದ್ಧಿ ಮಂಡಳಿ ಅಥವಾ ರೈತ ಉತ್ಪಾದಕರ ಸಂಘದ ಮೂಲಕ ಕ್ರಮಬದ್ಧವಾಗಿ ನೀರಾ ಇಳಿಸಲು ತರಬೇತಿ ಹೊಂದಿದ ವ್ಯಕ್ತಿ;

**(ಕೆ)"ಲೈಸನ್ಸ್"** ಎಂದರೆ ತೆಂಗಿನ ಮರಗಳಿಂದ ನೀರಾವನ್ನು ಇಳಿಸಲು ಮತ್ತು ಸಂಗ್ರಹಿಸುವುದಕ್ಕೆ ಮತ್ತು ನೀರಾದಿಂದ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆಗಾಗಿ ಹಾಗೂ ನೀರಾ ಮತ್ತು ಅದರ ಮೌಲ್ಯವರ್ಧಿತ ಉತ್ಪನ್ನಗಳ ವಿತರಣೆಗಾಗಿ ಸಕ್ಷಮ ಪ್ರಾಧಿಕಾರದಿಂದ ತೆಂಗು ಉತ್ಪಾದಕರ ಕಂಪನಿ ಅಥವಾ ರೈತ ಉತ್ಪಾದಕರ ಸಂಘಕ್ಕೆ ನೀಡಲಾದ ಅನುಮತಿ;

**(ಎಲ್) "ತೆಂಗಿನ ಮರಗಳಿಗೆ ತೆರಿಗೆ"** ಎಂದರೆ ಲೈಸನ್ಸ್ ಪಡೆದುಕೊಂಡಿರುವ ತೆಂಗಿನ ತೋಟದಲ್ಲಿ ಗುರುತು ಮಾಡುವ ಅಧಿಕಾರಿಯಿಂದ (ಕಂದಾಯ ನಿರೀಕ್ಷಕರ ದರ್ಜೆಗಿಂತ ಕಡಿಮೆಯಿರದ ಕಂದಾಯ ಅಧಿಕಾರಿ) ಗುರುತು ಮಾಡಿದ ಪ್ರತಿಯೊಂದು ತೆಂಗು ಮರಕ್ಕೆ ಸಂಬಂಧಿಸಿದಂತೆ ವಸೂಲು ಮಾಡಲು ನಿರ್ದಿಷ್ಟಪಡಿಸಲಾದ ಮೊತ್ತ;

**(ಎಮ್)"ಸಂಸ್ಕರಣೆ ಮತ್ತು ಸಂಗ್ರಹಣೆ ಘಟಕ"** ಎಂದರೆ ನೀರಾ ಮತ್ತು ಅದರ ಉತ್ಪನ್ನಗಳ ಸಂಸ್ಕರಣೆ ಮತ್ತು ಸಂಗ್ರಹಣೆಗಾಗಿ (ಕೋಲ್ಡ್‌ಸ್ಟೋರೇಜ್‌ನ್ನು ಒಳಗೊಂಡಂತೆ) ಲೈಸನ್ಸ್‌ನಲ್ಲಿ ನಿರ್ಧಿಷ್ಟಪಡಿಸಲಾದ ಕೊಠಡಿ ಅಥವಾ ಕಟ್ಟಡ;

**(ಎನ್) "ಮರ"** ಎಂದರೆ ತೆಂಗಿನ ಮರ;

(ಓ) **"ಮೌಲ್ಯವರ್ಧಿತ ಉತ್ಪನ್ನಗಳು"** ನೀರಾದಿಂದಪ್ಯಾಕ್ ಮಾಡಿದ ನೀರಾ, ಕೋಲ್ಡ್ ಚೈನ್ (ಶೀತಲ ಸರಪಳಿ) ಮೂಲಕ ಇಳಿಸಿದ ತಾಜಾ ನೀರಾ, ನೀರಾ ಪಾಕ (ಸಿರಪ್), ನೀರಾ ಜೇನು, ನೀರಾ ಬೆಲ್ಲ, ನೀರಾ ಬಿಸ್ಕತ್ತುಗಳು, ನೀರಾ ಚಾಕೊಲೇಟ್‌ಗಳು, ನೀರಾ ಕ್ಯಾಂಡಿ ಮತ್ತು ನೀರಾ ಸಕ್ಕರೆ ಅಥವಾ ನೀರಾ ಅಥವಾ ನೀರಾಸಾರ ಅಥವಾ ನೀರಾ ಸಕ್ಕರೆ ಅಂಶವನ್ನುಳ್ಳ ಯಾವುದೇ ಇತರೆ ಉತ್ಪನ್ನಗಳು;

**(2)** ಇದರಲ್ಲಿ ಬಳಸಲಾದ ಆದರೆ ಈ ನಿಯಮಗಳಲ್ಲಿ ಪರಿಭಾಷಿಸದೆ ಇರುವ ಎಲ್ಲಾ ಇತರ ಪದಗಳು ಮತ್ತು ಪದಾವಳಿಗಳು ಅಧಿನಿಯಮ ಮತ್ತು ಇವುಗಳ ಅಡಿಯಲ್ಲಿ ರಚಿಸಲಾದ ಇತರ ನಿಯಮಗಳ ಮೇರೆಗೆ ಅವುಗಳಿಗೆ ಅನುಕ್ರಮವಾಗಿ ಗೊತ್ತುಪಡಿಸಿರುವ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**3. ಲೈಸನ್ಸ್ ನೀಡುವುದು.**–(1) ಅರ್ಜಿದಾರನು ಒಂದು ಸಾವಿರ ರೂಪಾಯಿಗಳ ವಾರ್ಷಿಕ ಲೈಸನ್ಸ್ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ನೀರಾ ಇಳಿಸಲು, ಉತ್ಪಾದಿಸಲು, ಪಡೆಯಲು ಮತ್ತು ಸಂಸ್ಕರಿಸಲು ಹಾಗೂ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸಲು ವಿಶೇಷ ಹಕ್ಕುಗಳಿಗಾಗಿ ಸಕ್ಷಮ ಪ್ರಾಧಿಕಾರದಿಂದ ಈ ನಿಯಮಗಳ ಅಡಿಯಲ್ಲಿ ಲೈಸನ್ಸ್‌ನ್ನು ನೀಡತಕ್ಕದ್ದು.

(2) ತೆಂಗು ಉತ್ಪಾದಕರ ಕಂಪನಿ ಅಥವಾ ರೈತ ಉತ್ಪಾದಕರ ಸಂಘವನ್ನಲ್ಲದೆ ಹೊರತುಪಡಿಸಿ ನೀರಾ ಇಳಿಸಲು, ಉತ್ಪಾದಿಸಲು, ಸಂಸ್ಕರಿಸಲು, ವಿತರಣೆ ಮಾಡಲು ಅಥವಾ ಪಡೆದು ಕೊಳ್ಳಲು ಲೈಸನ್ಸಿಗಾಗಿ ಯಾವುದೇ ವ್ಯಕ್ತಿ ಅರ್ಹನಾಗಿರತಕ್ಕದ್ದಲ್ಲ.

(3) ಅರ್ಜಿದಾರನು ಒಂದು ಸಾವಿರ ರೂಪಾಯಿಗಳ ವಾರ್ಷಿಕ ಲೈಸನ್ಸ್ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ನೀರಾ ಮತ್ತು ಅದರ ಮೌಲ್ಯವರ್ಧಿತ ಉತ್ಪನ್ನಗಳ ವಿತರಣೆಗಾಗಿ ಸಕ್ಷಮ ಪ್ರಾಧಿಕಾರವು ಈ ನಿಯಮಗಳ ಅಡಿಯಲ್ಲಿ ಲೈಸನ್ಸ್‌ನ್ನು ನೀಡತಕ್ಕದ್ದು.

(4) ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಷರತ್ತುಗಳಿಗೆ ಒಳಪಟ್ಟು, ಹಣಕಾಸು ವರ್ಷದ ಅವಧಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ನೀಡಬೇಕಾದ ಲೈಸನ್ಸ್‌ಗಳ ಸಂಖ್ಯೆಯನ್ನು ಘೋಷಿಸುವ ಹಕ್ಕನ್ನು ಸರ್ಕಾರವು ಕಾಯ್ದಿರಿಸಿಕೊಂಡಿದೆ.

(5) ಈ ನಿಯಮಗಳ ಅಡಿಯಲ್ಲಿ ನೀಡಲಾಗಿರುವ ಎಲ್ಲಾ ಲೈಸನ್ಸ್‌ಗಳು ಏಪ್ರಿಲ್ 1ನೇ ದಿನದಿಂದ ತದನಂತರ ಬರುವ ವರ್ಷದ ಮಾರ್ಚ್ 31ನೇ ದಿನದವರೆಗೆ ಜಾರಿಯಲ್ಲಿರತಕ್ಕದ್ದು. ಲೈಸನ್ಸ್‌ನ್ನು ಏಪ್ರಿಲ್ ಮೊದಲ ದಿನದ ನಂತರ ಯಾವುದೇ ದಿನದಂದು ಪಡೆದುಕೊಂಡಿದ್ದರೆ, ಇದು ಹಣಕಾಸು ವರ್ಷದ ಮಾರ್ಚ್ 31ನೇ ದಿನದವರೆಗೆ ಸಿಂಧುವಾಗಿರತಕ್ಕದ್ದು.

(6) ಅರ್ಜಿದಾರನನ್ನು ಹೊರತುಪಡಿಸಿ ಯಾವುದೇ ನೀರಾ ಇಳಿಸುವ ಸಂಘಕ್ಕೆ ಅಥವಾ ಅಂಥ ಸಂಘದ ಯಾವುದೇ ನೀರಾ ಇಳಿಸುವ ನಿಯೋಜಿತನಿಗೆ ಅಥವಾ ವ್ಯಕ್ತಿಗಳಿಗೆ ನೀರಾ ಇಳಿಸುವುದಕ್ಕೆ ಲೈಸನ್ಸ್‌ನ್ನು ನೀಡತಕ್ಕದ್ದಲ್ಲ.

(7) ನೀರಾ ಅಥವಾ ಅದರ ಮೌಲ್ಯವರ್ಧಿತ ಉತ್ಪನ್ನಗಳನ್ನು ಈ ನಿಯಮಗಳ ಅಡಿಯಲ್ಲಿ ಲೈಸನ್ಸ್‌ನ್ನು ಪಡೆಯದೆ ತಯಾರಿಸತಕ್ಕದ್ದಲ್ಲ ಅಥವಾ ವಿತರಣೆ ಮಾಡತಕ್ಕದ್ದಲ್ಲ.

**4. ಲೈಸನ್ಸ್ ನೀಡುವುದಕ್ಕಾಗಿ ಷರತ್ತುಗಳು.**– (1) ಯಾರೇ ಅರ್ಜಿದಾರನು, ಕರ್ನಾಟಕ ಅಬಕಾರಿ ಅಧಿನಿಯಮ, 1965 ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳ ಮೇರೆಗೆ ಅಥವಾ ಯಾವುದೇ ಇತರ ಕ್ರಿಮಿನಲ್ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಮತ್ತು ಆತನಿಗೆ ಮೂರು ವರ್ಷಗಳಿಗಿಂತ ಹೆಚ್ಚಾಗಿ ಕಾರಾವಾಸ ಶಿಕ್ಷೆ ವಿಧಿಸಿದ್ದರೆ, ಆತನು ವಿಶೇಷ ಸೌಲಭ್ಯಕ್ಕಾಗಿ ಅರ್ಹನಾಗಿರತಕ್ಕದ್ದಲ್ಲ.

(2) ನೀರಾ ಇಳಿಸುವ, ಉತ್ಪಾದಿಸುವ, ಪಡೆಯುವ ಮತ್ತು ಸಂಸ್ಕರಿಸುವ ಹಾಗೂ ಮೌಲ್ಯವರ್ಧಿತ ಉತ್ಪನ್ನಗಳ ಉತ್ಪಾದನೆಯ ವಿಶೇಷ ಸೌಲಭ್ಯಗಳಿಗಾಗಿ ಲೈಸನ್ಸ್ ನೀಡುವುದಕ್ಕೆ ಅರ್ಜಿಯನ್ನು ನಮೂನೆ–I ರಲ್ಲಿ ಸಲ್ಲಿಸತಕ್ಕದ್ದು ಮತ್ತು ನೀರಾ ವಿತರಣೆಗಾಗಿ, ನೀರಾದಿಂದ ಮೌಲ್ಯವರ್ಧಿತ ಉತ್ಪನ್ನಗಳಿಗಾಗಿ ನಮೂನೆ IIIರಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಸಕ್ಷಮ ಪ್ರಾಧಿಕಾರವು ಅರ್ಜಿಯನ್ನು ಪರಿಶೀಲಿಸತಕ್ಕದ್ದು ಮತ್ತು ಲೈಸನ್ಸ್ ನೀಡುವುದಕ್ಕಾಗಿ ನಿರ್ದಿಷ್ಟಪಡಿಸಲಾದ ಷರತ್ತುಗಳನ್ನು ಪಾಲಿಸಲಾಗಿದೆ ಎಂದು ಕಂಡುಬಂದರೆ, ನಮೂನೆ IIರಲ್ಲಿ ನೀರಾ ಇಳಿಸುವ, ಉತ್ಪಾದಿಸುವ, ಪಡೆಯುವ ಮತ್ತು ಸಂಸ್ಕರಿಸುವ ವಿಶೇಷ ಸೌಲಭ್ಯಗಳಿಗಾಗಿ ಹಾಗೂ ಮೌಲ್ಯವರ್ಧಿತ ಉತ್ಪನ್ನಗಳ ಉತ್ಪಾದನೆಗಾಗಿ ಲೈಸನ್ಸ್‌ನ್ನು ನೀಡಬಹುದು ಮತ್ತು ನೀರಾ ಹಾಗೂ ಅದರ ಮೌಲ್ಯವರ್ಧಿತ ಉತ್ಪನ್ನಗಳ ವಿತರಣೆ ಸೌಲಭ್ಯಕ್ಕಾಗಿ ನಮೂನೆ IVರಲ್ಲಿ ಲೈಸನ್ಸ್‌ನ್ನು ನೀಡಬಹುದು. ಸಕ್ಷಮ ಪ್ರಾಧಿಕಾರವು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸುವ ಮೂಲಕ ಅರ್ಜಿಯನ್ನು ತಿರಸ್ಕರಿಸುಬಹುದು.

(3) ತೆಂಗು ಉತ್ಪಾದಕರ ಕಂಪನಿ ಅಥವಾ ರೈತ ಉತ್ಪಾದಕರ ಸಂಘಗಳು ನೀರಾ ಸಂಸ್ಕರಣಾ ಘಟಕ ಅಥವಾ ಶೀತಲ ಸರಪಳಿ (Cold chain) ಸ್ಥಾಪಿಸುವುದಕ್ಕಿಂತ ಮೊದಲು ಅಬಕಾರಿ ಇಲಾಖೆಯಿಂದ ತಾತ್ವಿಕ ಅನುಮೋದನೆಯನ್ನು ಪಡೆಯತಕ್ಕದ್ದು.

(4) ಯಾವುದೇ ತೆಂಗು ಉತ್ಪಾದಕರ ಕಂಪನಿ ಅಥವಾ ರೈತ ಉತ್ಪಾದಕರ ಸಂಘಗಳು ಅವರು ನೀರಾ ಸಂಸ್ಕರಣಾ ಘಟಕ ಅಥವಾ ಶೀತಲ ಸರಪಳಿ (Cold chain)ಯನ್ನು ಸ್ಥಾಪಿಸಿದಾಗ ಮಾತ್ರ ಲೈಸನ್ಸ್‌ನ್ನು ನೀಡತಕ್ಕದ್ದು.

(5) ನೀರಾ ಇಳಿಸುವುದಕ್ಕಾಗಿ ತೆಂಗಿನ ಮರಗಳನ್ನು ಗೊತ್ತುಪಡಿಸುವುದು ಮತ್ತು ಗುರುತು ಮಾಡುವುದು ಕರ್ನಾಟಕ ಅಬಕಾರಿ (ಮರಗಳ ನೀರಾ ಇಳಿಸಲು) ನಿಯಮಗಳು, 1991ರ ಅನುಸಾರವಾಗಿರತಕ್ಕದ್ದು.

(6) ನೀರಾ ಇಳಿಸಲು/ ಸಂಗ್ರಹಿಸಲು ನೀರಾ ತಂತ್ರಜ್ಞರನ್ನು ಮಾತ್ರ ಲೈಸನ್ಸ್‌ದಾರನು ನೇಮಿಸತಕ್ಕದ್ದು.

(7) ಮರಗಳಿಂದ ನೀರಾ ಇಳಿಸುವ ಉದ್ದೇಶಕ್ಕಾಗಿ ಗುರುತು ಮಾಡಲಾದ ಪ್ರತಿಯೊಂದು ಮರದ ಮೇಲೆ ಹತ್ತು ರೂಪಾಯಿಗಳ ತೆಂಗಿನ ಮರದ ತೆರಿಗೆಯನ್ನು ವಿಧಿಸತಕ್ಕದ್ದು.

(8) ನೀರಾವನ್ನು ಇಳಿಸಲು, ಸಾಗಿಸಲು ಮತ್ತು ಸಂಸ್ಕರಿಸಲು ಅಳವಡಿಸಿಕೊಂಡ ತಂತ್ರಜ್ಞಾನವು, ತೋಟಗಾರಿಕೆ ಇಲಾಖೆಯಿಂದ ನಿರ್ದಿಷ್ಟಪಡಿಸಲಾದಂತೆ ಮತ್ತು ಅನುಮೋದಿಸಿದಂತೆ ಇರತಕ್ಕದ್ದು.

(9) ಉತ್ಪಾದಿಸಿದ ನೀರಾದ ಗುಣಮಟ್ಟವು, ತೋಟಗಾರಿಕೆ ಇಲಾಖೆಯು ನೀರಾದ ಗುಣಮಟ್ಟಕ್ಕಾಗಿ ಅಳವಡಿಸಿಕೊಂಡಿರುವ ಮಾನದಂಡಗಳ ಪ್ರಕಾರ ಇರತಕ್ಕದ್ದು.

(10) ಮರಗಳಿಂದ ನೀರಾ ಇಳಿಸಲು ಪ್ರಾರಂಭಿಸುವುದಕ್ಕಿಂತ ಮುಂಚೆ ಕನಿಷ್ಠಪಕ್ಷ ಒಂದು ತಿಂಗಳ ಮೊದಲೆ ಲೈಸನ್ಸ್ ಅನುಮೋದನೆಗಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

(11) ಈಗಾಗಲೇ ನೀಡಲಾದ ಲೈಸನ್ಸ್ ಅವಧಿಯು ಮುಕ್ತಾಯಗೊಳ್ಳುವುದಕ್ಕಿಂತ ಒಂದು ತಿಂಗಳ ಮೊದಲೆ ಲೈಸನ್ಸ್ ನವೀಕರಣಕ್ಕಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

(12) ಲೈಸನ್ಸ್ ನೀಡಲು ಅಥವಾ ನವೀಕರಣಕ್ಕಾಗಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಅವಶ್ಯವೆಂದು ಭಾವಿಸುವಂಥ ಇತರೆ ವಿವರಗಳನ್ನು ಸಕ್ಷಮ ಪ್ರಾಧಿಕಾರವು ಅಗತ್ಯಪಡಿಸಬಹುದು ಮತ್ತು ಅರ್ಜಿದಾರನು ನೀಡಲಾದ ವಿವರಣೆಗಳ ಪರಿಶೀಲನೆಗಾಗಿ ಅವರು ಸೂಕ್ತವೆಂದು ಭಾವಿಸುವಂಥ ಇತರೆ ಎಲ್ಲ ವಿಚಾರಣೆಗಳನ್ನು ಮಾಡಬಹುದು. ಯಾವುದೇ ಸಂದರ್ಭದಲ್ಲಿ, ಅಬಕಾರಿ ಉಪ-ಆಯುಕ್ತರು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಕೆಲಸದ ದಿನದ ಹದಿನೈದು ದಿನಗಳ ಒಳಗಾಗಿ ಲೈಸನ್ಸ್ ನೀಡಲು ಅಥವಾ ಸಂದರ್ಭಾನುಸಾರವಾಗಿ ನವೀಕರಣಕ್ಕಾಗಿ ನಿರ್ಧಾರವನ್ನು ತೆಗೆದುಕೊಳ್ಳತಕ್ಕದ್ದು.

(13) ಅಂಥ ಲೈಸನ್ಸ್‌ನ ಚಾಲ್ತಿಯಲ್ಲಿರುವ ಅವಧಿಯನ್ನು ಹೊರತುಪಡಿಸಿ ನೀರಾವನ್ನು ತೆಗೆಯತಕ್ಕದ್ದಲ್ಲ.

(14) ಲೈಸನ್ಸ್‌ದಾರನು ಅಥವಾ ಅವನ ಅಧಿಕೃತ ಪ್ರತಿನಿಧಿಗಳು ನೀರಾ ಇಳಿಸುವುದಕ್ಕೆ ಲೈಸನ್ಸ್ ನೀಡಲಾಗಿರುವ ಮರಗಳ ಸಂಖ್ಯೆಗಿಂತ ಹೆಚ್ಚಿನದಾಗಿ ಯಾವುದೇ ಮರದಿಂದ ನೀರಾ ಇಳಿಸತಕ್ಕದ್ದಲ್ಲ.

(15) ಈ ನಿಯಮಗಳ ಅನುಸಾರವಾಗಿ ಅಧಿಕೃತ ಅಧಿಕಾರಿಯಿಂದ ಮರಗಳನ್ನು ಗುರುತಿಸಲ್ಪಡುವವರೆಗೂ ನೀರಾ ಇಳಿಸುವ ಉದ್ದೇಶಕ್ಕಾಗಿ ಕಟ್ಟಿದ ಯಾವುದೇ ಮರದಿಂದ ಅಥವಾ ಯಾವುದೇ ಬಿಂದಿಗೆ/ ಪಾತ್ರೆಗಳಿಂದ ನೀರಾ ತೆಗೆಯತಕ್ಕದ್ದಲ್ಲ ಮತ್ತು ಮರದಿಂದ ನೀರಾವನ್ನು ಇಳಿಸತಕ್ಕದ್ದಲ್ಲ.

(16) ಸಂಸ್ಕರಣಾ ಘಟಕ ಮತ್ತು ವಿತರಣಾ ಕೇಂದ್ರಕ್ಕೆ ನೀರಾವನ್ನು ಸಾಗಿಸುವುದು ಕಂಪನಿಯ ಜವಾಬ್ದಾರಿಯಾಗಿರುತ್ತದೆ.

(17) ನೀರಾವನ್ನು ಸೇಂದಿಯನ್ನಾಗಿ ಪರಿವರ್ತಿಸಲಾಗಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಲೈಸನ್ಸ್‌ದಾರನ ಜವಾಬ್ದಾರಿಯಾಗಿರತಕ್ಕದ್ದು.

(18) ಈ ನಿಯಮಗಳ ಯಾವುದೇ ಉಪಬಂಧಗಳ ಉಲ್ಲಂಘನೆಯು ಕರ್ನಾಟಕ ಅಬಕಾರಿ ಅಧಿನಿಯಮ, 1965ರ ಅಡಿಯಲ್ಲಿ ಅಪರಾಧವಾಗಿರುತ್ತದೆ ಮತ್ತು ಅದು ಅಧಿನಿಯಮದ 32ನೇ ಪ್ರಕರಣದ (4)ನೇ ಉಪ-ಪ್ರಕರಣದ ಅಡಿಯಲ್ಲಿ ಶಿಕ್ಷಾರ್ಹವಾಗಿರುತ್ತದೆ.

**5. ಸಂಸ್ಕರಣಾ ಘಟಕದಿಂದ ನೀರಾದ ಮಾದರಿಗಳನ್ನು ತೆಗೆದುಕೊಳ್ಳುವುದಕ್ಕೆ ಕಾರ್ಯ ವಿಧಾನಗಳು.**-(1) ಲೈಸನ್ಸ್‌ನ್ನು ಹೊಂದಿರುವ ವ್ಯಕ್ತಿಗಳಿಂದ ನೀರಾ ಮಾದರಿಗಳ ಗುಣಮಟ್ಟವನ್ನು ಪರೀಕ್ಷಿಸುವುದಕ್ಕಾಗಿ ನಿಯತಕಾಲಿಕವಾಗಿ ತೆಗೆದುಕೊಳ್ಳತಕ್ಕದ್ದು.

(2) ಅಧಿಕಾರವ್ಯಾಪ್ತಿಯ ಅಬಕಾರಿ ಉಪ-ನೀರಿಕ್ಷಕರ (ಸಬ್‌ಇನ್ಸ್‌ಪೆಕ್ಟರ್) ದರ್ಜೆಗಿಂತ ಕಡಿಮೆಯಿರದ ಅಬಕಾರಿ ಅಧಿಕಾರಿಯು, ತೆಗೆಯಲ್ಪಟ್ಟ ತಾಜಾ ನೀರಾದಿಂದ, ಶೇಖರಣಾ ಘಟಕದಲ್ಲಿ ಸಿದ್ದಪಡಿಸಿ ಇಟ್ಟ ಸಂಸ್ಕರಿಸಿದ ನೀರಾದಿಂದ

ಮತ್ತು ನೀರಾವನ್ನು ಮಾರಾಟ ಮಾಡಿದ ಘಟಕದಿಂದಲೂ ಸಹ ಮಾದರಿಗಳನ್ನು ಯಾವುದೇ ಸಮಯದಲ್ಲಿ ತೆಗೆದುಕೊಳ್ಳಬಹುದು ಮತ್ತು ಮಾನ್ಯತೆಪಡೆದ ಗುಣಮಟ್ಟದ ನಿಯಂತ್ರಿತ ಪ್ರಯೋಗಾಲಯಗಳಲ್ಲಿ ಇದನ್ನು ರಾಸಾಯನಿಕ ವಿಶ್ಲೇಷಣೆಗಳಿಗೊಳಪಡಿಸಿ, ಇದು ಮಾನವ ಬಳಕೆಗೆ ಸೂಕ್ತವಾಗಿದೆ ಮತ್ತು ಯಾವುದೇ ಆಲ್ಕೊಹಾಲ್ ಅಂಶವನ್ನು ಒಳಗೊಂಡಿರುವುದಿಲ್ಲ ಎಂದು ಖಚಿತಪಡಿಸಿಕೊಳ್ಳುವುದು. ಪ್ರತಿಯೊಂದು ಮಾದರಿಯನ್ನು 'ಎ', 'ಬಿ', ಮತ್ತು 'ಸಿ' ಎಂದು ಚೀಟಿ ಅಂಟಿಸಿದ ಮೂರು ಪ್ರತಿ (ಪ್ರತ್ಯೇಕವಾಗಿ ಮೂರು ಬಾಟಲಿಗಳಲ್ಲಿ)ಯಲ್ಲಿ ತೆಗೆದುಕೊಳ್ಳತಕ್ಕದ್ದು. ಪ್ರತಿ ಬಾಟಲಿಯಲ್ಲಿ 300 ಮಿ.ಲೀ ನೀರಾವನ್ನು ಸಂಗ್ರಹಿಸತಕ್ಕದ್ದು. 'ಎ'ಎಂದು ಗುರುತಿಸಲಾಗಿರುವ ಬಾಟಲ್‌ನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಮಾನ್ಯತೆ ಪಡೆದ ಗುಣಮಟ್ಟದ ನಿಯಂತ್ರಣ ಪ್ರಯೋಗಾಲಯಕ್ಕೆ ಕಳುಹಿಸತಕ್ಕದ್ದು, 'ಬಿ' ಮಾದರಿಯನ್ನು ಕೋಲ್ಡ್‌ಸ್ಟೋರೇಜ್ (ಶೈತ್ಯಾಗಾರ)ನಲ್ಲಿ ಸುರಕ್ಷಿತವಾದ ಅಭಿರಕ್ಷೆಯಲ್ಲಿ ಇರಿಸಿಕೊಳ್ಳಲು ಲೈಸನ್ಸ್‌ದಾರರಿಗೆ ಹಸ್ತಾಂತರಿಸತಕ್ಕದ್ದು ಮತ್ತು 'ಸಿ' ಮಾದರಿಯನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ (ಶೈತ್ಯಾಗಾರ) ಅವರ ಪರವಾಗಿ ಇಡುವುದಕ್ಕಾಗಿ ಲೈಸನ್ಸ್‌ದಾರನಿಗೆ ಅಧಿಕಾರವ್ಯಾಪ್ತಿಯ ಅಬಕಾರಿ ಸಬ್-ಇನ್ಸ್‌ಪೆಕ್ಟರ್ ಮೂಲಕ ಹಸ್ತಾಂತರಿಸತಕ್ಕದ್ದು. ಮಾದರಿಗಳನ್ನು ತೆಗೆದುಕೊಳ್ಳುವಾಗ, ಸಂಬಂಧಪಟ್ಟ ಅಧಿಕಾರಿಯ ಮೊಹರಿನೊಂದಿಗೆ, ಲೈಸನ್ಸ್‌ದಾರನ ಅಥವಾ ಅವನ ಪ್ರತಿನಿಧಿಗಳ ಮೊಹರನ್ನೂ ಸಹ ಹಾಕತಕ್ಕದ್ದು.

**6. ಲೈಸನ್ಸ್ ನವೀಕರಣ, ತಡೆಹಿಡಿಯುವುದು ಅಥವಾ ರದ್ದುಪಡಿಸುವುದು.–** (1) ಸಕ್ಷಮ ಪ್ರಾಧಿಕಾರವು ಈ ನಿಯಮಗಳ ಅಡಿಯಲ್ಲಿ ನೀಡಲಾದ ಲೈಸನ್ಸ್‌ನ ನವೀಕರಣ ಮಾಡುವುದಕ್ಕೆ ಸಕ್ಷಮವಾಗಿರತಕ್ಕದ್ದು.

(2) ಕರ್ನಾಟಕ ಅಬಕಾರಿ ಅಧಿನಿಯಮ, 1965ರ ಯಾವುದೇ ಉಪಬಂಧಗಳು ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳು ಅಥವಾ ಲೈಸನ್ಸ್‌ನ ಷರತ್ತುಗಳನ್ನು ಲೈಸನ್ಸ್‌ದಾರನು ಅಥವಾ ಆತನ ನಿಯೋಜನೆಯಲ್ಲಿರುವ ಯಾರೇ ವ್ಯಕ್ತಿ ಉಲ್ಲಂಘಿಸಿದ್ದಲ್ಲಿ, ಸಕ್ಷಮ ಪ್ರಾಧಿಕಾರವು ಲೈಸೆನ್ಸನ್ನು ತಡೆಹಿಡಿಯಬಹುದು ಅಥವಾ ರದ್ದುಗೊಳಿಸಬಹುದು ಮತ್ತು ಲೈಸನ್ಸ್‌ದಾರನು ಅಮಾನತುಗೊಳಿಸಿರುವ ಅವಧಿಗಾಗಿ ಅಥವಾ ಲೈಸನ್ಸ್‌ನ ಉಳಿದಿರುವ ಅವಧಿಗಾಗಿ ಯಾವುದೇ ಪರಿಹಾರವನ್ನು ಕ್ಲೇಮು ಮಾಡುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ:

ಪರಂತು, ಲೈಸನ್ಸ್‌ದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತವಾದ ಅವಕಾಶವನ್ನು ನೀಡದ ಹೊರತು ಯಾವುದೇ ಅಂಥ ತಡೆಹಿಡಿಯುವ ಅಥವಾ ರದ್ಧತಿಯ ಆದೇಶವನ್ನು ಹೊರಡಿಸತಕ್ಕದ್ದಲ್ಲ:

ಮತ್ತೂ ಪರಂತು, ಲೈಸನ್ಸ್‌ನ್ನು ತಡೆಹಿಡಿಯುವುದು ಅಥವಾ ರದ್ದುಗೊಳಿಸುವುದರ ಜೊತೆಗೆ, ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ಅಧಿನಿಯಮದ 32ನೇ ಪ್ರಕರಣದ (4)ನೇ ಉಪ-ಪ್ರಕರಣದ ಅನುಸಾರವಾಗಿ ಅಂಥ ಲೈಸನ್ಸ್‌ದಾರನ ಅಥವಾ ಆತನ ನಿಯೋಜನೆಯ ಯಾರೇ ವ್ಯಕ್ತಿಯ ವಿರುದ್ಧ ಕ್ರಮ ಜರುಗಿಸಬಹುದು.

**7. ಸಂಶೋಧನಾ ಉದ್ದೇಶಗಳಿಗಾಗಿ ಲೈಸನ್ಸ್.–**ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಅಬಕಾರಿ ಉಪ-ಆಯುಕ್ತರು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಲಾದ ಅಂಥ ಷರತ್ತುಗಳಿಗೊಳಪಟ್ಟು, ಸಂಶೋಧನಾ ಉದ್ದೇಶಗಳಿಗಾಗಿ ನೀರಾವನ್ನು ಇಳಿಸುವುದಕ್ಕೆ ಲೈಸನ್‌ನ್ನು ನೀಡುವುದಕ್ಕೆ ಅಬಕಾರಿ ಉಪ-ಆಯುಕ್ತರು ಅನುಮತಿಯನ್ನು ನೀಡಬಹುದು.

**8.ದಂಡ ಮತ್ತು ಶಿಕ್ಷೆ.–** (1) ಈ ನಿಯಮಗಳನ್ನು ಅಥವಾ ಅದರ ಅಡಿಯಲ್ಲಿ ಹೊರಡಿಸಲಾದ ಯಾವುದೇ ಆದೇಶವನ್ನು ಉಲ್ಲಂಘಿಸಿ ನೀರಾ ಅಥವಾ ಅದರ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸುವವರು ಅಥವಾ ತಯಾರಿಸುವುದಕ್ಕೆ ಕಾರಣಕರ್ತರಾದವರು ಯಾರೇ ಇರಲಿ ಅವರನ್ನು ಅಧಿನಿಯಮದ 32ನೇ ಪ್ರಕರಣದ (4)ನೇ ಉಪ-ಪ್ರಕರಣದ ಅಡಿಯಲ್ಲಿ ಶಿಕ್ಷಿಸತಕ್ಕದ್ದು. ಅಂಥ ಅಪರಾಧಿಗೆ ಪ್ರಥಮ ವರ್ಗದ ನ್ಯಾಯಿಕ ಮ್ಯಾಜಿಸ್ಟ್ರೇಟ್ (JMFC) ನ್ಯಾಯಾಲಯದ ಅಧಿಕಾರವ್ಯಾಪ್ತಿಯ ಸಮ್ಮುಖದಲ್ಲಿ ಕಾನೂನುಕ್ರಮ ಜರುಗಿಸಬಹುದು.

(2) ದಂಡ ವಿಧಿಸುವಿಕೆ ಅಥವಾ ಲೈಸನ್ಸ್ ರದ್ಧತಿ ಮಾಡಿದ್ದಾಗ್ಯೂ, ಅಧಿನಿಯಮ ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳ ಉಪಬಂಧಗಳ ವಿರುದ್ಧವಾಗಿ ನೀರಾವನ್ನು ಸೇಂದಿಯನ್ನಾಗಿ ಪರಿವರ್ತಿಸುವ ಸಂದರ್ಭದಲ್ಲಿ ಕಾನೂನುಕ್ರಮ ಜರುಗಿಸಲು ಹೊಣೆಗಾರನಾಗಿರುವುದರಿಂದ ಲೈಸನ್ಸ್‌ದಾರ ಅಥವಾ ಅವನ ಏಜೆಂಟ್ ಮುಕ್ತವಾಗುವುದಿಲ್ಲ.

**9. ಅಪೀಲುಗಳು.–** (1) ಈ ನಿಯಮಗಳ ಅಡಿಯಲ್ಲಿ ಅಬಕಾರಿ ಉಪ-ಆಯುಕ್ತರ ಆದೇಶದ ವಿರುದ್ಧದ ಅಪೀಲನ್ನು, ಪ್ರಶ್ನಿತ ಆದೇಶವನ್ನು ಮಾಡಿದ ದಿನಾಂಕದಿಂದ ತೊಂಬತ್ತು ದಿನಗಳ ಒಳಗಾಗಿ ಉಪ-ಆಯುಕ್ತರಿಗೆ ಸಲ್ಲಿಸತಕ್ಕದ್ದು.

(2) ಈ ನಿಯಮಗಳ ಅಡಿಯಲ್ಲಿ ಉಪ-ಆಯುಕ್ತರ ಆದೇಶದ ವಿರುದ್ಧದ ಅಪೀಲನ್ನು, ಪ್ರಶ್ನಿತ ಆದೇಶವನ್ನು ಮಾಡಿದ ದಿನಾಂಕದಿಂದ ತೊಂಬತ್ತು ದಿನಗಳ ಒಳಗಾಗಿ ಅಬಕಾರಿ ಆಯುಕ್ತರಿಗೆ ಸಲ್ಲಿಸತಕ್ಕದ್ದು

(3) ಅಬಕಾರಿ ಆಯುಕ್ತರು ಮಾಡಿದ ಆದೇಶದ ವಿರುದ್ಧದ ಅಪೀಲನು, ಪ್ರಶ್ನಿತ ಆದೇಶವನ್ನು ಮಾಡಿದ ದಿನಾಂಕದಿಂದ ತೊಂಬತ್ತು ದಿನಗಳ ಒಳಗಾಗಿ ಕರ್ನಾಟಕ ಕಂದಾಯ ಅಪೀಲು ನ್ಯಾಯಾಧೀಕರಣಕ್ಕೆ ಸಲ್ಲಿಸತಕ್ಕದ್ದು:

ಪರಂತು, ಸಂದರ್ಭಾನುಸಾರ ಉಪ–ಆಯುಕ್ತರು ಅಥವಾ ಅಬಕಾರಿ ಆಯುಕ್ತರು ಅಥವಾ ಕರ್ನಾಟಕ ಕಂದಾಯ ಅಪೀಲು ನ್ಯಾಯಾಧೀಕರಣಕ್ಕೆ ತೋರಿಸುವುದಕ್ಕೆ ಸಾಕಷ್ಟು ಕಾರಣಗಳಿವೆಯೆಂದು ಮನಗಂಡರೆ, ಸಂಬಂಧಪಟ್ಟ ಪಕ್ಷಕಾರನು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯು ಮೀರದಂತೆ ಅಪೀಲುಗಳನ್ನು ಸಂದರ್ಭಾನುಸಾರ, ಉಪ–ಆಯುಕ್ತರು ಅಥವಾ ಅಬಕಾರಿ ಆಯುಕ್ತರು ಅಥವಾ ಕರ್ನಾಟಕ ಕಂದಾಯ ಅಪೀಲು ನ್ಯಾಯಾಧೀಕರಣವು ಪುರಸ್ಕರಿಸಬಹುದು.

## ನಮೂನೆ I

(4ನೇ ನಿಯಮದ (2)ನೇ ಉಪ–ನಿಯಮವನ್ನು ನೋಡಿ)

**ನೀರಾ ಇಳಿಸಲು, ಉತ್ಪಾದನೆ, ಸ್ವಾಧೀನ, ಸಂಸ್ಕರಣೆ /ಮೌಲ್ಯವರ್ಧಿತ ಉತ್ಪನ್ನಗಳ ಉತ್ಪಾದನೆ ಮಾಡಲು ವಿಶೇಷ ಸೌಲಭ್ಯಗಳನ್ನು ಪಡೆದುಕೊಳ್ಳುವುದಕ್ಕಾಗಿ ಅರ್ಜಿ**

(1) ಲೈಸನ್ಸ್‌ಗಾಗಿ ಅರ್ಜಿಯನ್ನು ಸಲ್ಲಿಸುವ ಸಿಪಿಸಿ/ ಎಫ್‌ಪಿಓ ಹೆಸರು :

(2) ಲೈಸನ್ಸ್ ನೀಡುವ ಉದ್ದೇಶಕ್ಕಾಗಿ ಸಿಪಿಸಿ/ ಎಫ್‌ಪಿಓ ಮೂಲಕ :
ಅಧಿಕೃತಗೊಳಿಸಲಾದ ವ್ಯಕ್ತಿಯ ಹೆಸರು ಮತ್ತು ಪದನಾಮ.

(3) ಎ) ಅರ್ಜಿದಾರನು ಸಿಪಿಸಿ ಆಗಿದ್ದರೆ, ಕಂಪನಿಗಳ ಅಧಿನಿಯಮ,:
1956ರ ಅಡಿಯಲ್ಲಿ ನೋಂದಾಯಿಸಲಾದ ದಿನಾಂಕದೊಂದಿಗೆ
ನೋಂದಣಿ ಸಂಖ್ಯೆ (ಪ್ರತಿಯನ್ನು ಲಗತ್ತಿಸುವುದು).
ಬಿ) ಅರ್ಜಿದಾರನು ಎಫ್‌ಪಿಓ ಆಗಿದ್ದರೆ, ಕಂಪನಿಗಳ ಅಧಿನಿಯಮ,:
2013ರ ಅಡಿಯಲ್ಲಿ ನೋಂದಾಯಿಸಲಾದ ದಿನಾಂಕದೊಂದಿಗೆ
ನೋಂದಣಿ ಸಂಖ್ಯೆ (ಪ್ರತಿಯನ್ನು ಲಗತ್ತಿಸುವುದು).

(4) ಸಿಪಿಸಿ/ ಎಫ್‌ಪಿಓ ವನ್ನು ಯಾವುದೇ ಅಬಕಾರಿ ಅಪರಾಧಿಯೆಂದು :
ಅಥವಾ ಯಾವುದೇ ಕ್ರಿಮಿನಲ್ ಅಪರಾಧಿಯೆಂದು ನಿರ್ಣಯಿಸಲಾಗಿದೆಯೇ
ಮತ್ತು ಮೂರು ವರ್ಷಗಳಿಗಿಂತ ಹೆಚ್ಚಿನ ಕಾರಾವಾಸ ಶಿಕ್ಷೆ ವಿಧಿಸಲಾಗಿದೆಯೇ.

(5) ಸಿಪಿಸಿ/ ಎಫ್‌ಪಿಓನ ವಿರುದ್ಧ ಯಾವುದೇ ಅಬಕಾರಿ ಇತ್ಯರ್ಥಗಳು:
ಬಾಕಿ ಉಳಿದಿದೆವೆಯೇ ಹಾಗಿದ್ದಲ್ಲಿ, ರಸೀದಿ ಸಂಖ್ಯೆ ಮತ್ತು
ದಿನಾಂಕದೊಂದಿಗೆ ಇದನ್ನು ಸಂಪೂರ್ಣವಾಗಿ ನಿರ್ವಹಿಸಲಾಗಿದೆಯೇ.

(6) ಸಿಪಿಸಿ/ ಎಫ್‌ಪಿಓ ಮೂಲಕ ನಿಯೋಜಿತರಾದ ನೀರಾ ತಂತ್ರಜ್ಞರ ಸಂಖ್ಯೆ.:

(7) ನೀರಾ ಇಳಿಸುವುದಕ್ಕಾಗಿ ಲಭ್ಯವಿರುವ ತೆಂಗಿನ ಮರಗಳ ಒಟ್ಟು
ಸಂಖ್ಯೆಯೊಂದಿಗೆ ಸಿಪಿಸಿ/ ಎಫ್‌ಪಿಓನಲ್ಲಿನ ತೆಂಗು ಬೆಳೆಗಾರರ ಸಂಖ್ಯೆ.

(8) ತೋಟಗಾರಿಕೆ ಇಲಾಖೆ/ ತೆಂಗು ಅಭಿವೃದ್ಧಿ ಮಂಡಳಿಯ ಶಿಫಾರಸ್ಸು :
(ಪ್ರತಿಯನ್ನು ಲಗತ್ತಿಸುವುದು)

### ಘೋಷಣೆ

ನಾನು/ ನಾವು ಮೇಲೆ ಒದಗಿಸಲಾದ ಮಾಹಿತಿಯು ನನ್ನ ತಿಳುವಳಿಕೆ ಮತ್ತು ನಂಬಿಕೆಯ ಮಟ್ಟಿಗೆ ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ:
ದಿನಾಂಕ:

ಸಿಪಿಸಿ/ ಎಫ್‌ಪಿಓ ಅಧಿಕೃತಗೊಳಿಸಲಾದ ವ್ಯಕ್ತಿಯ ಹೆಸರು ಮತ್ತು ಸಹಿ.

## ನಮೂನೆ II

(4ನೇ ನಿಯಮದ (2)ನೇ ಉಪ-ನಿಯಮವನ್ನು ನೋಡಿ)

**ನೀರಾ ಇಳಿಸಲು, ಉತ್ಪಾದನೆ, ಸ್ವಾಧೀನ ಮತ್ತು ಸಂಸ್ಕರಣೆ ಮತ್ತು ಮೌಲ್ಯವರ್ಧಿತ ಉತ್ಪನ್ನಗಳ ಉತ್ಪಾದನೆಯ ವಿಶೇಷ ಸೌಲಭ್ಯಗಳಿಗಾಗಿ ಲೈಸನ್ಸ್**

_______________ ಆದ ನಾನು _________________ ಜಿಲ್ಲೆಯ ಅಬಕಾರಿ ಉಪ-ಆಯುಕ್ತರು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ____________ ಏಪ್ರಿಲ್ 1ನೇ ದಿನದಿಂದ ______ ಮಾರ್ಚ್ 31ನೇ ದಿನದವರೆಗಿನ ಅವಧಿಯಲ್ಲಿ ಅನುಸೂಚಿಯಲ್ಲಿ ತೋರಿಸಿರುವಂತೆ ಇರುವ ಕಟ್ಟಡದಲ್ಲಿ ಸಗಟು ಮಾರಾಟ, ನೀರಾ ಇಳಿಸಲು, ಉತ್ಪಾದನೆ, ಸ್ವಾಧೀನ ಮತ್ತು ಸಂಸ್ಕರಣೆಗೆ ಮೌಲ್ಯವರ್ಧಿತ ಉತ್ಪನ್ನಗಳ ಉತ್ಪಾದನೆಗೆ------- ನಿಮಗೆ ಕರ್ನಾಟಕ ಅಬಕಾರಿ (ನೀರಾ) ನಿಯಮಗಳು, 2017ರ ಉಪಬಂಧಗಳ ಅಡಿಯಲ್ಲಿ ಈ ಮೂಲಕ ಲೈಸನ್ಸ್‌ನ್ನು ನೀಡುತ್ತೇನೆ, ಎಂದರೆ:

(1) ನೀರಾ ಇಳಿಸಲು, ಉತ್ಪಾದನೆ, ಸ್ವಾಧೀನ,ಸಂಸ್ಕರಣೆ ಮತ್ತುನೀರಾದಿಂದ ಮೌಲ್ಯವರ್ಧಿತ ಉತ್ಪನ್ನಗಳ ಉತ್ಪಾದನೆಯ ವಿಶೇಷ ಸೌಲಭ್ಯಗಳನ್ನು ಒಳಗೊಂಡಂತೆ ಈ ಲೈಸನ್ಸ್‌ನ ಅಡಿಯಲ್ಲಿ ವಿಶೇಷ ಸೌಲಭ್ಯಗಳು.

(2) ಲೈಸನ್ಸ್‌ದಾರನು ಯಾವುದೇ ವಿಳಂಬ ಮಾಡದೆ ಗುರುತು ಮಾಡುವುದಕ್ಕಾಗಿ ಅನುಮೋದಿಸಲಾದ ಮರಗಳನ್ನು ಗುರುತು ಮಾಡುವ ಅಧಿಕಾರಿಗೆ ತೋರಿಸತಕ್ಕದ್ದು.

(3) ಲೈಸನ್ಸ್‌ದಾರನು ಅಥವಾ ಅವನ ಅಧಿಕೃತ ಪ್ರತಿನಿಧಿಗಳು ಅವರು ನೀರಾ ಇಳಿಸುವುದಕ್ಕೆ ಲೈಸನ್ಸ್‌ಗೆ ಅನುಮತಿ ನೀಡಲಾಗಿರುವ ಮರಗಳ ಸಂಖ್ಯೆಗಿಂತ ಹೆಚ್ಚಿಗೆ ಯಾವುದೇ ಮರದಿಂದ ನೀರಾವನ್ನು ಇಳಿಸತಕ್ಕದ್ದಲ್ಲ.

(4) ಈ ನಿಯಮಗಳಿಗೆ ಅನುಸಾರವಾಗಿ ಅಧಿಕೃತ ಅಧಿಕಾರಿಯು ಮರಗಳನ್ನು ಗುರುತಿಸುವವರೆಗೂ ಈ ಉದ್ದೇಶಕ್ಕಾಗಿ ಕಟ್ಟಿರುವಂಥ ಯಾವುದೇ ಮರದಿಂದ ಅಥವಾ ಯಾವುದೇ ಮಡಿಕೆಯಿಂದ ನೀರಾವನ್ನು ಇಳಿಸತಕ್ಕದಲ್ಲ ಅಥವಾ ನೀರಾವನ್ನು ತೆಗೆಯತಕ್ಕದ್ದಲ್ಲ.

(5) ಲೈಸನ್ಸ್‌ದಾರನು ಒಂದು ನೀರಾ ಸಂಸ್ಕರಣಾ ಘಟಕವನ್ನು ಅಥವಾ ಶೀತಲ ಸರಪಳಿಯನ್ನು (Cold Chain) ಸ್ಥಾಪಿಸತಕ್ಕದ್ದು.

(6) ನೀರಾವನ್ನು ಬೆಳ್ಳಿಗೆ 6.00 ಗಂಟೆಯಿಂದ ಮತ್ತು ಸಂಜೆ 6.00 ಗಂಟೆಯವರೆಗಿನ ಅವಧಿಯಲ್ಲಿ ಮಾತ್ರ ತೆಗೆಯತಕ್ಕದ್ದು.

(7) ಈ ಲೈಸನ್ಸ್‌ನ ಅಡಿಯಲ್ಲಿ ತೆಗೆಯಲಾದ ನೀರಾವನ್ನು ಯಾವುದೇ ಟ್ಯಾಪರ್ ಸೊಸೈಟಿಗೆ (ನೀರಾ ಇಳಿಸುವ ಸಂಘ)ಮಾರಾಟ ಮಾಡತಕ್ಕದ್ದಲ್ಲ.

(8) ಲೈಸನ್ಸ್‌ದಾರನು ತೋಟಗಾರಿಕೆ ಇಲಾಖೆ/ ತೆಂಗು ಅಭಿವೃದ್ಧಿ ಮಂಡಳಿಯಿಂದ ಕಾಲಕಾಲಕ್ಕೆ ನಿಯಮಿಸಬಹುದಾದಂಥ ರಿಜಿಸ್ಟರ್‌ಗಳಲ್ಲಿ ವ್ಯವಹಾರಗಳ ಸರಿಯಾದ ಲೆಕ್ಕಪತ್ರಗಳನ್ನು ಪ್ರತಿದಿನ ನಿರ್ವಹಿಸತಕ್ಕದ್ದು ಮತ್ತು ತೋಟಗಾರಿಕೆ ಇಲಾಖೆ/ ತೆಂಗು ಅಭಿವೃದ್ಧಿ ಮಂಡಳಿ ಮತ್ತು ರಾಜ್ಯ ಅಬಕಾರಿ ಇಲಾಖೆಯು ಕೇಳಬಹುದಾದಂಥ ಮಾಹಿತಿಯನ್ನು ಮತ್ತು ಅಂಕಿ-ಅಂಶಗಳನ್ನು ಒದಗಿಸತಕ್ಕದ್ದು.

(9) ಲೈಸನ್ಸ್‌ದಾರನು ತನ್ನ ಲೈಸನ್ಸ್‌ನ್ನು ಯಾವುದೇ ಸಂದರ್ಭಗಳಲ್ಲಿ ಗುತ್ತಿಗೆಗೆ ನೀಡುವುದಾಗಲೀ, ಮಾರಾಟ ಮಾಡುವುದಾಗಲೀ ಅಥವಾ ಅನ್ಯಥಾ ತನ್ನ ಲೈಸನ್ಸ್‌ನ್ನು ವರ್ಗಾಯಿಸುವುದಾಗಲೀ ಮಾಡತಕ್ಕದ್ದಲ್ಲ.

**ಲೈಸನ್ಸ್ ಪಡೆದಿರುವ ಸ್ಥಳಗಳ ಸರಹದ್ದುಗಳನ್ನು ತೋರಿಸುವ ಅನುಸೂಚಿ**

| ತಾಲೂಕು, ಹಳ್ಳಿ | ಕಟ್ಟಡದ ಸಂಖ್ಯೆ | ಸರಹದ್ದಿನ ಅನುಸಾರ | | | |
|---|---|---|---|---|---|
| | | ಉತ್ತರ | ಪೂರ್ವ | ದಕ್ಷಿಣ | ಪಶ್ಚಿಮ |
| | | | | | |

ಸ್ಥಳ:
ದಿನಾಂಕ: ಅಬಕಾರಿ ಉಪ–ಆಯುಕ್ತರು

## ನಮೂನೆ III

(4ನೇ ನಿಯಮದ (2)ನೇ ಉಪ–ನಿಯಮವನ್ನು ನೋಡಿ)

**ನೀರಾ ವಿತರಣೆಗಾಗಿ/ ನೀರಾದಿಂದ ಮೌಲ್ಯವರ್ಧಿತ ಉತ್ಪನ್ನಗಳಿಗಾಗಿ ಲೈಸನ್ಸ್‌ನ್ನು ಪಡೆದುಕೊಳ್ಳುವುದಕ್ಕಾಗಿ ಅರ್ಜಿ**

(1) ಲೈಸನ್ಸ್‌ಗಾಗಿ ಅರ್ಜಿಯನ್ನು ಸಲ್ಲಿಸುವ ಸಿಪಿಸಿ/ ಎಫ್‌ಪಿಓ ಹೆಸರು :

(2) ಲೈಸನ್ಸ್‌ನ ಉದ್ದೇಶಕ್ಕಾಗಿ ಸಿಪಿಸಿ/ ಎಫ್‌ಪಿಓ ಮೂಲಕ ಅಧಿಕೃತಗೊಳಿಸಲಾದ ವ್ಯಕ್ತಿಯ ಹೆಸರು ಮತ್ತು ಪದನಾಮ :

(3) ಎ) ಅರ್ಜಿದಾರನು ಸಿಪಿಸಿ ಆಗಿದ್ದರೆ, ಕಂಪನಿಗಳ ಅಧಿನಿಯಮ, 1956ರ ಅಡಿಯಲ್ಲಿ ನೋಂದಾಯಿಸಲಾದ ದಿನಾಂಕದೊಂದಿಗೆ ನೋಂದಣಿ ಸಂಖ್ಯೆ (ಪ್ರತಿಯನ್ನು ಲಗತ್ತಿಸುವುದು) :

ಬಿ) ಅರ್ಜಿದಾರನು ಎಫ್‌ಪಿಓ ಆಗಿದ್ದರೆ, ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ನೋಂದಾಯಿಸಲಾದ ದಿನಾಂಕದೊಂದಿಗೆ ನೋಂದಣಿ ಸಂಖ್ಯೆ (ಪ್ರತಿಯನ್ನು ಲಗತ್ತಿಸುವುದು)

(4) ಸಿಪಿಸಿ/ ಎಫ್‌ಪಿಓ ವನ್ನು ಯಾವುದೇ ಅಬಕಾರಿ ಅಪರಾಧಿಯೆಂದು ಅಥವಾ ಯಾವುದೇ ಕ್ರಿಮಿನಲ್ ಅಪರಾಧಿಯೆಂದು ನಿರ್ಣಯಿಸಲಾಗಿದೆಯೇ ಮತ್ತು ಮೂರು ವರ್ಷಗಳಿಗಿಂತ ಹೆಚ್ಚಿನ ಕಾರಾವಾಸ ಶಿಕ್ಷೆ ವಿಧಿಸಲಾಗಿದೆಯೇ :

(5) ಸಿಪಿಸಿ/ ಎಫ್‌ಪಿಓ ವಿರುದ್ಧದ ಯಾವುದೇ ಅಬಕಾರಿ ಇತ್ಯರ್ಥಗಳು ಬಾಕಿ ಉಳಿದಿವೆಯೇ, ಹಾಗಿದ್ದಲ್ಲಿ, ರಸೀದಿ ಸಂಖ್ಯೆ ಮತ್ತು ದಿನಾಂಕದೊಂದಿಗೆ ಇದನ್ನು ಸಂಪೂರ್ಣವಾಗಿ ಖುಲಾಸೆ ಮಾಡಲಾಗಿದೆಯೇ. :

(6) ವಿತರಕರು ಉತ್ಪನ್ನಗಳನ್ನು ಸಂಗ್ರಹಿಸಿಡುವುದಕ್ಕೆ, ಉದ್ದೇಶಿಸಿರುವ ಕೊಠಡಿ/ ಕಟ್ಟಡವನ್ನು ಸೂಚಿಸುವುದು :

(7) ಸಂಗ್ರಹಣೆಯ ಖರೀದಿಗೆ ಮತ್ತು ವಿತರಣೆಗೆ ಉದ್ದೇಶಿಸಲಾದ ವಿತರಕರಿಂದ ನೀರಾ/ ಮೌಲ್ಯವರ್ಧಿತ ಉತ್ಪನ್ನಗಳ ತಯಾರಕರ ಶಿಫಾರಸ್ಸು ಮತ್ತು ಅವರುಗಳ ನಡುವೆ ಮಾಡಿಕೊಂಡ ಒಪ್ಪಂದದ ಪ್ರತಿಯನ್ನು ಒದಗಿಸುವುದು. :

**ಘೋಷಣೆ**

ನಾನು/ ನಾವು ಮೇಲೆ ಒದಗಿಸಲಾದ ಮಾಹಿತಿಯು ನನ್ನ ತಿಳುವಳಿಕೆ ಮತ್ತು ನಂಬಿಕೆಯ ಮಟ್ಟಿಗೆ ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ:
ದಿನಾಂಕ:

ಸಿಪಿಸಿ/ಎಫ್‌ಪಿಓ ಅಧಿಕೃತಗೊಳಿಸಲಾದ ವ್ಯಕ್ತಿಯ ಹೆಸರು ಮತ್ತು ಸಹಿ.

## ನಮೂನೆ IV

(4ನೇ ನಿಯಮದ (2)ನೇ ಉಪ-ನಿಯಮವನ್ನು ನೋಡಿ)

**ನೀರಾ/ ಮೌಲ್ಯವರ್ಧಿತ ಉತ್ಪನ್ನಗಳ ವಿತರಣೆಯ ವಿಶೇಷ ಸೌಲಭ್ಯಕ್ಕಾಗಿ ಲೈಸನ್ಸ್**

____________ ಆದ ನಾನು _______________ ಜಿಲ್ಲೆಯ ಅಬಕಾರಿ ಉಪ-ಆಯುಕ್ತನಾಗಿದ್ದು, ಈ ಕೆಳಕಂಡ ಷರತ್ತುಗಳಿಗೊಳಪಟ್ಟು _____________ ಏಪ್ರಿಲ್ 1ನೇ ದಿನದಿಂದ ____________ ಮಾರ್ಚ್ 31ನೇ ದಿನದವರೆಗಿನ ಅವಧಿಯಲ್ಲಿ ಅನುಸೂಚಿಯಲ್ಲಿ ತೋರಿಸಿರುವಂತೆ ಇರುವ ಕಟ್ಟಡದಲ್ಲಿ ಮಾರಾಟ/ ರಫ್ತು ಮಾಡುವ ಉದ್ದೇಶಕ್ಕಾಗಿ ಸಗಟು ಮಾರಾಟಕ್ಕೆ ನೀರಾ ಸಂಗ್ರಹಣೆ ಮತ್ತು ವಿತರಣೆ/ ನೀರಾದಿಂದ ಮೌಲ್ಯವರ್ಧಿತ ಉತ್ಪನ್ನಗಳಿಗೆ ___________________ ನಿಮಗೆ ಕರ್ನಾಟಕ ಅಬಕಾರಿ (ನೀರಾ) ನಿಯಮಗಳು, 2017ರ ಉಪಬಂಧಗಳ ಅಡಿಯಲ್ಲಿ, ಈ ಮೂಲಕ ಲೈಸನ್ಸ್‌ನ್ನು ನೀಡುತ್ತೇನೆ, ಎಂದರೆ:

(1) ಈ ಲೈಸನ್ಸ್‌ನ ಅಡಿಯಲ್ಲಿ ವಿಶೇಷ ಸೌಲಭ್ಯವು ನೀರಾ ಮತ್ತು ನೀರಾದಿಂದ ಮೌಲ್ಯವರ್ಧಿತ ಉತ್ಪನ್ನಗಳ ಸಂಗ್ರಹಣೆ, ವಿತರಣೆ ಮತ್ತು ಮಾರಾಟದ ವಿಶೇಷ ಸೌಲಭ್ಯವನ್ನು ಒಳಗೊಳ್ಳುವುದು.

(2) ಲೈಸನ್ಸ್‌ದಾರನು ತೋಟಗಾರಿಕೆ ಇಲಾಖೆ/ ತೆಂಗು ಅಭಿವೃದ್ಧಿ ಮಂಡಳಿಯಿಂದ ಕಾಲಕಾಲಕ್ಕೆ ನಿಯಮಿಸಬಹುದಾದಂಥ ರಿಜಿಸ್ಟರ್‌ಗಳಲ್ಲಿ ವ್ಯವಹಾರಗಳ ಸರಿಯಾದ ಲೆಕ್ಕಪತ್ರಗಳನ್ನು ಪ್ರತಿದಿನ ನಿರ್ವಹಿಸತಕ್ಕದ್ದು ಮತ್ತು ತೋಟಗಾರಿಕೆ ಇಲಾಖೆ/ ತೆಂಗು ಅಭಿವೃದ್ಧಿ ಮಂಡಳಿ ಮತ್ತು ರಾಜ್ಯ ಅಬಕಾರಿ ಇಲಾಖೆಯು ಕೇಳಬಹುದಾದಂಥ ಮಾಹಿತಿಯನ್ನು ಮತ್ತು ಅಂಕಿ-ಅಂಶಗಳನ್ನು ಒದಗಿಸತಕ್ಕದ್ದು.

(3) ಉತ್ಪನ್ನವು ಯಾವುದೇ ರೀತಿಯ ಕಲಬೆರೆಕೆಗೆ ಒಳಗಾಗತಕ್ಕದ್ದಲ್ಲ.

(4) ಲೈಸನ್ಸ್‌ದಾರನು ತನ್ನ ಲೈಸನ್ಸ್‌ನ್ನು ಯಾವುದೇ ಸಂದರ್ಭಗಳಲ್ಲಿ ಗುತ್ತಿಗೆಗೆ ನೀಡುವುದಾಗಲೀ, ಮಾರಾಟ ಮಾಡುವುದಾಗಲೀ ಅಥವಾ ಅನ್ಯಥಾ ತನ್ನ ಲೈಸನ್ಸ್‌ನ್ನು ವರ್ಗಾಯಿಸುವುದಾಗಲೀ ಮಾಡತಕ್ಕದ್ದಲ್ಲ.

**ಲೈಸನ್ಸ್ ಪಡೆದಿರುವ ಸ್ಥಳಗಳ ಸರಹದ್ದುಗಳನ್ನು ತೋರಿಸುವ ಅನುಸೂಚಿ**

| ತಾಲೂಕು, ಗ್ರಾಮ | ಕಟ್ಟಡದ ಸಂಖ್ಯೆ | ಸರಹದ್ದಿನ ಅನುಸಾರ | | | |
|---|---|---|---|---|---|
| | | ಉತ್ತರಕ್ಕೆ | ಪೂರ್ವಕ್ಕೆ | ದಕ್ಷಿಣಕ್ಕೆ | ಪಶ್ಚಿಮಕ್ಕೆ |
| | | | | | |

ಸ್ಥಳ:
ದಿನಾಂಕ: ಅಬಕಾರಿ ಉಪ-ಆಯುಕ್ತರು

The above translation of the Karnataka Excise Act, 1965 (Karnataka Act 21 of 1966) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ. ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ